# ಕರ್ನಾಟಕ ವಿಧಾನ ಸಭೆ

| | | | |
|---|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 383 |
| 02. | ಸದಸ್ಯರ ಹೆಸರು | : | ಡಾ॥ ಭರತ್ ಶೆಟ್ಟಿ. ವೈ (ಮಂಗಳೂರು ನಗರ ಉತ್ತರ) |
| 03. | ಉತ್ತರಿಸುವ ದಿನಾಂಕ | : | 02.02.2021 |
| 04. | ಉತ್ತರಿಸುವ ಸಚಿವರು | : | ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು, ಮಂಗಳೂರು ಹಾಗೂ ಉಡುಪಿ ಜಿಲ್ಲೆಗಳಲ್ಲಿ ತುಳು ಭಾಷಿಕರನ್ನು ಪೊಲೀಸ್ ಇಲಾಖೆಯಲ್ಲಿ ಭರ್ತಿ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;.. | ಇರುವುದಿಲ್ಲ. |
| ಆ) | ಈ ಮೂರು ಜಿಲ್ಲೆಗಳಲ್ಲಿ ತುಳು ಭಾಷಿಕರು ಹೆಚ್ಚಿರುವುದರಿಂದ ಶೇ. 60% ರಷ್ಟು ಈ ಮೂರು ಜಿಲ್ಲೆಯ ತುಳು ಭಾಷಿಕರನ್ನು ಹಾಗೂ ಶೇ. 40% ಬೇರೆ ಜಿಲ್ಲೆಯವರನ್ನು ನೇಮಕ ಮಾಡಿ ಕೊಳ್ಳಲು ಸರ್ಕಾರ ಕ್ರಮ ವಹಿಸುವುದೇ? (ವಿವರ ನೀಡುವುದು) | ಪೊಲೀಸ್ ಇಲಾಖೆಯಲ್ಲಿನ ಪೊಲೀಸ್ ಸಬ್-ಇನ್ಸ್‌ಪೆಕ್ಟರ್, ಮತ್ತು ಪೊಲೀಸ್ ಕಾನ್‌ಸ್ಟೇಬಲ್ ವೃಂದದ ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಕೈಗೊಳ್ಳಲಾಗುತ್ತಿದೆ.<br>ಈ ನಿಯಮಗಳಲ್ಲಿ ಬಾಷಾವಾರು ಅರ್ಹತೆ ಅನುಸಾರ ಆಯ್ಕೆಗೆ ಅವಕಾಶ ಕಲ್ಪಿಸಲಾಗಿರುವುದಿಲ್ಲ. ಬದಲಾಗಿ ರಾಜ್ಯದ ಯಾವುದೇ ಜಿಲೆಗಳಲ್ಲಿನ ಅಭ್ಯರ್ಥಿಗಳು ಯಾವುದೇ ಜಿಲ್ಲೆ / ನಗರ ಘಟಕಗಳಿಗೆ ಆಯ್ಕೆಯಾಗಲು ಅರ್ಹತೆಗಳನ್ನು ಹೊಂದಿದ್ದು ಅದರಂತೆ ಕೊಡಗು, ಮಂಗಳೂರು, ಉಡುಪಿ ಜಿಲ್ಲೆಗಳಲ್ಲಿನ ತುಳು ಭಾಷಿಕರು ಸಹ ಸದರಿ ಮೂರು ಜಿಲ್ಲೆಗಳಲ್ಲದೆ ರಾಜ್ಯದ ಇತರೆ ಜಿಲ್ಲೆಗಳಲ್ಲಿಯೂ ಆಯ್ಕೆಗೆ ಅವಕಾಶವನ್ನು ಹೊಂದಿರುತ್ತಾರೆ. |

ಒಇ/09/ಪಿಪಿಎಸ್/2021

(ಬಸವರಾಜ. ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನೆ ಸಚಿವರು

## ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 388
ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸುವ ದಿನಾಂಕ : 02.02.2021
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ ಸಂ: | ಪ್ರಶ್ನೆ | ಉತ್ತರ |
|---|---|---|
| ಅ) | ಕೆ.ಬಿ.ಜೆ.ಎನ್.ಎಲ್. ವ್ಯಾಪ್ತಿಯ ಹೋರ್ತಿ–ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆಯ ರೂಪುರೇಷೆಗಳೇನು; (ವಿವರ ಒದಗಿಸುವುದು) | ಹೊರ್ತಿ–ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆಯನ್ನು ಇಂಡಿ ತಾಲ್ಲೂಕಿನ ಸುಮಾರು 28,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು 2019–20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸರ್ಕಾರವು ಘೋಷಿಸಲಾಗಿರುತ್ತದೆ. ಅದರನ್ವಯ, ಇಂಡಿ ತಾಲ್ಲೂಕಿನ ನೀರಾವರಿ ವಂಚಿತ ಪ್ರದೇಶಕ್ಕೆ ಪೈಪ್‌ಲೈನ್ ಮುಖಾಂತರ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ನೀರನ್ನು ಎತ್ತಿ ನೀರಾವರಿಗೆ ಒಳಪಡಿಸುವ ಹೊರ್ತಿ–ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲು ರೂ.2639.60 ಕೋಟಿ (2018–19ನೇ ಸಾಲಿನ ದರಪಟ್ಟಿರನ್ವಯ) ಅಂದಾಜು ಮೊತ್ತಕ್ಕೆ ವಿಸ್ತೃತ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿರುತ್ತದೆ. |
| ಆ) | ಈ ಯೋಜನೆಯಿಂದ ಎಷ್ಟು ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಬಹುದಾಗಿದೆ; ಈ ಯೋಜನೆಯ ಸೌಲಭ್ಯವು ಯಾವ ಯಾವ ಹಳ್ಳಿಗಳಿಗೆ ದೊರಕಲಿದೆ; (ವಿವರ ಒದಗಿಸುವುದು) | ಈ ಯೋಜನೆಯಿಂದ ಇಂಡಿ ತಾಲ್ಲೂಕಿನ ಸುಮಾರು 28,000 ಹೆಕ್ಟೇರ್ ಪ್ರದೇಶಕ್ಕೆ 3.245 ಟಿಎಂಸಿ ನೀರಿನ ಹಂಚಿಕೆಯೊಂದಿಗೆ ಪೈಪ್‌ಲೈನ್ ಮುಖಾಂತರ ನೀರಾವರಿ ಸೌಲಭ್ಯ ಒದಗಿಸಲು ಯೋಜನೆ ರೂಪಿಸಲಾಗಿದೆ.<br><br>ಯೋಜನೆಯ ವಿಸ್ತೃತ ಸರ್ವೆ ತನಿಖಾ ಕಾರ್ಯ ಕೈಗೊಂಡ ನಂತರ ನಿಖರವಾಗಿ ನೀರಾವರಿ ಸೌಲಭ್ಯಕ್ಕೆ ಒಳಪಡುವ ಹಳ್ಳಿಗಳ ವಿವರಗಳು ದೊರಕಲಿದೆ. |
| ಇ) | ಈ ಯೋಜನೆಗೆ ನಿಗದಿಪಡಿಸಿರುವ ನೀರಿನ ಪ್ರಮಾಣ ಎಷ್ಟು; ಈಗಾಗಲೇ ಕಾಯ್ದಿರಿಸಿರುವ ಅನುದಾನ ಎಷ್ಟು; | |
| ಈ) | ಈ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ; ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು; | ಕೃಷ್ಣಾ ಭಾಗ್ಯ ಜಲ ನಿಗಮದ ತಾಂತ್ರಿಕ ಉಪ ಸಮಿತಿಯ ಶಿಫಾರಸ್ಸಿನ ಮೇರೆಗೆ ದಿನಾಂಕ:9/7/2019ರಂದು ಜರುಗಿದ ನಿಗಮದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಪ್ರಸ್ತಾಪಿತ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಪಡೆಯಲು ತೀರುವಳಿ ನೀಡಿರುತ್ತದೆ. |
| ಉ) | 2020–21ನೇ ಸಾಲಿನಲ್ಲಿ ಈ ಯೋಜನೆಗೆ ಕಾಯ್ದಿರಿಸುವ ಅನುದಾನ ಎಷ್ಟು; (ವಿವರ ಒದಗಿಸುವುದು) | ಪ್ರಸ್ತಾಪಿತ ಯೋಜನೆಯನ್ನು 2019–20ರ ಆಯವ್ಯಯ ಭಾಷಣದಲ್ಲಿ ರೂ.250.00 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಘೋಷಿಸಿದೆ.. |
| ಊ) | ಈ ಯೋಜನೆಯನ್ನು ತ್ವರಿತಗತಿಯಲ್ಲಿ ಕೈಗೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ಒದಗಿಸುವುದು) | ಹೊರ್ತಿ–ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆಯನ್ನು ಇಂಡಿ ತಾಲ್ಲೂಕಿನ ಸುಮಾರು 28,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು 2019–20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸರ್ಕಾರವು ಘೋಷಿಸಲಾಗಿರುತ್ತದೆ. ಅದರನ್ವಯ, ಇಂಡಿ ತಾಲ್ಲೂಕಿನ ನೀರಾವರಿ ವಂಚಿತ ಪ್ರದೇಶಕ್ಕೆ ಪೈಪ್‌ಲೈನ್ ಮುಖಾಂತರ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ನೀರನ್ನು ಎತ್ತಿ ನೀರಾವರಿಗೆ ಒಳಪಡಿಸುವ ಹೊರ್ತಿ–ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲು ರೂ.2639.60 ಕೋಟಿ (2018–19ನೇ ಸಾಲಿನ ದರಪಟ್ಟಿರನ್ವಯ) ಅಂದಾಜು ಮೊತ್ತಕ್ಕೆ ವಿಸ್ತೃತ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿರುತ್ತದೆ. ಅನುಮೋದನೆ ಪಡೆದು ತ್ವರಿತವಾಗಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ. |

ಸಂಖ್ಯೆ: ಜಸಂಇ 6 ಡಬ್ಲ್ಯೂಬಿಎಂ 2021

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 389 |
| ಸದಸ್ಯರ ಹೆಸರು | : | ಶ್ರೀ ರಂಗನಾಥ್ ಹೆಚ್.ಡಿ. ಡಾ॥ (ಕುಣಿಗಲ್) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ಕುಣಿಗಲ್ ತಾಲ್ಲೂಕಿನ ಅಂಚೇಪಾಳ್ಯದಲ್ಲಿರುವ ಕೆಪಿಟಿಸಿಎಲ್ ಘಟಕವನ್ನು ಏಕಾಏಕಿ ಬೇರೆ ಕಡೆಗೆ ವರ್ಗಾವಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕುಣಿಗಲ್ ತಾಲ್ಲೂಕಿನಲ್ಲಿರುವ 220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಅಂಚೇಪಾಳ್ಯ ಘಟಕವನ್ನು ಸ್ಥಳಾಂತರಿಸಿರುವುದಿಲ್ಲ. ಬದಲಾಗಿ, ಸದರಿ ವಿದ್ಯುತ್ ಕೇಂದ್ರಕ್ಕೆ ಮಂಜೂರಾಗಿದ್ದ ಒಂದು ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಹುದ್ದೆಯನ್ನು ಮಾತ್ರ ಸ್ಥಳಾಂತರಿಸಲಾಗಿದ್ದು, ಸದರಿ ವಿದ್ಯುತ್ ಕೇಂದ್ರವು ಅಸ್ತಿತ್ವದಲ್ಲಿದ್ದು, ಕಾರ್ಯನಿರ್ವಹಿಸುತ್ತಿರುತ್ತದೆ. |
| ಆ) | ಕುಣಿಗಲ್ ತಾಲ್ಲೂಕು ರಾಜ್ಯದ ಹಿಂದುಳಿದ ತಾಲ್ಲೂಕಿನಲ್ಲೊಂದಾಗಿದ್ದು, ವಿದ್ಯುತ್ ಅಭಾವ ಜಾಸ್ತಿ ಇದ್ದು, ಅಲ್ಲದೆ ಇಲ್ಲಿನ ಕೈಗಾರಿಕಾ ಪ್ರದೇಶಕ್ಕೆ ಹೆಚ್ಚಿನ ವಿದ್ಯುತ್ ಅವಶ್ಯಕತೆ ಇರುವುದರಿಂದ ಸ್ಥಳಾಂತರಗೊಂಡಿರುವ ಕೆಪಿಟಿಸಿಎಲ್ ಘಟಕವನ್ನು ಅಂಚೇಪಾಳ್ಯದಲ್ಲಿಯೇ ಮುಂದುವರೆಸಲು ಸರ್ಕಾರಕ್ಕಿರುವ ತೊಂದರೆಗಳೇನು? | ರಾಜ್ಯದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿದಲ್ಲಿ ಹಲವು 220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರಗಳು ಅಸ್ತಿತ್ವದಲ್ಲಿದ್ದು, ಇವುಗಳಲ್ಲಿ ಕೆಲವೇ ವಿದ್ಯುತ್ ಕೇಂದ್ರಗಳಿಗೆ ಮಾತ್ರ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಹುದ್ದೆಯನ್ನು ಬಹಳ ಹಿಂದೆ ಮಂಜೂರು ಮಾಡಲಾಗಿತ್ತು.<br><br>ಆದರೆ, ಪ್ರಸ್ತುತ ಸಂದರ್ಭಗಳಲ್ಲಿ 220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರಗಳು ಮತ್ತು ಅವುಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯುತ್ ಕೇಂದ್ರಗಳ ನಿರ್ವಹಣೆಯ ಮೇಲ್ವಿಚಾರಣಾ ಕಾರ್ಯಗಳನ್ನು ನಿರ್ವಹಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರನ್ನು 'ನೋಡಲ್ ಅಧಿಕಾರಿ' ಗಳನ್ನಾಗಿ ನಿಗಮವು ನೇಮಿಸಿರುವುದರಿಂದ, ಈ ಹಿಂದೆ ನಿಗಮವು 220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರಗಳಿಗೆ ಮಂಜೂರು ಮಾಡಿದ್ದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಹುದ್ದೆಗಳನ್ನು ಅತ್ಯಾವಶ್ಯಕವಿರುವ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಕಛೇರಿಗಳಿಗೆ ಸ್ಥಳಾಂತರಿಸಲಾಗುತ್ತಿರುತ್ತದೆ. |

...2

# ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 390
2. ಸದಸ್ಯರ ಹೆಸರು : ಡಾ॥ ರಂಗನಾಥ್ ಹೆಚ್.ಡಿ.
3. ಉತ್ತರಿಸಬೇಕಾದ ದಿನಾಂಕ : 02-02-2021
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಹೇಮಾವತಿ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನ ಪಡಿಸಿಕೊಂಡಿರುವ ಜಮೀನಿಗೆ ಭೂ-ಪರಿಹಾರ ಪಾವತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಹಾಗೂ ಪರಿಹಾರ ಪಾವತಿಯಲ್ಲಿ ವಿಳಂಬ ಉಂಟಾಗಲು ಕಾರಣಗಳೇನು ; | ಕಾಲುವೆ ನಿರ್ಮಾಣಕ್ಕಾಗಿ ಅಗತ್ಯವಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಅನುದಾನದ ಲಭ್ಯತೆಯ ಮೇರೆಗೆ ಭೂ ಪರಿಹಾರ ಮೊತ್ತವನ್ನು ರೈತರಿಗೆ ಪಾವತಿಸಲು ಕ್ರಮ ವಹಿಸಲಾಗುತ್ತಿದೆ.<br><br>ರೈತರು ಭೂಪರಿಹಾರ ವಿತರಿಸಲು ಅವಶ್ಯಕ ಭೂ ದಾಖಲಾತಿಗಳನ್ನು ಹಾಜರುಪಡಿಸದ ಪ್ರಕರಣಗಳಲ್ಲಿ ಭೂ ಪರಿಹಾರ ಪಾವತಿಯಲ್ಲಿ ವಿಳಂಬ ಉಂಟಾಗಿರುತ್ತದೆ. |
| ಆ | ಕಳೆದ 15 ವರ್ಷದಿಂದಲೂ ಪರಿಹಾರ ಮೊತ್ತ ಪಾವತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಳೆದ 06 ವರ್ಷಗಳಲ್ಲಿ 399 ಎಕರೆ 13¾ ಗುಂಟೆ ವಿಸ್ತೀರ್ಣ ಒಟ್ಟು 39 ಪ್ರಕರಣಗಳಲ್ಲಿ ಅವಾರ್ಡ್ ಅನುಮೋದನೆಯಾಗಿದ್ದು, ಪರಿಹಾರದ ಮೊತ್ತ ರೂ.61.74 ಕೋಟಿಗಳಾಗಿದ್ದು, ಈ ಪೈಕಿ ರೂ.38.83 ಕೋಟಿಗಳ ಪರಿಹಾರ ಪಾವತಿಸಿದ್ದು, ರೂ.22.90 ಕೋಟಿಗಳ ಪರಿಹಾರ ಪಾವತಿಗೆ ಬಾಕಿ ಇರುತ್ತದೆ. |
| ಇ | ಜಮೀನು ಕಳೆದುಕೊಂಡ ರೈತರಿಗೆ ಭೂ ಪರಿಹಾರ ಮೊತ್ತವನ್ನು ಪೂರ್ಣವಾಗಿ ಯಾವಾಗ ನೀಡಲಾಗುವುದು ? | ಅನುದಾನದ ಲಭ್ಯತೆಯ ಮೇರೆಗೆ ತ್ವರಿತವಾಗಿ ರೈತರಿಗೆ ಪರಿಹಾರವನ್ನು ವಿತರಿಸಲು ಅಗತ್ಯ ಕ್ರಮ ವಹಿಸಲಾಗುವುದು. |

*ಸಂಖ್ಯೆ:ಜಸಂಇ 07 ಎಲ್‌ಎಲ್‌ಎ 2021*

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 392
2. ಸದಸ್ಯರ ಹೆಸರು : ಡಾ॥ ರಂಗನಾಥ್ ಹೆಚ್.ಡಿ.
3. ಉತ್ತರಿಸಬೇಕಾದ ದಿನಾಂಕ : 02-02-2021
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಗೊರೂರು ಜಲಾಶಯದಿಂದ ಕುಣಿಗಲ್‌ಗೆ 3.10 TMC ನೀರು ಸರಬರಾಜಿಗೆ ಲಿಂಕ್ ಕೆನಾಲ್ ಅವಶ್ಯಕತೆ ಇದ್ದು, ಈ ಕಾಮಗಾರಿಯನ್ನು ಯಾವ ಕಾರಣಕ್ಕಾಗಿ ತಡೆಹಿಡಿಯಲಾಗಿದೆ; | ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ 70 ಕಿ.ಮೀ. ನಿಂದ 165.60 ಕಿ.ಮೀ.ಗೆ ಸಂಪರ್ಕ ಕಲ್ಪಿಸುವ ಕಾಮಗಾರಿಯ (ಲಿಂಕ್ ಕೆನಾಲ್) ಬದಲಾಗಿ ತುಮಕೂರು ಶಾಖಾ ನಾಲೆಯ ಸರಪಳಿ 70.360 ಕಿ.ಮೀ. ರಿಂದ 166.90 ಕಿ.ಮೀ. ವರೆಗೆ ಆಧುನೀಕರಣ ಮಾಡುವ ರೂ.550.00 ಕೋಟಿಗಳ ಮೊತ್ತದ ಕಾಮಗಾರಿಗೆ ದಿನಾಂಕ:18-03-2020 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಮುಂದೆ ಅನುಷ್ಠಾನಗೊಳ್ಳಲಿರುವ ಆಧುನೀಕರಣ ಕಾಮಗಾರಿಯಿಂದ ಈ ಭಾಗದ ಅಚ್ಚುಕಟ್ಟು ಪ್ರದೇಶವೂ ಸೇರಿದಂತೆ, ತುಮಕೂರು ಶಾಖಾ ನಾಲೆಯ ಕೊನೆಯ ಭಾಗದ ಅಚ್ಚುಕಟ್ಟಿಗೆ ಸಮರ್ಪಕವಾಗಿ ನೀರನ್ನು ಹರಿಸಬಹುದಾಗಿದೆ. |
| ಆ | ಗೊರೂರು ಜಲಾಶಯದಿಂದ ಕುಣಿಗಲ್ ತಾಲ್ಲೂಕಿಗೆ ಹಂಚಿಕೆಯಾಗಿರುವ ನೀರನ್ನು (3100 MCFT) ತೆಗೆದುಕೊಂಡು ಹೋಗಲು ತೊಂದರೆಯುಂಟಾಗಿರುವುದರಿಂದ ಹಾಗೂ ಪರ್ಯಾಯ ಮಾರ್ಗವಿಲ್ಲದಿರುವುದರಿಂದ, ಲಿಂಕ್ ಕೆನಾಲ್ ಕಾಮಗಾರಿ ಮುಂದುವರೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು; | ತುಮಕೂರು ಶಾಖಾ ನಾಲೆಯಿಂದ ಕುಣಿಗಲ್ ತಾಲ್ಲೂಕಿನ 27625.54 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ 2405.43 ಎಂ.ಸಿ.ಎಫ್.ಟಿ ನೀರನ್ನು ಒದಗಿಸಲಾಗುತ್ತಿದೆ. ಕುಣಿಗಲ್ ದೊಡ್ಡಕೆರೆಗೆ ಹಂಚಿಕೆಯಾಗಿರುವ 464.68 ಎಂ.ಸಿ.ಎಫ್.ಟಿ ನೀರನ್ನು ಕುಡಿಯುವ ನೀರಿಗಾಗಿ ಒದಗಿಸಲಾಗುತ್ತಿದ್ದು, ಶ್ರೀರಂಗ ಕುಡಿಯುವ ನೀರಿನ ಯೋಜನೆಯಿಂದ ಕುಣಿಗಲ್ ತಾಲ್ಲೂಕಿನ 17 ಕೆರೆಗಳಿಗೆ ಕುಡಿಯುವ ನೀರಿಗಾಗಿ 167.03 ಎಂ.ಸಿ.ಎಫ್.ಟಿ ನೀರನ್ನು ತುಂಬಿಸುವ ಯೋಜನೆಯನ್ನು ರೂಪಿಸಲಾಗಿದೆ. ಒಟ್ಟಾರೆಯಾಗಿ ಕುಣಿಗಲ್ ತಾಲ್ಲೂಕಿಗೆ 3037.14 ಎಂ.ಸಿ.ಎಫ್.ಟಿ. ನೀರನ್ನು ಹರಿಸಲು ಉದ್ದೇಶಿಸಲಾಗಿದೆ. |
| ಇ | ಪ್ರಸಕ್ತ ಸಾಲಿನಲ್ಲಿ ಲಿಂಕ್ ಕೆನಾಲ್ ನಿರ್ಮಾಣ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಲಾಗುವುದೇ ? | ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. |

*ಸಂಖ್ಯೆ:ಜಸಂಇ 05 ಎಸ್‌ಎಲ್‌ಎ 2021*

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 396
2. ಸದಸ್ಯರ ಹೆಸರು : ಡಾ॥ ಯತೀಂದ್ರ ಸಿದ್ದರಾಮಯ್ಯ
3. ಉತ್ತರಿಸಬೇಕಾದ ದಿನಾಂಕ : 02-02-2021
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ವರುಣಾ ವಿಧಾನಸಭಾ ಕ್ಷೇತ್ರದಲ್ಲಿ ಸುತ್ತೂರು ಬಳಿಯ ಕಬಿನಿ ನದಿಯಿಂದ ತಗಡೂರು-ಉಮ್ಮತ್ತೂರು ಮತ್ತು ಇತರೆ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಯು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು.<br><br>2018 ಹಾಗೂ 2019 ರಲ್ಲಿ ಕಬಿನಿ ನದಿಯಲ್ಲಿ ಉಂಟಾದ ಅತಿ ಹೆಚ್ಚು ಪ್ರವಾಹದಿಂದ ಮತ್ತು ಏರುಕೊಳವೆಯ ಮಾರ್ಗದಲ್ಲಿ ರೈತರು ಪೈಪ್ ಅಳವಡಿಸಲು ಅವಕಾಶ ನೀಡದೆ ಇರುವುದರಿಂದ ವಿಳಂಬವಾಗಿರುತ್ತದೆ.<br><br>ಸದರಿ ಯೋಜನೆಯ ಮೊದಲನೇ ಹಂತದ ಕಾಮಗಾರಿಗಳನ್ನು ಮಾರ್ಚ್ 2021ರಲ್ಲಿ ಹಾಗೂ ಎರಡನೇ ಹಂತದ ಕಾಮಗಾರಿಗಳನ್ನು ಏಪ್ರಿಲ್-2021 ಮಾಹೆಯೊಳಗೆ ಪೂರ್ಣಗೊಳಿಸಿ ಚಾಲನೆಗೊಳಿಸಲು ಕ್ರಮ ವಹಿಸಲಾಗಿದೆ. |
| ಆ | ಬಂದಿದ್ದಲ್ಲಿ, ಯಾವಾಗ ಪೂರ್ಣಗೊಳಿಸಲಾಗುವುದು; ಕಾಮಗಾರಿ ವಿಳಂಬವಾಗಲು ಕಾರಣವೇನು; (ವಿವರ ನೀಡುವುದು) | |
| ಇ | ಈ ಯೋಜನೆಯಲ್ಲಿಯೇ ನಂಜನಗೂಡು ತಾಲ್ಲೂಕು ಅಲಸ್ತ್ರೀಕಟ್ಟೆಕೆರೆಗೆ ನೀರು ತುಂಬಿಸಲು ಅನುಮೋದನೆ ಕೋರಿ ಕಳೆದ ಸಾಲಿನಲ್ಲಿ ಪ್ರಸ್ತಾವನೆ ಸಲ್ಲಿಸಿದ್ದರೂ ಸಹ ಈವರೆಗೆ ಅನುಮೋದನೆ ನೀಡದೆ ಇರಲು ಕಾರಣವೇನು; | ನಂಜನಗೂಡು ತಾಲ್ಲೂಕಿನ ಆಲಸ್ತ್ರೀಕಟ್ಟೆ ಕೆರೆಗೆ ನೀರು ತುಂಬಿಸುವ ಯೋಜನೆಯ ರೂ.260.00 ಲಕ್ಷಗಳ ಮೊತ್ತದ ಅಂದಾಜು ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ. |
| ಈ | ಈ ವಿಳಂಬದಿಂದ ರೈತರಿಗೆ ಮತ್ತು ಜಾನುವಾರುಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಉ | ಬಂದಿದ್ದಲ್ಲಿ ಯಾವಾಗ ಅನುಮೋದನೆ ನೀಡಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು? (ಮಾಹಿತಿ ನೀಡುವುದು) | |

*ಸಂಖ್ಯೆ:ಜಸಂಇ 10 ಎಲ್ಎಕ್ಯೂ 2021*

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನ ಸಭೆ

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 400 |
| **ಸದಸ್ಯರ ಹೆಸರು** | : | ಡಾ\|\| ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ) |
| **ಉತ್ತರಿಸುವ ಸಚಿವರು** | : | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |
| **ಉತ್ತರಿಸಬೇಕಾದ ದಿನಾಂಕ** | : | 02.02.2021. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನೆಲಮಂಗಲ ವಿಧಾನ ಸಭಾ ಕ್ಷೇತ್ರಕ್ಕೆ ಮಾನ್ಯ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಡಿ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ ಅನುದಾನವೆಷ್ಟು; (ಕ್ಷೇತ್ರವಾರು ಬಿಡುಗಡೆಯಾದ ಅನುದಾನದ ಮಾಹಿತಿ ಒದಗಿಸುವುದು) | ನೆಲಮಂಗಲ ವಿಧಾನ ಸಭಾ ಕ್ಷೇತ್ರಕ್ಕೆ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ:-<br>**(ರೂ.ಲಕ್ಷಗಳಲ್ಲಿ)**<br>ಕ್ರ.ಸಂ \| ವರ್ಷ \| ಬಿಡುಗಡೆಯಾದ ಅನುದಾನ<br>1 \| 2017-18 \| 200.00<br>2 \| 2018-19 \| 163.4550<br>3 \| 2019-20 \| 64.36359 |
| ಆ) | ಶಾಸಕರ ಪ್ರದೇಶಾಭಿವೃದ್ಧಿಯಡಿ ಅನುದಾನವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡದಿರಲು ಕಾರಣವೇನು; | ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ 2018-19ನೇ ಸಾಲಿನ ಆರಂಭಿಕ ಶಿಲ್ಕು ರೂ.10.59 ಕೋಟಿಗಳು ಮತ್ತು ಬಿಡುಗಡೆಯಾದ ಅನುದಾನ ರೂ.8.17 ಕೋಟಿಗಳು ಸೇರಿ ಒಟ್ಟಾರೆ ರೂ.18.76 ಕೋಟಿಗಳು ಲಭ್ಯವಿದ್ದು, ಈ ಪೈಕಿ ರೂ.8.25 ಕೋಟಿಗಳನ್ನು ಮಾತ್ರ ವೆಚ್ಚಮಾಡಿದ್ದು, ವೆಚ್ಚದ ಪ್ರಮಾಣ ಶೇ 44 ರಷ್ಟು ಆಗಿರುವುದರಿಂದ ಹಾಗೂ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ರೂ.10.51 ಕೋಟಿಗಳು ಇರುವುದರಿಂದ ಉಳಿದ ಕಂತುಗಳನ್ನು ಬಿಡುಗಡೆಮಾಡಿರುವುದಿಲ್ಲ. |
| ಇ) | ಬಾಕಿ ಇರುವ ಅನುದಾನವನ್ನು ಯಾವ ಅವಧಿಯೊಳಗಾಗಿ ಬಿಡುಗಡೆ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; | ಲಭ್ಯವಿರುವ ಅನುದಾನದಲ್ಲಿ ಶೇಕಡ 75 ರಷ್ಟು ವೆಚ್ಚ ಭರಿಸಿದ ನಂತರ ಉಳಿದ ಅನುದಾನ ಬಿಡುಗಡೆ ಮಾಡಲಾಗುವುದು.<br>ಈ ಕುರಿತು ದಿನಾಂಕ:04:02.2020ರಂದು ಮಾನ್ಯ ಮುಖ್ಯಮಂತ್ರಿಯವರು ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ದಿನಾಂಕ:23.06.2020ರಂದು ಪತ್ರ ಮೂಲಕ ತಲಾ ರೂ.2.00 ಕೋಟಿಗಳ ಅನುದಾನಕ್ಕೆ ಕ್ರಿಯಾ ಯೋಜನೆ ರೂಪಿಸಲು ಹಾಗೂ ಕಾಮಗಾರಿಗಳ ಪ್ರಗತಿಯ ವೇಗವನ್ನು ಹೆಚ್ಚಿಸಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿರುತ್ತಾರೆ. |
| ಈ) | ಪ್ರಸಕ್ತ ಸಾಲಿನಲ್ಲಿ ಪ್ರತಿ ಶಾಸಕರಿಗೆ ನಿಗದಿ ಮಾಡಿದ ಪ್ರದೇಶಾಭಿವೃದ್ಧಿಯಡಿಯ ಅನುದಾನವೆಷ್ಟು? | ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಶಾಸಕರುಗಳಿಗೆ ವಿಧಾನ ಸಭಾ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ಪ್ರಸ್ತುಕ ಸಾಲಿನಲ್ಲಿ ತಲಾ ರೂ.1.00 ಕೋಟಿಗಳ ಅನುದಾನವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ 170 ವೆಚ್ಚ-2/2020, ದಿನಾಂಕ:16.09.2020ರಂತೆ ನಿಗಪಡಿಸಲಾಗಿತ್ತು. ಆದರೆ ಸರ್ಕಾರದಿಂದ ಈವರೆವಿಗೂ ಪ್ರತಿ ಕ್ಷೇತ್ರಕ್ಕೆ ರೂ.1.50 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ. |

ಪಿಡಿಎಸ್ 4 ಕೆಎಲ್ಎಸ್ 2021

**(ಕೆ.ಸಿ.ನಾರಾಯಣಗೌಡ)**
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ.

45

## ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 403 |
| ಸದಸ್ಯರ ಹೆಸರು | : | ಶ್ರೀ ಜಮೀರ್ ಅಹಮದ್ ಖಾನ್ ಬಿ.ಝಡ್. (ಚಾಮರಾಜಪೇಟೆ) |
| ಉತ್ತರಿಸಬೇಕಾದ ದಿನಾಂಕ | : | 02-02-2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

****

| ಕ್ರಮ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಚಾಮರಾಜಪೇಟೆ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬಿ.ಪಿ.ಎಲ್. ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಣ್‌ತಪ್ಪಿನಿಂದ ನೀರಿನ ಬಿಲ್ಲಿನ ರೀಡಿಂಗ್‌ನಲ್ಲಿ ಹಣ ಹೆಚ್ಚಾಗಿ ನಮೂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಬಿ.ಪಿ.ಎಲ್. ಆಧಾರದ ಮೇಲೆ ನೀರು ಮತ್ತು ಒಳಚರಂಡಿ ಸಂಪರ್ಕವನ್ನು ನೀಡುವುದಿಲ್ಲ. ರಾಜ್ಯ ಸರ್ಕಾರವು ಬೆಂಗಳೂರು ನಗರದ ಕೊಳಚೆ ಪ್ರದೇಶದಲ್ಲಿರುವ 81076 ಸಂಪರ್ಕಗಳಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಯಲ್ಲಿನ 26397 ಸಂಪರ್ಕಗಳಿಗೆ ಪ್ರತಿ ತಿಂಗಳು 10,000 ಲೀಟರ್ ನೀರನ್ನು ಉಚಿತವಾಗಿ ಸರಬರಾಜು ಮಾಡಲಾಗುತ್ತಿದ್ದು, 10,000 ಲೀಟರ್‌ಗಿಂತ ಹೆಚ್ಚಾಗಿ ನೀರಿನ ಬಳಕೆ ಮಾಡಿದ್ದಲ್ಲಿ ಹೆಚ್ಚುವರಿಯಾದ ನೀರಿನ ಪ್ರಮಾಣಕ್ಕೆ ಮಾತ್ರ ನೀರಿನ ಬಿಲ್ಲನ್ನು ವಿತರಿಸಲಾಗುವುದು ಹಾಗೂ ಸದರಿ ಮೊತ್ತವನ್ನು ಮಾತ್ರ ಗ್ರಾಹಕರು ಪಾವತಿಸಬೇಕಾಗುತ್ತದೆ. |
| ಆ) | ಈ ಮಂಡಳಿಯ ಅಧಿಕಾರಿ/ ನೌಕರರುಗಳ ಕಣ್‌ತಪ್ಪಿನಿಂದ ರೀಡಿಂಗ್‌ನಲ್ಲಿ ನಮೂದಾಗಿರುವ ಹೆಚ್ಚುವರಿ ಬಿಲ್‌ನ್ನು ಮನ್ನ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? | ಬೆಂಗಳೂರು ಜಲಮಂಡಳಿಯ ಅಧಿಕಾರಿಗಳ ಕಣ್‌ತಪ್ಪಿನಿಂದ ರೀಡಿಂಗ್‌ನಲ್ಲಿ ನಮೂದಾಗಿರುವ ಹೆಚ್ಚುವರಿ ಬಿಲ್ಲುಗಳ ಬಗ್ಗೆ ಪ್ರತಿ ಮಾಹೆಯ ಮೊದಲನೇ ಗುರುವಾರ ನಡೆಯುವ ಅದಾಲತ್‌ನಲ್ಲಿ ಗ್ರಾಹಕರು ಭಾಗವಹಿಸಿ ಹೆಚ್ಚುವರಿ ಬಿಲ್ಲುಗಳಿಗೆ ಸಂಬಂಧಿಸಿದಂತೆ ದೂರುಗಳನ್ನು ಸಲ್ಲಿಸಿದ್ದಲ್ಲಿ, ಅಂತಹ ಬಿಲ್ಲುಗಳನ್ನು ಪರಿಶೀಲಿಸಿ, ಹೆಚ್ಚುವರಿಯಾಗಿ ವಿಧಿಸಿರುವ ಬೇಡಿಕೆಯನ್ನು ಹಿಂಪಡೆಯಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ನಅಇ 20 ಎಂಎನ್‌ಐ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

# ಕರ್ನಾಟಕ ವಿಧಾನಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 404 |
| ಸದಸ್ಯರ ಹೆಸರು | : ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ–ಧಾರವಾಡ ಪೂರ್ವ) |
| ಉತ್ತರಿಸಬೇಕಾದ ದಿನಾಂಕ | : 02.02.2021 |
| ಉತ್ತರಿಸುವ ಸಚಿವರು | : ಗೃಹ ಸಚಿವರು |

| ಕ್ರ ಸಂ | ವಿಷಯ | ಉತ್ತರ |
|---|---|---|
| ಅ) | ಹುಬ್ಬಳ್ಳಿ–ಧಾರವಾಡ ಮತ ಕ್ಷೇತ್ರದ ಹುಬ್ಬಳ್ಳಿಯ ವಾರ್ಡ್ ನಂ. 55–56 ಹಾಗೂ ಇತರೆ ಕೆಲವು ಪ್ರದೇಶಗಳಲ್ಲಿ ಟ್ರಾಫಿಕ್ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಬಂದಿದ್ದಲ್ಲಿ, ಸಂಚಾರ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು? | ಹುಬ್ಬಳ್ಳಿ–ಧಾರವಾಡ ಮತ ಕ್ಷೇತ್ರದ ಹುಬ್ಬಳ್ಳಿಯ ವಾರ್ಡ್ ನಂ. 55–56 ಹಾಗೂ ಇತರೆ ಕೆಲವು ಪ್ರದೇಶಗಳಲ್ಲಿ ಸ್ಮಾರ್ಟ್‌ಸಿಟಿ, ಮಹಾನಗರ ಪಾಲಿಕೆ ಮತ್ತು ಜಲಮಂಡಳಿಯವರು ರಸ್ತೆ, ಪೈಪ್‌ಲೈನ್ ಮತ್ತು ಒಳಚರಂಡಿ ಕಾಮಗಾರಿಗಳನ್ನು ಏಕ ಕಾಲದಲ್ಲಿ ಕೈಗೊಂಡಿರುವುದರಿಂದ, ಸಂಚಾರ ಸಮಸ್ಯೆ ಉಂಟಾಗಿರುತ್ತದೆ. ಸದರಿ ಸಂಚಾರ ಸಮಸ್ಯೆಯನ್ನು ನಿವಾರಣೆಮಾಡಲು ಈ ಕೆಳಕಂಡಂತೆ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ:–<br>1. ಹುಬ್ಬಳ್ಳಿ–ಧಾರವಾಡ ಮತ ಕ್ಷೇತ್ರದ ಹುಬ್ಬಳ್ಳಿಯ ವಾರ್ಡ್ ನಂ. 55–56 ಹಾಗೂ ಇತರೆ ಕೆಲವು ಪ್ರದೇಶಗಳಲ್ಲಿ ರಸ್ತೆ ಕಾಮಗಾರಿ, ಒಳಚರಂಡಿ ಕಾಮಗಾರಿ ನಡೆಯುತ್ತಿರುವ ಸ್ಥಳಗಳಲ್ಲಿ ಸಂಚಾರ ಪೊಲೀಸ್ ಅಧಿಕಾರಿಗಳನ್ನು ನಿಯೋಜಿಸಿ ಸಂಚಾರ ಸಮಸ್ಯೆಗಳು ಉಂಟಾಗದಂತೆ ಮತ್ತು ವಾಹನಗಳು ಸುಗಮವಾಗಿ ಸಂಚರಿಸಲು ಕ್ರಮವನ್ನು ಕೈಗೊಳ್ಳಲಾಗಿರುತ್ತದೆ.<br>2. ಸುಗಮ ಸಂಚಾರಕ್ಕಾಗಿ ಎಚ್ಚರಿಕೆ ಫಲಕಗಳನ್ನು, ಮ್ಯಾಂಡೇಟರಿ ಸೈನ್ ಬೋರ್ಡ್ಸ್ ಮತ್ತು ಇತರೇ ಸಂಚಾರ ಚಿಹ್ನೆಯ ಫಲಕಗಳನ್ನು ಅಳವಡಿಸಲಾಗಿರುತ್ತದೆ.<br>3. ಸಮ ಮತ್ತು ಬೆಸ ಸಂಖ್ಯೆಯ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.<br>4. ಅವಶ್ಯಕತೆ ಕಂಡು ಬಂದ ಸ್ಥಳಗಳಲ್ಲಿ, ತಾತ್ಕಾಲಿಕವಾಗಿ ಏಕಮುಖ ಸಂಚಾರ ವ್ಯವಸ್ಥೆಯನ್ನು ಮಾಡಲಾಗಿದೆ. |

**ಹೆಚ್‌ಡಿ 64 ಎಸ್‌ಎಸ್‌ಟಿ 2021**

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 405 |
| ಸದಸ್ಯರ ಹೆಸರು | : | ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| ಪ್ರಶ್ನೆ | | ಉತ್ತರ |
|---|---|---|
| ಅ) | ಹುಬ್ಬಳ್ಳಿ-ಧಾರವಾಡ ಮತಕ್ಷೇತ್ರದ ಹುಬ್ಬಳ್ಳಿಯ ಸದಾಶಿವನಗರದಲ್ಲಿ ಹೈಟೆನ್ಷನ್ ಲೈನ್ ಹಾದು ಹೋಗಿದ್ದು ಅವಘಢ ಸಂಭವಿಸುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹುಬ್ಬಳ್ಳಿ – ಧಾರವಾಡ ಪೂರ್ವ ಮತ ಕ್ಷೇತ್ರದ ಹುಬ್ಬಳ್ಳಿಯ ಸದಾಶಿವನಗರದಲ್ಲಿ 110 ಕೆ.ವಿ. ಬಿಡ್ನಾಳ – ಎಸ್.ಆರ್.ಎಸ್, ಹುಬ್ಬಳ್ಳಿ – 1 & 2 ಹೈಟೆನ್ಷನ್ ಪ್ರಸರಣ ಮಾರ್ಗವು ಹಾದು ಹೋಗಿದ್ದು ಇದುವರೆವಿಗೂ ಯಾವುದೇ ವಿದ್ಯುತ್ ಅಪಘಾತ ಸಂಭವಿಸಿರುವುದಿಲ್ಲ.<br><br>ಸದರಿ ಪ್ರಸರಣ ಮಾರ್ಗವು 1965–66ನೇ ವರ್ಷದಲ್ಲಿ ಚಾಲನೆಗೊಂಡಿದ್ದು, ಪ್ರಸರಣ ಮಾರ್ಗವನ್ನು ನಿರ್ಮಿಸುವ ಸಮಯದಲ್ಲಿ ಸದರಿ ವಿದ್ಯುತ್ ಮಾರ್ಗದ ಅಡಿಯಲ್ಲಿ ಯಾವುದೇ ಮನೆಗಳು, ಶಾಲೆ, ಗುಡಿ ಮುಂತಾದವುಗಳು ನಿರ್ಮಾಣಗೊಂಡಿರುವುದಿಲ್ಲ. ಕಾಲಕ್ರಮೇಣ ಹಾಲಿ ಇರುವ ಸದರಿ ಪ್ರಸರಣ ಮಾರ್ಗದ ಕಾರಿಡಾರ್ ನಲ್ಲಿ ಸಾರ್ವಜನಿಕರು ಮನೆ ಮುಂತಾದವುಗಳನ್ನು ನಿರ್ಮಿಸಿರುತ್ತಾರೆ.<br><br>ಈ ಕುರಿತು ಸಾರ್ವಜನಿಕರಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವತಿಯಿಂದ ವಿದ್ಯುತ್ ಅಪಘಾತಗಳನ್ನು ತಡೆಗಟ್ಟುವ ಕ್ರಮಗಳ ಬಗ್ಗೆ ದಿನಪತ್ರಿಕೆಗಳಲ್ಲಿ ತಿಳುವಳಿಕೆ ನೀಡಲಾಗಿರುತ್ತದೆ ಹಾಗೂ ಒತ್ತುವರಿಯಾಗಿರುವ ಸ್ಥಳಗಳನ್ನು ತೆರವುಗೊಳಿಸುವ ಬಗ್ಗೆ ಸೂಚನಾ ಪತ್ರಗಳನ್ನು ನೀಡಲಾಗಿರುತ್ತದೆ. |
| ಆ) | ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | |
| ಇ) | ಹಾದು ಹೋಗಿರುವ ಹೈಟೆನ್ಷನ್ ಲೈನ್ ಗಳನ್ನು ತೆರವುಗೊಳಿಸಲು ಸರ್ಕಾರಕ್ಕೆ ಇರುವ ಸಮಸ್ಯೆಗಳೇನು? | |

**ಸಂಖ್ಯೆ: ಎನರ್ಜಿ 5 ಪಿಪಿಎಂ 2021**

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 407 |
| ಸದಸ್ಯರ ಹೆಸರು | : | ಶ್ರೀ ಮಸಾಲ ಜಯರಾಮ್ (ತುರುವೇಕೆರೆ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಕಸಬಾ ಹೋಬಳಿಯ ಹರಿದಾಸನ ಹಳ್ಳಿ ಹಾಗೂ ಮಾಯಸಂದ್ರ ಹೋಬಳಿಯ ಶೆಟ್ಟಿಗೊಂಡನಹಳ್ಳಿ ಗ್ರಾಮದಲ್ಲಿ ಹೊಸದಾಗಿ 110/11 ಕೆ.ವಿ ವಿದ್ಯುತ್ ಉಪಸ್ಥಾವರ ಸ್ಥಾಪಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ; | ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಕಸಬಾ ಹೋಬಳಿಯ ಹರಿದಾಸನಹಳ್ಳಿ ಹಾಗೂ ಮಾಯಸಂದ್ರ ಹೋಬಳಿಯ ಶೆಟ್ಟಿಗೊಂಡನಹಳ್ಳಿ ಗ್ರಾಮದಲ್ಲಿ ಹೊಸದಾಗಿ 110/11 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆಗಳು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿದ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿರುತ್ತವೆ. |
| ಆ) | ಬಂದಿದ್ದಲ್ಲಿ, ಸದರಿ ಉದ್ದೇಶಕ್ಕಾಗಿ ಜಮೀನು ಕಾಯ್ದಿರಿಸಲಾಗಿದೆಯೇ; ಕಾಯ್ದಿರಿಸಿರುವ ಜಮೀನಿನ ವಿವರ ನೀಡುವುದು; | ಹರಿದಾಸನಹಳ್ಳಿ ಗ್ರಾಮದಲ್ಲಿ ಹೊಸದಾಗಿ 110/11 ಕೆ.ವಿ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಅಗತ್ಯವಿರುವ ಜಮೀನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸುಪರ್ದಿಯಲ್ಲಿರುತ್ತದೆ. ವಿದ್ಯುತ್ ಪ್ರಸರಣ ಮಾರ್ಗದ ಸರ್ವೆ ಕಾಮಗಾರಿ ಪೂರ್ಣಗೊಂಡಿದ್ದು ಅಂದಾಜು ಪಟ್ಟಿ ತಯಾರಿಸಲಾಗುತ್ತಿದೆ. |
| ಇ) | ಈ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ; ಈ ಪ್ರಸ್ತಾವನೆಯ ವಿಳಂಬಕ್ಕೆ ಕಾರಣವೇನು; | |
| ಈ) | ಸದರಿ ಉಪ ವಿದ್ಯುತ್ ಸ್ಥಾವರವನ್ನು ಯಾವಾಗ ಸ್ಥಾಪಿಸಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು)? | ಶೆಟ್ಟಿಗೊಂಡನಹಳ್ಳಿ ಗ್ರಾಮದಲ್ಲಿ ಹೊಸದಾಗಿ 110/11 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಅಗತ್ಯವಿರುವ ಸರ್ಕಾರಿ ಜಮೀನು ಮಂಜೂರಾತಿ ಪ್ರಕ್ರಿಯೆ ಜಾರಿಯಲ್ಲಿದೆ. |

ಸಂಖ್ಯೆ: ಎನರ್ಜಿ 7 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

## ಕರ್ನಾಟಕ ವಿಧಾನ ಸಭೆ

1. ಪ್ರಶ್ನೆ ಸಂಖ್ಯೆ : 408
2. ಸದಸ್ಯರ ಹೆಸರು : ಶ್ರೀ ಕುಮಾರ ಬಂಗಾರಪ್ಪ, ಎಸ್.
3. ಉತ್ತರಿಸಬೇಕಾದ ದಿನಾಂಕ : 02-02-2021.
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಡಾ ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿರುವ ಸೊರಬ ತಾಲ್ಲೂಕಿನಲ್ಲಿ ಮಳೆಗಾಲದಲ್ಲಿ ವರದಾ ನದಿಯು ಉಕ್ಕಿ ಹರಿದು ರೈತರಿಗೆ ಮಳೆಗಾಲದ ಬೆಳೆಯನ್ನು ಬೆಳಯಲು ಸಾಧ್ಯವಾಗದಿರುವುದು ಹಾಗೂ ಬೇಸಿಗೆ ಕಾಲದಲ್ಲಿ ನದಿಯಲ್ಲಿ ನೀರಿಲ್ಲದೆ ಬೇಸಿಗೆ ಬೆಳೆಯು ಸಿಗದಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಗಮನಕ್ಕೆ ಬಂದಿದೆ. |
| ಆ | ಬಂದಿದ್ದಲ್ಲಿ, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಬ್ಯಾರೇಜ್‌ಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಾಗುವುದೇ? | ಸೊರಬ ತಾಲ್ಲೂಕಿನ ವರದಾ ನದಿ ಹಾಗೂ ದಂಡಾವತಿ ನದಿಗಳಿಗೆ ಅಡ್ಡಲಾಗಿ ಸರಣಿ ಬ್ಯಾರೇಜ್ ಮತ್ತು ಬ್ಯಾರೇಜ್ ಕಂ ಬ್ರಿಡ್ಜ್‌ಗಳನ್ನು ನಿರ್ಮಾಣ ಮಾಡಿ ಕುಡಿಯುವ ನೀರು ಹಾಗೂ ನೀರಾವರಿ ಸೌಲಭ್ಯ ಕಲ್ಪಿಸಲು ಸಣ್ಣ ನೀರಾವರಿ ಹಾಗೂ ಜಿಲ್ಲಾ ಪಂಚಾಯತ್ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಒಟ್ಟು ರೂ.6965.00 ಲಕ್ಷಗಳ ಮೊತ್ತದಲ್ಲಿ 22 ಕಾಮಗಾರಿಗಳಿಗೆ ಡಿ.ಪಿ.ಆರ್. ತಯಾರಿಸಲಾಗಿದೆ. ಅನುದಾನದ ಲಭ್ಯತೆ ಅನುಸಾರ ಸದರಿ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೊಳ್ಳಲು ಪರಿಶೀಲಿಸಲಾಗುವುದು. |

**ಸಂಖ್ಯೆ: ಸನೀಇ 43 ವಿಸವಿ 2021.**

(signature)

**(ಜೆ.ಸಿ.ಮಾಧುಸ್ವಾಮಿ,)**
ಸಣ್ಣ ನೀರಾವರಿ ಸಚಿವರು.

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 409 |
| ಸದಸ್ಯರ ಹೆಸರು | : | ಶ್ರೀ ಕುಮಾರ್ ಬಂಗಾರಪ್ಪ (ಸೊರಬ) |
| ಉತ್ತರಿಸುವ ದಿನಾಂಕ | : | 02.02.2021 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಡಾ: ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿರುವ ಸೊರಬ ತಾಲ್ಲೂಕಿನಲ್ಲಿ ಕೈಗೊಂಡಿರುವ ಕಚವಿ ಏತ ನೀರಾವರಿ ಕಾಮಗಾರಿಯು ಕಳೆದ 4 ವರ್ಷಗಳಿಂದ ನಡೆಯುತ್ತಿದ್ದು, ಕಾಮಗಾರಿಯು ಅತ್ಯಂತ ಕಳಪೆ ಮಟ್ಟದಲ್ಲಿ ನಡೆಯುತ್ತಿದ್ದು, ಪೂರ್ಣಗೊಂಡು ಅನುಷ್ಠಾನವಾಗದ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿರುವ ಸೊರಬ ತಾಲ್ಲೂಕಿನ ಕಛವಿ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ದಿನಾಂಕ:26/03/2018 ಗುತ್ತಿಗೆದಾರರಿಗೆ ರೂ.15.33 ಕೋಟಿಗಳಿಗೆ Turnkey ಆಧಾರದ ಮೇಲೆ ವಹಿಸಲಾಗಿದ್ದು, ಗುತ್ತಿಗೆ ಅವಧಿಯು 15 ತಿಂಗಳುಗಳಾಗಿರುತ್ತವೆ. ಪ್ರಸ್ತುತ ಜಾಕ್‌ವೆಲ್/ಪಂಪ್ ಹೌಸ್ ಮತ್ತು ರೈಸಿಂಗ್ ಮೇನ್ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಸದರಿ ಯೋಜನೆಯಡಿಯಲ್ಲಿ ನಿರ್ವಹಿಸುವ ಕಾಮಗಾರಿಗಳನ್ನು ಇಲಾಖೆಯ ಗುಣನಿಯಂತ್ರಣಾ ಘಟಕದಿಂದ ತಪಾಸಣೆಗೆ ಒಳಪಡಿಸಲಾಗುತ್ತಿದೆ ಹಾಗೂ ಕಾಮಗಾರಿಯು ಗುಣಮಟ್ಟದಿಂದ ಕೂಡಿರುತ್ತದೆ.<br><br>ಕಛವಿ ಏತ ನೀರಾವರಿ ಯೋಜನೆಯಲ್ಲಿ ಈಗಾಗಲೇ ಅಳವಡಿಸಿರುವ ಪೈಪ್‌ನ ವಿನ್ಯಾಸವನ್ನು ಹೆಚ್ಚಿಸಿ, ಹೆಚ್ಚುವರಿ ಕೆರೆಗಳಿಗೆ ನೀರು ತುಂಬಿಸಲು ಸ್ಥಳೀಯವಾಗಿ ಬೇಡಿಕೆ ಬಂದಿದ್ದರಿಂದ, ಕೋವಿಡ್-19 ಸಾಂಕ್ರಾಮಿಕ ರೋಗದ ನಿಮಿತ್ತ ಲಾಕ್‌ಡೌನ್ ಘೋಷಿಸಿದ್ದರಿಂದ ಹಾಗೂ ಮಳೆಯ ಕಾರಣದಿಂದ ಕಾಮಗಾರಿಯ ಪ್ರಗತಿಯಲ್ಲಿ ಕುಂಠಿತವಾಗಿರುತ್ತದೆ.<br><br>ಸದರಿ ಏತ ನೀರಾವರಿ (ಕೆರೆ ತುಂಬಿಸುವ) ಯೋಜನೆಯನ್ನು ಜೂನ್-2021ರೊಳಗೆ ಪೂರ್ಣಗೊಳಿಸಲು ಅಗತ್ಯ ಕ್ರಮ ಜರುಗಿಸಲಾಗುತ್ತಿದೆ. |
| ಆ | ಬಂದಿದಲ್ಲಿ, ಯಾವ ರೀತಿಯಲ್ಲಿ ಕ್ರಮ ಜರುಗಿಸಿ ಸರಿಪಡಿಸಲಾಗುವುದು; | |

ಸಂಖ್ಯೆ: ಜಸಂಇ 11 ಎಂಎಲ್‌ಎ 2021

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

## ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 410
2. ಸದಸ್ಯರ ಹೆಸರು : ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ (ಬೆಳಗಾಂ ಗ್ರಾಮಾಂತರ)
3. ಉತ್ತರಿಸುವ ದಿನಾಂಕ : 02.02.2021
4. ಉತ್ತರಿಸುವ ಸಚಿವರು : ಮುಖ್ಯಮಂತ್ರಿ

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | 2011ನೇ ಸಾಲಿನ ಕೆ.ಎ.ಎಸ್. –ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಕುರಿತು ಸರ್ಕಾರದ ನಿರ್ಧಾರವೇನು (ಸ್ಪಷ್ಟತೆಯನ್ನು ನೀಡುವುದು); | 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಆಯ್ಕೆ ಪ್ರಕ್ರಿಯೆ ಕುರಿತಂತೆ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. |
| ಆ) | ಈ ಹುದ್ದೆಗಳ ನೇಮಕಾತಿ ಆದೇಶ ರದ್ದು ಮಾಡಿ ಹೊಸ ಅಧಿಸೂಚನೆಯನ್ನು ಹೊರಡಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; | ಮೇಲಿನ ಉತ್ತರದಿಂದ ಪ್ರಸ್ತುತ ಈ ಪ್ರಶ್ನೆ ಉದ್ಭವಿಸುವುದಿಲ್ಲ. |
| ಇ) | ಹಾಗಿದ್ದಲ್ಲಿ, 2011ನೇ ಸಾಲಿನ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶವನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | |
| ಈ) | ಈ ಸಾಲಿನಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದ್ದಲ್ಲಿ ಅವಕಾಶ ವಂಚಿತ ಅಭ್ಯರ್ಥಿಗಳಿಗೆ ಮುಂಬರುವ/ಹೊಸ ಅಧಿಸೂಚನೆಗೆ ಅರ್ಜಿ ಸಲ್ಲಿಸುವ ಅವಕಾಶವನ್ನು ನೀಡಲಾಗುವುದೇ? | |

ಸಂಖ್ಯೆ: ಸಿಆಸುಇ 07 ಎಸ್‌ಎಸ್‌ಸಿ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ.

# ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 412

ಸದಸ್ಯರ ಹೆಸರು : ಶ್ರೀ ಪ್ರಿಯಾಂಕ್ ಎಂ.ಖರ್ಗೆ (ಚಿತ್ತಾಪುರ)

ಉತ್ತರಿಸು ಸಚಿವರು : ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸಬೇಕಾದ ದಿನಾಂಕ : 02.02.2021.

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2020-21ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ನಿಗದಿಪಡಿಸಿದ ಅನುದಾನ ಎಷ್ಟು ಹಾಗೂ ಅನುದಾನ ನಿಗದಿಪಡಿಸಿದ್ದಲ್ಲಿ, ಇಲ್ಲಿಯವರೆಗೆ ಎಷ್ಟು ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ ಮತ್ತು ನಿಗದಿಯಾದ ಪೂರ್ಣ ಅನುದಾನ ಬಿಡುಗಡೆ ಆಗದಿದ್ದಲ್ಲಿ, ಕಾರಣಗಳೇನು; | 2020-21ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಸರ್ಕಾರವು ರೂ.1131.86 ಕೋಟಿಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ನಿಗದಿಯಾದ ಅನುದಾನದಲ್ಲಿ ರೂ.544.03 ಕೋಟಿಗಳು ಬಿಡುಗಡೆಗೊಳಿಸಿದ್ದು, 3ನೇಕಂತಿನ ಅನುದಾನ ಬಿಡುಗಡೆಗೆ ಆರ್ಥಿಕ ಇಲಾಖೆ ಸಹಮತಿಗಾಗಿ ಸಲ್ಲಿಸಲಾಗಿದೆ.<br>ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಪ್ರಗತಿ ಆಧಾರಿಸಿ ಪೂರ್ಣ ಅನುದಾನವನ್ನು ಬಿಡುಗಡೆಮಾಡಲಾಗುವುದು. |
| ಆ) | ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳೀಯಿಂದ ಈಗಾಗಲೇ ಪೂರ್ಣಗೊಂಡಿರುವ ಕಾಮಗಾರಿಗಳು ಕೈಗೆತ್ತಿಕೊಂಡಿರುವ ಕಾಮಗಾರಿಗಳು, ಅಪೂರ್ಣಗೊಂಡಿರುವ ಕಾಮಗಾರಿಗಳಿಗೆ ಸುಮಾರು ರೂ.2040 ಕೋಟಿ ಅನುದಾನ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | -ಇಲ್ಲ- |
| ಇ) | ಬಂದಿದ್ದಲ್ಲಿ, ಕೊರತೆ ಇರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು (ಪೂರ್ಣ ವಿವರ ನೀಡುವುದು)? | ಅನ್ವಯಿಸುವುದಿಲ್ಲ. |

(ಪಿಡಿಎಸ್ 11 ಹೆಚ್‌ಕೆಡಿ 2021)

(ಡಾ.ನಾರಾಯಣಗೌಡ)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 422 |
| ಸದಸ್ಯರ ಹೆಸರು | : | ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ) |
| ಉತ್ತರಿಸುವ ದಿನಾಂಕ | : | 02.02.2021 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2019-21ನೇ ಸಾಲಿನ ಆಯವ್ಯಯದಲ್ಲಿ ಬೀದರ್ ದಕ್ಷಿಣ ಕ್ಷೇತ್ರದಲ್ಲಿನ ಕೆರೆಗಳನ್ನು ತುಂಬಿಸುವ ಯೋಜನೆಯನ್ನು ಘೋಷಿಸಲಾಗಿದೆಯೇ? | ಬೀದರ ಹಾಗೂ ಭಾಲ್ಕಿ ತಾಲ್ಲೂಕುಗಳಡಿ 33 ಕೆರೆಗಳನ್ನು ಮಾಂಜ್ರಾ ನದಿಯಿಂದ ನೀರು ತುಂಬಿಸುವ ಯೋಜನೆಯನ್ನು ರೂ.75.00 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಲು 2019-20ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದೆ. |
| ಆ) | ಹಾಗಿದ್ದಲ್ಲಿ, ಇದುವರೆವಿಗೂ ಈ ಯೋಜನೆಗೆ ಚಾಲನೆ ನೀಡದಿರಲು ಕಾರಣಗಳೇನು? | ಸದರಿ ಯೋಜನೆಯ ಕೆರೆಗಳನ್ನು ತುಂಬಿಸಲು ಸುಮಾರು 0.88 ಟಿ.ಎಂ.ಸಿ. ನೀರು ಅವಶ್ಯಕತೆ ಇರುವುದರಿಂದ ಮಾಂಜ್ರಾ ನದಿಯಲ್ಲಿ ನೀರಿನ ಲಭ್ಯತೆಯ ಬಗ್ಗೆ ಕರ್ನಾಟಕ ನೀರಾವರಿ ನಿಗಮದಲ್ಲಿ ಪರಿಶೀಲನೆಯಲ್ಲಿದೆ. |
| ಇ) | ಸದರಿ ಯೋಜನೆಗೆ ಯಾವಾಗ ಚಾಲನೆ ನೀಡಲಾಗುವುದು? ಈ ಕ್ಷೇತ್ರದ ಎಷ್ಟು ಕೆರೆಗಳನ್ನು ಈ ಯೋಜನೆಗೆ ಒಳಪಡಿಸಲಾಗುವುದು? (ವಿವರವಾದ ಮಾಹಿತಿಯನ್ನು ಒದಗಿಸುವುದು) | |

ಸಂಖ್ಯೆ: ಜಸಂಇ 13 ಎಂಎಲ್ಎ 2021

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನ ಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 427
2] ಮಾನ್ಯ ಸದಸ್ಯರ ಹೆಸರು : ಶ್ರೀ ಸೋಮಲಿಂಗಪ್ಪ.ಎಂ.ಎಸ್.(ಸಿರಗುಪ್ಪ)
3] ಉತ್ತರಿಸುವ ದಿನಾಂಕ : 02/02/2021
4] ಉತ್ತರಿಸುವ ಸಚಿವರು : ಗೃಹ , ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು.

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಿರಗುಪ್ಪ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸಿರಗುಪ್ಪ ನಗರದಲ್ಲಿ ಪೊಲೀಸ್‌ರಿಗೆ ಮತ್ತು ವೃತ್ತ ನಿರೀಕ್ಷಕರಿಗೆ ಮೀಸಲಿರಿಸಿರುವ ವಸತಿ ಗೃಹಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;? | ಹೌದು |
| ಆ) | ಹಾಗಿದ್ದಲ್ಲಿ, ಶಿಥಿಲಾವಸ್ಥೆಯಲ್ಲಿರುವ ವಸತಿ ಗೃಹವನ್ನು ದುರಸ್ತಿ ಮಾಡಲು/ಹೊಸದಾಗಿ ವಸತಿ ಗೃಹ ನಿರ್ಮಾಣ ಮಾಡಲು ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಪೊಲೀಸ್ ಗೃಹ 2025 ಯೋಜನೆಯಡಿಯಲ್ಲಿ 9,524 ಪಿಸಿ ವಸತಿ ಗೃಹಗಳು ಹಾಗೂ 510 ಪಿಎಸ್‌ಐ ವಸತಿ ಗೃಹಗಳು ಸೇರಿ ಒಟ್ಟು 10,034 ವಸತಿ ಗೃಹಗಳ ನಿರ್ಮಾಣವನ್ನು ಮುಂದಿನ 5 ವರ್ಷಗಳಲ್ಲಿ ಕೈಗೊಳ್ಳಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದ್ದು, ಈ ಯೋಜನೆಯಡಿ ಸದರಿ ಪ್ರಸ್ತಾವನೆಯನ್ನು ಸಹ ಪರಿಗಣಿಸಲಾಗುವುದು. |

**ಸಂಖ್ಯೆ: ಹೆಚ್‌ಡಿ 09 ಪಿಬಿಎಲ್ 2021**

**[ಬಸವರಾಜ ಬೊಮ್ಮಾಯಿ]**
ಗೃಹ , ಕಾನೂನು, ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನೆ ಸಚಿವರು

# ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 428
2. ಸದಸ್ಯರ ಹೆಸರು : ಶ್ರೀ ಆರ್.ನರೇಂದ್ರ
3. ಉತ್ತರಿಸಬೇಕಾದ ದಿನಾಂಕ : 02-02-2021
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕು ಕೇಂದ್ರವಾಗಿ ಎರಡು ವರ್ಷಗಳು ಕಳೆದರೂ ಇದುವರೆವಿಗೂ ಬೃಹತ್ ನೀರಾವರಿ ಇಲಾಖಾ ಕಛೇರಿಯನ್ನು ಕೊಳ್ಳೇಗಾಲದಿಂದ ಹನೂರು ತಾಲ್ಲೂಕಿಗೆ ವರ್ಗಾಯಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ | ಬಂದಿದ್ದಲ್ಲಿ, ಈ ತಾಲ್ಲೂಕು ಮಟ್ಟದ ಇಲಾಖಾ ಕಛೇರಿಯನ್ನು ಹನೂರು ತಾಲ್ಲೂಕಿನ ಅಜ್ಜೀಪುರಕ್ಕೆ ವರ್ಗಾಯಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ನಂ.3, ಕೆ.ಸಿ.ಐ. ಉಪ ವಿಭಾಗ, ಕೊಳ್ಳೇಗಾಲ ಕಛೇರಿಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಅಜ್ಜೀಪುರದಲ್ಲಿರುವ ಸರ್ಕಾರಿ ಕಟ್ಟಡಕ್ಕೆ ಸ್ಥಳಾಂತರಿಸಲು ಕಾವೇರಿ ನೀರಾವರಿ ನಿಗಮದಿಂದ ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ. |
| ಇ | ಸದರಿ ಇಲಾಖಾ ಕಛೇರಿಯನ್ನು ಸ್ಥಳಾಂತರಿಸಲು ವಿಷಯಕ್ಕೆ ಸಂಬಂಧಿಸಿದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಲ್ಲಿ ಕಾವೇರಿ ನೀರಾವರಿ ನಿಗಮ, ಬೆಂಗಳೂರು / ಮೈಸೂರು ರವರು ವಿಳಂಬ ಧೋರಣೆ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಈ | ಬಂದಿದ್ದಲ್ಲಿ ಆ ಭಾಗದ ಸಾರ್ವಜನಿಕರಿಗೆ ಉಪಯೋಗವಾಗಲು ಈ ಕಛೇರಿಯನ್ನು ಆದಷ್ಟು ಜರೂರು ಸ್ಥಳಾಂತರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು) | |

*ಸಂಖ್ಯೆ:ಜಸಂಇ 09 ಎನ್ಎಲ್ಎ 2021*

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 431 |
| ಸದಸ್ಯರ ಹೆಸರು | : | ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) |
| ಉತ್ತರಿಸಬೇಕಾದ ದಿನಾಂಕ | : | 02-02-2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

****

| ಕ್ರಮ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಜಲಮಂಡಳಿಯು ಹೊಂದಿರುವ ಒಟ್ಟು ನೀರಿನ ಸಂಪರ್ಕ ಬಳಕೆದಾರರ ಸಂಖ್ಯೆ ಹಾಗೂ ಅದರಲ್ಲಿ ಸರ್ಕಾರದ ಇಲಾಖೆಗಳು-ಸಂಸ್ಥೆಗಳು, ವಾಣಿಜ್ಯ ಕಟ್ಟಡಗಳವರು, ಕೇಂದ್ರ ಸರ್ಕಾರದ ಇಲಾಖೆಗಳವರು, ಕೈಗಾರಿಕೆಗಳು, ಬಿಬಿಎಂಪಿ ಸೇರಿದಂತೆ ನೀರಿನ ಶುಲ್ಕವನ್ನು ಬಾಕಿ ಉಳಿಸಿಕೊಂಡಿರುವ ಹಣದ ಪ್ರಮಾಣ ಹಾಗೂ ವಸೂಲಾತಿಗಾಗಿ ಜಲಮಂಡಳಿ ಕೈಗೊಂಡ ಪರಿಣಾಮಕಾರಿ ಕ್ರಮಗಳು ಯಾವುವು; | ಬೆಂಗಳೂರು ಜಲಮಂಡಳಿಯು ಹೊಂದಿರುವ ಒಟ್ಟು ನೀರಿನ ಸಂಪರ್ಕ ಬಳಕೆದಾರರ ಸಂಖ್ಯೆ 10.11 ಲಕ್ಷಗಳು ಹಾಗೂ ಅದರಲ್ಲಿ ಸರ್ಕಾರದ ಇಲಾಖೆಗಳು-ಸಂಸ್ಥೆಗಳು, ವಾಣಿಜ್ಯ ಕಟ್ಟಡಗಳವರು, ಕೇಂದ್ರ ಸರ್ಕಾರದ ಇಲಾಖೆಗಳವರು, ಕೈಗಾರಿಕೆಗಳು, ಬಿಬಿಎಂಪಿ, ಗೃಹ ಬಳಕೆದಾರರು ಮತ್ತು ಇತರೆ ಸಂಪರ್ಕಗಳು ಸೇರಿದಂತೆ ನೀರಿನ ಶುಲ್ಕವನ್ನು ಬಾಕಿ ಉಳಿಸಿಕೊಂಡಿರುವ ಹಣದ ಪ್ರಮಾಣ ಸುಮಾರು 306.50 ಕೋಟಿಗಳು.<br><br>ಬಾಕಿ ವಸೂಲಾತಿಗಾಗಿ ಜಲಮಂಡಳಿ ಪ್ರತಿ ವಾರ ನಡೆಯುವ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಪ್ರಗತಿಯನ್ನು ಪರಿಶೀಲಿಸಲಾಗುತ್ತದೆ. ಅದೇ ರೀತಿ ಮಾಹೆಯಾನ ಬೇಡಿಕೆ, ಬಾಕಿ ಮತ್ತು ವಸೂಲಾತಿ ನಡೆಯುವ ಸಭೆಯಲ್ಲಿ ಉಪ ವಿಭಾಗವಾರು ನಿಗದಿಪಡಿಸಿರುವ ಗುರಿ ಹಾಗೂ ಸಾಧಿಸಿರುವ ಬಾಕಿ ವಸೂಲಾತಿಯ ಬಗ್ಗೆ ಪರಿಶೀಲಿಸಲಾಗುತ್ತದೆ. ಎಲ್ಲಾ ಸೇವಾಠಾಣೆ, ಉಪ ವಿಭಾಗವಾರು ಬಾಕಿ ಬಿಲ್ಲಿನ ಮೊತ್ತವನ್ನು ಪಾವತಿಸಲು ಅಭಿಯಾನ ಕೈಗೊಂಡು, ಬಾಕಿ ವಸೂಲಾತಿ ಮಾಡಲಾಗುತ್ತಿದೆ.<br><br>ಮುಂದುವರೆದು, ನೀರಿನ ಬಿಲ್ಲಿನ ಬಾಕಿ ಪಾವತಿ ಮಾಡದ ಗ್ರಾಹಕರಿಗೆ ನೋಟಿಸ್ ಜಾರಿ ಮಾಡಿ ಶೀಘ್ರವಾಗಿ ನಿಗದಿತ ಸಮಯದೊಳಗೆ ಪಾವತಿಸಲು ಸೂಚಿಸಲಾಗುತ್ತದೆ. |
| ಆ) | ಜಲಮಂಡಳಿಗೆ ನೀರು ಸಂಪರ್ಕ ವ್ಯವಸ್ಥೆ ಮತ್ತು ನಿರ್ವಹಣೆಗಾಗಿ ಬೇಕಾಗುವ ಖರ್ಚು ವೆಚ್ಚಗಳ ಪ್ರಮಾಣ ಎಷ್ಟು; | 2020-21ನೇ ಸಾಲಿಗೆ ಜಲಮಂಡಳಿಯ ನೀರು ಸಂಪರ್ಕ ವ್ಯವಸ್ಥೆ ಮತ್ತು ನಿರ್ವಹಣೆಗಾಗಿ ಬೇಕಾಗಿರುವ ಖರ್ಚುವೆಚ್ಚದ ಪ್ರಮಾಣ ರೂ.76310.48 ಲಕ್ಷಗಳು. |
| ಇ) | ಗೃಹ ಬಳಕೆದಾರರು ಪ್ರಾಮಾಣಿಕವಾಗಿ ನೀರಿನ ಶುಲ್ಕ ಪಾವತಿಸುತ್ತಿದ್ದು, ಅವರಿಗೆ ಸಮರ್ಪಕ ಹಾಗೂ ಸುವ್ಯವಸ್ಥಿತ ನೀರು ಸರಬರಾಜು ಸೇವೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಜಲಮಂಡಳಿಯ ಇನ್ನಷ್ಟು ಅನುಕರಣೀಯ ಕ್ರಮಗಳೇನು? | ಬೆಂಗಳೂರು ಜಲಮಂಡಳಿಯ ಗ್ರಾಹಕರಿಗೆ ಸಮರ್ಪಕ ಹಾಗೂ ಸುವ್ಯವಸ್ಥಿತ ನೀರು ಸರಬರಾಜು ಸೇವೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಪ್ರತಿ ವರ್ಷದ ಕ್ರಿಯಾ ಯೋಜನೆಯಲ್ಲಿ ನೀರು ಸರಬರಾಜನ್ನು ಉತ್ತಮಗೊಳಿಸಲು ಕಾಮಗಾರಿಗಳನ್ನು ಕೈಗೊಂಡು ಸಾರ್ವಜನಿಕರಿಗೆ ಸಮರ್ಪಕವಾಗಿ ನೀರು ಸರಬರಾಜನ್ನು ಮಾಡಲಾಗುತ್ತಿದೆ. |

ಸಂಖ್ಯೆ: ನಅಇ 19 ಎಂಎನ್ಐ 2021

(ಸಹಿ)

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

## ಕರ್ನಾಟಕ ವಿಧಾನ ಸಭೆ

| | | | |
|---|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 434 |
| 2) | ಮಾನ್ಯ ಸದಸ್ಯರ ಹೆಸರು | : | ಶ್ರೀ ರಘುಪತಿ ಭಟ್.ಕೆ (ಉಡುಪಿ) |
| 3) | ಉತ್ತರಿಸುವ ದಿನಾಂಕ | : | 02/02/2021 |
| 4) | ಉತ್ತರಿಸುವ ಸಚಿವರು | : | ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಶ್ರೀ ಕೃಷಣ ಮಠಕ್ಕೆ ಭದ್ರತೆ ನೀಡುವ ದೃಷ್ಟಿಯಿಂದ ಕೃಷ್ಣ ಮಠದ ಆವರಣದಲ್ಲಿ ಪೊಲೀಸ್ ಹೊರಠಾಣೆ ತೆರೆಯುವ ಬಗ್ಗೆ ಸರ್ಕಾರದ ನಿಲುವೇನು; | ಉಡುಪಿಯ ಶ್ರೀ ಕೃಷ್ಣ ಮಠಕ್ಕೆ ಭದ್ರತೆ ನೀಡುವ ದೃಷ್ಟಿಯಿಂದ ಶ್ರೀ ಕೃಷ್ಣ ಮಠದ ಆವರಣದಲ್ಲಿ ಪೊಲೀಸ್ ಹೊರಠಾಣೆ ತೆರೆಯುವ ವಿಷಯಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಪೊಲೀಸ್ ಆಯೋಗದ ಮಾರ್ಗಸೂಚಿಯಂತೆ ಮಾನದಂಡಗಳನ್ನು ಪೂರೈಸಿದಲ್ಲಿ ನಿಯಮಾನುಸಾರ ಪರಿಶೀಲಿಸಲಾಗುವುದು. |
| ಆ) | ಸದರಿ ಪೊಲೀಸ್ ಹೊರಠಾಣೆ ತೆರೆಯುವ ಬಗ್ಗೆ ಬೇಡಿಕೆ ಇದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | |
| ಇ) | ಕೃಷ್ಣ ಮಠದ ಆವರಣದಲ್ಲಿ ಯಾವಾಗ ಪೊಲೀಸ್ ಹೊರಠಾಣೆ ತೆರೆಯಲಾಗುವುದು? | |

**ಸಂಖ್ಯೆ: ಹೆಚ್‌ಡಿ 15 ಪಿಓಪಿ 2021**

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ
ಸಚಿವರು.

## ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 436

ಸದಸ್ಯರ ಹೆಸರು : ಶ್ರೀ ಐಹೋಳೆ ಡಿ.ಮಹಾಲಿಂಗಪ್ಪ (ರಾಯಭಾಗ)

ಉತ್ತರಿಸಬೇಕಾದ ದಿನಾಂಕ : 02.02.2021

ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದ ನೌಕರರು ಹಾಗೂ ಕೇಂದ್ರ ಸರ್ಕಾರದ ನೌಕರರ ವೇತನದಲ್ಲಿ ವ್ಯತ್ಯಾಸವಿದ್ದು, ವೇತನ ನೀಡುವಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ) | ಬಂದಿದ್ದಲ್ಲಿ, ಕೇಂದ್ರ ಸರ್ಕಾರಿ ನೌಕರರಿಗೆ ಸಮಾನವಾಗಿ ವೇತನವನ್ನು ರಾಜ್ಯ ಸರ್ಕಾರಿ ನೌಕರರಿಗೂ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ರಾಜ್ಯ ಸರ್ಕಾರವು ಸಾಂಪ್ರದಾಯಿಕವಾಗಿ ಕೇಂದ್ರ ವೇತನ ಆಯೋಗಗಳ ಶಿಫಾರಸ್ಸು ಹಾಗೂ ಕೇಂದ್ರ ವೇತನ ಪರಿಷ್ಕರಣೆಯ ಅವಧಿಯನ್ನು ಅನುಸರಿಸದೇ ತನ್ನದೇ ಆದ ವೇತನ ಆಯೋಗಗಳ / ವೇತನ ಸಮಿತಿಗಳ ಶಿಫಾರಸ್ಸಿನ ಮೇರೆಗೆ ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳನ್ನು ಕಾಲದಿಂದ ಕಾಲಕ್ಕೆ ಪರಿಷ್ಕರಿಸಿಕೊಂಡು ಬಂದಿರುತ್ತದೆ. ಕೇಂದ್ರ ಸರ್ಕಾರವು 10 ವರ್ಷಗಳ ಅಂತರದಲ್ಲಿ ಕೇಂದ್ರ ಸರ್ಕಾರಿ ನೌಕರರ ವೇತನ ಪರಿಷ್ಕರಣೆಯನ್ನು ಮಾಡುತ್ತಿದ್ದು, ರಾಜ್ಯ ಸರ್ಕಾರವು ತನ್ನ ನೌಕರರ ವೇತನ ಮತ್ತು ಭತ್ಯೆಗಳನ್ನು ಪ್ರತಿ 5 ರಿಂದ 6 ವರ್ಷಗಳ ಅವಧಿಯಲ್ಲಿ ಪರಿಷ್ಕರಿಸಿಕೊಂಡು ಬರುತ್ತಿದೆ. ಆದುದರಿಂದ, ಕೇಂದ್ರ ಸರ್ಕಾರದ ನಿಯಮಗಳು ಮತ್ತು ಕೇಂದ್ರ ವೇತನ ಆಯೋಗದ ಶಿಫಾರಸ್ಸುಗಳು ರಾಜ್ಯ ಸರ್ಕಾರದ ನೌಕರರಿಗೆ ಅನ್ವಯಿಸುವುದಿಲ್ಲ. |
| ಇ) | ಹಾಗಿದ್ದಲ್ಲಿ, ಮುಂದಿನ ಆಯ-ವ್ಯಯದಲ್ಲಿ ಸದರಿ ವಿಷಯವನ್ನು ಸೇರ್ಪಡೆಗೊಳಿಸಿ ರಾಜ್ಯ ಸರ್ಕಾರಿ ನೌಕರರಿಗೆ ಅನುಕೂಲ ಮಾಡಿಕೊಡಲಾಗುವುದೇ; | ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ. |
| ಈ) | ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು. | |

**ಸಂ: ಆಇ 03 ಎಸ್‌ಆರ್‌ಪಿ 2021**

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ.

8

# ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 437

ಮಾನ್ಯ ಸದಸ್ಯರ ಹೆಸರು : ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಉತ್ತರಿಸುವ ದಿನಾಂಕ : 02.02.2021

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದ ಸೇವೆಗೆ 2006ರ ನಂತರ ನೇಮಕವಾದ ನೌಕರರುಗಳಿಗೆ ಹಳೆ ಪಿಂಚಣಿ ವ್ಯವಸ್ಥೆ ಬದಲಾಗಿ ಹೊಸ ಪಿಂಚಣಿ ವ್ಯವಸ್ಥೆ ಅಳವಡಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ) | ಬಂದಿದ್ದಲ್ಲಿ, ಅಳವಡಿಸಲಾಗಿರುವ ಹೊಸ ಪಿಂಚಣಿ ವ್ಯವಸ್ಥೆಯನ್ನು ರದ್ದುಪಡಿಸಿ ಈ ನೌಕರರುಗಳನ್ನು ಹಳೆಯ ಪಿಂಚಣಿ ವ್ಯವಸ್ಥೆಗೆ ಒಳಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ನೂತನ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ/ಮಾರ್ಪಾಡು ಮಾಡಲು ಸರ್ಕಾರಿ ಆದೇಶ ಸಂಖ್ಯೆ: ಆಇ 107 ಪಿ.ಇ.ಎನ್. 2018, ದಿನಾಂಕ: 11.12.2018 ರಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ.<br><br>ಸದರಿ ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ. |
| ಇ) | ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಕ್ರಮವನ್ನು ಕೈಗೊಂಡು ಈ ನೌಕರರುಗಳನ್ನು ಹೊಸ ಪಿಂಚಣಿ ವ್ಯವಸ್ಥೆ ಬದಲಾಗಿ ಹಳೆ ಪಿಂಚಣಿಯ ವ್ಯವಸ್ಥೆಗೊಳಪಡಿಸಿ ಈ ನೌಕರರುಗಳಿಗೆ ಅನುಕೂಲ ಕಲ್ಪಿಸಿಕೊಡಲಾಗುವುದು; | |
| ಈ) | ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು); | |

ಆಇ 21 ಪಿಇಎನ್ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 442 |
| ಸದಸ್ಯರ ಹೆಸರು | : | ಶ್ರೀ ರಾಜೇಗೌಡ ಟಿ.ಡಿ.(ಶೃಂಗೇರಿ) |
| ಉತ್ತರಿಸುವ ದಿನಾಂಕ | : | 02.02.2021 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಚಿಕ್ಕಮಗಳೂರು ಜಿಲ್ಲೆ, ಎನ್.ಆರ್.ಪುರ ತಾಲ್ಲೂಕು ಬಕರಿಹಳ್ಳ–ಕಡುಹಿನಬೈಲು ಏತ ನೀರಾವರಿ ಯೋಜನೆಯಲ್ಲಿ ಕೆರೆ ಹೂಳೆತ್ತಲು, ಪೈಪ್‌ಲೈನ್ ಅಳವಡಿಕೆ, ಸಿಬ್ಬಂದಿಗಳಿಗೆ ವೇತನ ಇತ್ಯಾದಿ ನಿರ್ವಹಣೆಗಾಗಿ ನಿರ್ವಹಣಾ (Maintenance) ವೆಚ್ಚವೆಂದು ಸರ್ಕಾರ ಕಳೆದ ಮೂರು ವರ್ಷಗಳಿಂದ ಇದುವರೆವಿಗೂ ಎಷ್ಟು ಅನುದಾನವನ್ನು ಮಂಜೂರು ಮಾಡಿದೆ; (ವಿವರ ನೀಡುವುದು)</td><td rowspan="2">ಚಿಕ್ಕಮಗಳೂರು ಜಿಲ್ಲೆ, ಎನ್.ಆರ್.ಪುರ ತಾಲ್ಲೂಕು, ಬಕರಿಹಳ್ಳ–ಕಡುಹಿನಬೈಲು ಏತ ನೀರಾವರಿ ಯೋಜನೆಯ ನಿರ್ವಹಣೆಗಾಗಿ ಕಳೆದ ಮೂರು ವರ್ಷಗಳ ನಿರ್ವಹಣಾ (Maintenance) ವೆಚ್ಚದ ವಿವರ ಈ ಕೆಳಗಿನಂತಿರುತ್ತದೆ.<br>
<table>
<tr><th rowspan="2">2018–19</th><th colspan="2">2019–20</th></tr>
<tr><th>ಅನುದಾನ</th><th>ವೆಚ್ಚ</th></tr>
<tr><td>2018–19ನೇ ಸಾಲಿಗೆ ಮೂಲ ಗುತ್ತಿಗೆದಾರರ ಕಾಮಗಾರಿ ನಿರ್ವಹಣಾ ಅವಧಿ ಚಾಲ್ತಿಯಲ್ಲಿ ಇರುತ್ತದೆ. ಆದ್ದರಿಂದ ಹೆಚ್ಚುವರಿ ನಿರ್ವಹಣಾ ವೆಚ್ಚ ಇರುವುದಿಲ್ಲ.</td><td>39.00</td><td>38.50</td></tr>
</table>
ಪ್ರಸಕ್ತ 2020–21ನೇ ಸಾಲಿನಲ್ಲಿ ಶಿವಮೊಗ್ಗ ವಲಯಕ್ಕೆ ಲೆಕ್ಕ ಶೀರ್ಷಿಕೆ 2701 ರಡಿ ನೀಡಿರುವ ಅನುದಾನದ ಮಿತಿಯಲ್ಲಿ ಅಥವಾ ವಲಯದ ಉಳಿತಾಯದ ಮೊತ್ತದಲ್ಲಿ ಸದರಿ ಕಾಮಗಾರಿಯನ್ನು ಆಧ್ಯತೆ ಮೇಲೆ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.</td></tr>
<tr><td>ಆ)</td><td>ಈ ವೆಚ್ಚ ಬಿಡುಗಡೆಯಾಗದೇ ಕಾಮಗಾರಿಗಳು ಹಾಗೂ ಸಿಬ್ಬಂದಿಗಳ ವೇತನ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td></tr>
<tr><td>ಇ)</td><td>ಯಾವ ಕಾಲಮಿತಿಯೊಳಗೆ ಈ ನಿರ್ವಹಣಾ (Maintenance) ವೆಚ್ಚವನ್ನು ಬಿಡುಗಡೆಗೊಳಿಸಿ, ಸ್ಥಗಿತಗೊಂಡಿರುವ ಕಾಮಗಾರಿಗಳನ್ನು ಮರು ಚಾಲನೆಗೊಳಿಸಲಾಗುವುದು?</td><td>ಮೂಲ ಕಾಮಗಾರಿಯು ಈಗಾಗಲೇ ಪೂರ್ಣಗೊಂಡಿರುತ್ತದೆ. ಬಕರಿಹಳ್ಳ–ಕಡುಹಿನಬೈಲು ಏತ ನೀರಾವರಿ ಯೋಜನೆಯಡಿ ಬರುವ ಕೆರೆಗಳ ಅಭಿವೃದ್ಧಿ ಕಾಮಗಾರಿ ಮತ್ತು ಪೈಪ್‌ಲೈನ್ ಅಳವಡಿಕೆ ಕಾಮಗಾರಿಗಳನ್ನು ಕೈಗೊಳ್ಳುವ ವಿವರವಾದ ಯೋಜನಾ ವರದಿಯು ಕರ್ನಾಟಕ ನೀರಾವರಿ ನಿಗಮದಲ್ಲಿ ಪರಿಶೀಲನೆಯಲ್ಲಿದೆ.</td></tr>
</table>

ಸಂಖ್ಯೆ: ಜಸಂಇ 12 ಎಂಎಲ್ಎ 2021

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | | 450 |
| ಸದಸ್ಯರ ಹೆಸರು | : | ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್. (ದೇವನಹಳ್ಳಿ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ. | ದೇವನಹಳ್ಳಿ ವಿಧಾನಸಭಾ ಕ್ಷೇತ್ರವು ಮೀಸಲು ಕ್ಷೇತ್ರವಾಗಿದ್ದು, ಎಲ್ಲಾ ಅತ್ಯಂತ ಬಡ ಎಸ್.ಸಿ./ಎಸ್.ಟಿ. ಜನಾಂಗದವರು ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ವಿಶ್ವೇಶ್ವರಯ್ಯ ಜಲ ನಿಗಮದಲ್ಲಿ 2017-18, 2018-19 & 2019-20 ನೇ ಸಾಲಿನಲ್ಲಿ ದೇವನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಮಂಜೂರಾದ, ಬಿಡುಗಡೆಯಾದ & ಖರ್ಚಾದ ಅನುದಾನದ ವಿವರಗಳು ಈ ಕೆಳಕಂಡಂತಿವೆ. |
| ಆ. | ಬಂದಿದ್ದಲ್ಲಿ, ಇಲ್ಲಿನ ಜನರ ಕಾಲೋನಿಗಳ ಅಭಿವೃದ್ಧಿ ಹಾಗೂ ಜಮೀನುಗಳ ಹತ್ತಿರ ಚೆಕ್‌ಡ್ಯಾಂ ನಿರ್ಮಾಣಕ್ಕಾಗಿ ಕಳೆದ 3 ವರ್ಷಗಳಲ್ಲಿ ಎಸ್‌ಸಿಪಿ/ಟಿಎಸ್‌ಪಿ ಯೋಜನೆಗಳಡಿ ಮಂಜೂರಾದ ಅನುದಾನವೆಷ್ಟು; (ಪೂರ್ಣ ವಿವರ ನೀಡುವುದು) | (ರೂ. ಕೋಟಿಗಳಲ್ಲಿ) — ಕೆಳಗಿನ ಕೋಷ್ಟಕ ನೋಡಿ |
| ಇ. | ಬಿಡುಗಡೆಯಾದ ಅನುದಾನದ ಹಣದಲ್ಲಿ ಖರ್ಚಾದ ಹಣ ಎಷ್ಟು; ತಡೆಹಿಡಿದಿರುವ ಅನುದಾನವೆಷ್ಟು? (ಪೂರ್ಣ ವಿವರ ನೀಡುವುದು) | |

(ರೂ. ಕೋಟಿಗಳಲ್ಲಿ)

| ವರ್ಷ | ಮಂಜೂರಾದ ಅನುದಾನ | ಬಿಡುಗಡೆ ಅನುದಾನ | ಖರ್ಚಾದ ಅನುದಾನ | ಷರಾ |
|---|---|---|---|---|
| ವಿಶೇಷ ಘಟಕ ಯೋಜನೆ (ಎಸ್.ಸಿ.ಪಿ) | | | | |
| 2017–18 | 3.25 | 3.25 | 3.25 | ಕಾಮಗಾರಿಗಳು ಪೂರ್ಣಗೊಂಡಿವೆ |
| 2018–19 | 8.90 | 8.90 | 8.90 | |
| 2019–20 | 2.50 | 2.00 | 2.00 | |
| ಗಿರಿ ಜನ ಉಪ ಯೋಜನೆ (ಟಿ.ಎಸ್.ಪಿ) | | | | |
| 2017–18 | 1.20 | 1.20 | 1.20 | ಕಾಮಗಾರಿಗಳು ಪೂರ್ಣಗೊಂಡಿವೆ |
| 2018–19 | 3.60 | 3.60 | 3.60 | |
| 2019–20 | 1.50 | 1.50 | 1.20 | |

ಜಸಂಇ 03 ಎಂಎಲ್ಎ 2021

(ರಮೇಶ್ ಲ.ಜಾರಕಿಹೊಳಿ),
ಜಲಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನಸಭೆ

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **451** |
| **ಸದಸ್ಯರ ಹೆಸರು** | : | **ಶ್ರೀ ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)** |
| **ಉತ್ತರಿಸುವ ದಿನಾಂಕ** | : | **02.02.2021** |
| **ಉತ್ತರಿಸುವ ಸಚಿವರು** | : | **ಮಾನ್ಯ ಜಲಸಂಪನ್ಮೂಲ ಸಚಿವರು** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 10 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಅನುದಾನ ಮೀಸಲಿಟ್ಟಿದ್ದ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ರೂ.85.00 ಕೋಟಿ ವೆಚ್ಚದಲ್ಲಿ ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ನೀರನ್ನು ಎತ್ತಿ ಕೊಟ್ಟೂರು ಮತ್ತು ಇತರೆ 11 ಕೆರೆಗಳನ್ನು ತುಂಬಿಸುವ ಯೋಜನೆಯನ್ನು ಕೈಗೆತ್ತಿಗೊಳ್ಳುವ ಕುರಿತು 2019-20ನೇ ಸಾಲಿನ ಆಯವ್ಯಯದ ಭಾಷಣೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ.<br>ಆದರೆ ಸದರಿ ಯೋಜನೆಗೆ ಅನುದಾನವನ್ನು ಮೀಸಲಿಟ್ಟಿರುವುದಿಲ್ಲ. |
| ಆ | ಸದರಿ ಯೋಜನೆಯನ್ನು ಪರಿಷ್ಕರಿಸಿ 17 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ರೂ. 379.00 ಕೋಟಿ ಮೊತ್ತದ ಯೋಜನಾ ವರದಿಯೊಂದಿಗೆ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಈ ಪ್ರಸ್ತಾವನೆ ಯಾವ ಹಂತದಲ್ಲಿದೆ; | ಸದರಿ ಯೋಜನೆಯ ಕುರಿತು ನೀರಿನ ಹಂಚಿಕೆ, ಲಭ್ಯತೆ, ಆರ್ಥಿಕ ಮತ್ತು ತಾಂತ್ರಿಕ ಸಾಧ್ಯ ಸಾಧ್ಯತೆ ಬಗ್ಗೆ ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿದೆ. |
| ಇ | ಈ ಯೋಜನೆಯನು ಯಾವಾಗ ಜಾರಿ ಮಾಡಲಾಗುವುದು? | |

**ಸಂಖ್ಯೆ: ಜಸಂಇ 14 ಎಂಎಲ್‌ಎ 2021**

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 453
2. ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್
3. ಉತ್ತರಿಸಬೇಕಾದ ದಿನಾಂಕ : 02-02-2021
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಮತದಹಳ್ಳ ಕೆರೆಗೆ ಸಂಬಂಧಪಟ್ಟಂತೆ ಕಾಮಗಾರಿಯ ಆರ್ಥಿಕ ಬಿಕ್ಕಟ್ಟನ್ನು ಸರ್ಕಾರವು ಅನುಮೋದಿಸಿದೆಯೇ ; | ಹೇಮಾವತಿ ಯೋಜನೆ ತುಮಕೂರು ಶಾಖಾ ನಾಲೆ ಕಿ.ಮೀ 105.725 ರಿಂದ ಗುರುತ್ವಾಕರ್ಷಣೆ ಕೊಳವೆಗಳ ಮೂಲಕ ತುಮಕೂರು ಜಿಲ್ಲೆಯ ಗುಬ್ಬಿ ಮತ್ತು ಶಿರಾ ತಾಲ್ಲೂಕಿನ 42 ಗ್ರಾಮಗಳ ಕುಡಿಯುವ ನೀರಿನ ಬೇಡಿಕೆಯನ್ನು ಹಾಗಲವಾಡಿ ಹೋಬಳಿ ಮಂಚಲದೊರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮತದಹಳ್ಳ ಮತ್ತು ಇತರೆ ಕೆರೆಗಳಿಗೆ ಕುಡಿಯುವ ನೀರೊದಗಿಸುವ ಯೋಜನೆಯ ಕಾಮಗಾರಿಯ ರೂ.25.65 ಕೋಟಿಗಳ ಮೊತ್ತದ ಪ್ರಸ್ತಾವನೆಗೆ ದಿನಾಂಕ:08-03-2019 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. |
| ಆ | ಅನುಮೋದಿಸದೇ ಇದ್ದಲ್ಲಿ, ಕಾರಣವೇನು ; | 2019-20ನೇ ಸಾಲಿನಲ್ಲಿ ವಿವಿಧ ವಲಯಗಳಿಂದ ಒಟ್ಟಾರೆ ರೂ.16048.00 ಕೋಟಿಗಳ ಕಾರ್ಯಕ್ರಮ ಪಟ್ಟಿ ಅನುಮೋದನೆಗೆ ಕಾವೇರಿ ನೀರಾವರಿ ನಿಗಮಕ್ಕೆ ಬೇಡಿಕೆ ಬಂದಿದ್ದು, ಸದರಿ ಕಾರ್ಯಕ್ರಮ ಪಟ್ಟಿಯನ್ನು ದಿನಾಂಕ:20-09-2019 ರಂದು ನಡೆದ ಕಾವೇರಿ ನೀರಾವರಿ ನಿಗಮದ 70ನೇ ಮಂಡಳಿ ಸಭೆಯ ಮುಂದೆ ಮಂಡಿಸಿದ್ದು, ಮಂಡಳಿಯು ಈಗಾಗಲೇ ಪ್ರಗತಿಯಲ್ಲಿರುವ ರೂ.6254.48 ಕೋಟಿ ಮೊತ್ತದ ಕಾಮಗಾರಿಗಳನ್ನು, ಟೆಂಡರ್ ಪ್ರಕ್ರಿಯೆಯಲ್ಲಿರುವ ರೂ.2663.24 ಕೋಟಿ ಮೊತ್ತದ ಕಾಮಗಾರಿಗಳನ್ನು ಹಾಗೂ ರೂ.2663.24 ಕೋಟಿ ಮೊತ್ತದಲ್ಲಿ ಸೇರ್ಪಡೆಯಾಗದೆ ಪ್ರಸ್ತುತ ಮಂಡಳಿ ಸಭೆಯಲ್ಲಿ ಅನುಮೋದನೆಯಾಗಿರುವ ರೂ.322.54 ಕೋಟಿ ಮೊತ್ತದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಿರುತ್ತದೆ. ಅಂದರೆ ಒಟ್ಟಾರೆ ರೂ.9240.26 ಕೋಟಿಗಳಿಗೆ ಅನುಮೋದನೆ ನೀಡಿರುತ್ತದೆ. ಉಳಿಕೆ ರೂ.6808.65 ಕೋಟಿ (ರೂ.7131.19 ಕೋಟಿ - ರೂ.322.54 ಕೋಟಿ) ಮೊತ್ತದ ಇನ್ನು ಅನುಷ್ಠಾನಗೊಳ್ಳದೆ ಟೆಂಡರ್ ಪ್ರಕ್ರಿಯೆಯಲ್ಲಿರುವ, ತಾಂತ್ರಿಕ ಮಂಜೂರಾತಿ ಆಗಬೇಕಿರುವ ಹಾಗೂ ಟೆಂಡರ್ ಆಹ್ವಾನಿಸಬೇಕಿರುವ ಕಾಮಗಾರಿಗಳನ್ನು ಕೈಬಿಡಲು ಸೂಚಿಸಲಾಗಿರುತ್ತದೆ. |
| ಇ | ಅನುಮೋದಿಸಿದ್ದಲ್ಲಿ, ಕಾಮಗಾರಿ ಪ್ರಾರಂಭ ಮಾಡಲು ಎಷ್ಟು ಸಮಯ ಬೇಕಾಗಿರುತ್ತದೆ ? ಸಂಪೂರ್ಣ ವಿವರ ನೀಡುವುದು) | ಸದರಿ ಕಾಮಗಾರಿಯು ಕುಡಿಯುವ ನೀರಿನ ಬೇಡಿಕೆಯನ್ನು ಪೂರೈಸಲು ಕೆರೆ ತುಂಬಿಸುವ ಯೋಜನೆಯಾಗಿದ್ದು, ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾದ ಅವಶ್ಯಕತೆ ಇರುವುದಾಗಿ ತಿಳಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಅನುಮೋದನೆ ನೀಡುವಂತೆ ಕೋರಿ ಕಾವೇರಿ ನೀರಾವರಿ ನಿಗಮದಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ. |

*ಸಂಖ್ಯೆ:ಜಸಂಇ 08 ಎನ್‌ಎಲ್‌ಎ 2021*

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನ ಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 465 |
| ಸದಸ್ಯರ ಹೆಸರು | : ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ) |
| ಉತ್ತರಿಸುವ ದಿನಾಂಕ | : 02.02.2021 |
| ಉತ್ತರಿಸುವ ಸಚಿವರು | : ಜಲಸಂಪನ್ಮೂಲ ಸಚಿವರು |

| ಕ್ರ ಸಂ: | ಪ್ರಶ್ನೆ | ಉತ್ತರ |
|---|---|---|
| ಅ) | ನಾರಾಯಣಪುರ ಬಲದಂಡೆ (ಎನ್.ಆರ್.ಬಿ.ಸಿ) ಕಿ.ಮೀ.95.00 ರಿಂದ 168 ಕಿ.ಮೀ.ವರೆಗೆ ಕಾಲುವೆ ನಿರ್ಮಾಣ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ; ಈ ಕಾಮಗಾರಿ ಪ್ರಾರಂಭವಾಗಿ 3 ವರ್ಷಗಳಾದರೂ ಇದುವರೆಗೂ ಮುಕ್ತಾಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೃಷ್ಣಾ ನ್ಯಾಯಾಧೀಕರಣ-2ರ ತೀರ್ಪಿನನ್ವಯ ಕೃ.ಮೇ.ಯೋ. ಹಂತ-3 ರ ಯೋಜನೆ ಅನುಷ್ಠಾನಕ್ಕಾಗಿ 130.00 ಟಿ.ಎಂ.ಸಿ. ನೀರಿನ ಹಂಚಿಕೆಯಾಗಿದ್ದು, ಸದರಿ ನ್ಯಾಯಾಧೀಕರಣದ ಅಂತಿಮ ತೀರ್ಪು ಇನ್ನು ಅಧಿಸೂಚನೆಗೊಂಡಿರುವುದಿಲ್ಲ.<br><br>ಆದಾಗ್ಯೂ, ಕೃ.ಮೇ.ಯೋ. ಹಂತ-3ರಡಿಯ ಒಂದು ಉಪ ಯೋಜನೆಯಾದ ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಈಗಾಗಲೇ ಕಿ.ಮೀ.95.00 ರಿಂದ 130.00 ವರೆಗಿನ ಮುಖ್ಯ ಕಾಲುವೆ ವಿಸ್ತರಣೆ ಕಾಮಗಾರಿ ಪೂರ್ಣಗೊಂಡಿರುತ್ತದೆ.<br><br>ಮುಂದುವರೆದು, ಕೈಗೆತ್ತಿಕೊಂಡಿರುವ ನಾ.ಬ.ದಂ.ಕಾ ಮುಖ್ಯ ಕಾಲುವೆ ಕಿ.ಮೀ.130.00 ರಿಂದ 168.50 ಹಾಗೂ ಕೆಲವು ವಿತರಣಾ ಕಾಲುವೆ ಜಾಲದ ನಿರ್ಮಾಣ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿರುತ್ತದೆ. |
| ಆ) | ಕಾಮಗಾರಿ ವಿಳಂಬಕ್ಕೆ ಕಾರಣವೇನು ಮತ್ತು ವಿಳಂಬಕ್ಕೆ ಕಾರಣವಾದವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ ಎಂಬ ಸಂಪೂರ್ಣ ವಿವರವನ್ನು ನೀಡುವುದು; | |
| ಇ) | ಈ ಕಾಮಗಾರಿಗೆ ಒಟ್ಟಾರೆ ಎಷ್ಟು ಭೂಮಿಯ ಅವಶ್ಯಕವಾಗಿರುತ್ತದೆ, ಇದುವರೆಗೂ ಎಷ್ಟು ಎಕರೆಯನ್ನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ; ಭೂಸ್ವಾಧೀನ ಮಾಡಿಕೊಂಡ ಎಲ್ಲಾ ರೈತರಿಗೆ ಹಣ ಪಾವತಿ ಮಾಡಲಾಗಿದೆಯೇ; | ಈ ಕಾಮಗಾರಿ ಅನುಷ್ಠಾನಕ್ಕಾಗಿ ಒಟ್ಟು 1,133 ಎಕರೆ ಕ್ಷೇತ್ರ ಜಮೀನು ಅವಶ್ಯಕವಾಗಿದ್ದು ಇದುವರೆಗೆ 407ಎ-20 ಗುಂ. ಕಲಂ 11(1) ಅಧಿಸೂಚನೆಗೊಂಡಿದ್ದು, 382ಎ-07ಗುಂ. ಆರ್.ಆರ್.ಎ.ಪಿ. ಗೆ ಬಾಕಿ ಇರುತ್ತದೆ ಮತ್ತು 343ಎ-13ಗುಂ. ಕ್ಷೇತ್ರಕ್ಕೆ ಐತೀರ್ಪು ಮಂಜೂರಿಯಾಗಿರುತ್ತದೆ. |
| ಈ) | ಇದುವರೆಗೂ ಭೂಸ್ವಾಧೀನವಾದ ಬಹಳಷ್ಟು ರೈತರಿಗೆ ಪರಿಹಾರ ಹಣ ಪಾವತಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸದರಿ ರೈತರಿಗೆ ಪರಿಹಾರ ಪಾವತಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು; ಪರಿಹಾರ ಪಾವತಿಸಲು ವಿಳಂಬವಾಗಿರುವುದಕ್ಕೆ ಕಾರಣವೇನು; ಹಾಗೂ ವಿಳಂಬಕ್ಕೆ ಕಾರಣವಾದವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ವಿವರವನ್ನು ನೀಡುವುದು) | ಐತೀರ್ಪು ಮಂಜೂರಿಯಾದ ಭೂಮಾಲಿಕರಿಗೆ ಕಲಂ 37(2) ಹಣ ಪಾವತಿಗೆ ಸಂಬಂಧಿಸಿದ ನೋಟೀಸ್ ಜಾರಿ ಮಾಡಲಾಗಿದ್ದು, ಅರ್ಧಕ್ಕಿಂತ ಹೆಚ್ಚು ಭೂಮಾಲೀಕರಿಗೆ ಪರಿಹಾರ ಹಣ ಜಮಾವಾಗಿದ್ದು ಬಾಕಿ ಉಳಿದ ರೈತರು ಅವಶ್ಯಕ ದಾಖಲೆಗಳನ್ನು ಲಗತ್ತಿಸಿ ಪ್ಯಾರಾ 30 ರಡಿ ಓಚರ್ ಒದಗಿಸಿದ ನಂತರ ಪರಿಹಾರ ಧನ ವಿತರಿಸಲು ಕ್ರಮ ಕೈಕೊಳ್ಳಲಾಗುವುದು. |

ಸಂಖ್ಯೆ: ಜಸಂಇ 5 ಡಬ್ಲ್ಯೂಬಿಎಂ 2021

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 466 |
| ಸದಸ್ಯರ ಹೆಸರು | : | ಶ್ರೀ ನಿರಂಜನ್ ಕುಮಾರ್ ಸಿ.ಎಸ್. (ಗುಂಡ್ಲುಪೇಟೆ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಹಾಳಾಗಿದ್ದು, ಇದರ ದುರಸ್ತಿ ಕಾರ್ಯ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವ್ಯಾಪ್ತಿಯಲ್ಲಿರುವ ಗುಂಡ್ಲಪೇಟೆ ವಿಧಾನಸಭಾ ಕ್ಷೇತ್ರದಲ್ಲಿ 2020-21ನೇ ಸಾಲಿನಲ್ಲಿ (ಡಿಸೆಂಬರ್-2020 ಅಂತ್ಯಕ್ಕೆ) ಒಟ್ಟು 288 ಪರಿವರ್ತಕಗಳು (15 ಕೆವಿಎ-02, 25 ಕೆವಿಎ-121, 63 ಕೆವಿಎ-108, 100 ಕೆವಿಎ-54 ಹಾಗೂ 250 ಕೆವಿಎ-03 ಸಂಖ್ಯೆ) ವಿಫಲಗೊಂಡಿದ್ದು ಎಲ್ಲಾ ಪರಿವರ್ತಕಗಳನ್ನು ಬದಲಾಯಿಸಲಾಗಿರುತ್ತದೆ. ಪರಿವರ್ತಕಗಳನ್ನು ದುರಸ್ಥಿಗೊಳಿಸುವ ಕಾರ್ಯದಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ. |
| ಆ) | ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು) | |
| ಇ) | ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಹೊಸದಾಗಿ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲು ಇರುವ ಬೇಡಿಕೆಗಳು ಎಷ್ಟು? (ಗ್ರಾಮವಾರು ಸಂಪೂರ್ಣ ವಿವರ ನೀಡುವು) | ಗುಂಡ್ಲಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಹೊಸದಾಗಿ ಟ್ರಾನ್ಸ್ ಫಾರ್ಮರ್‌ಗಳನ್ನು ಅಳವಡಿಸಲು ಇರುವ ಬೇಡಿಕೆಯ ವಿವರಗಳು ಈ ಕೆಳಗಿನಂತಿವೆ: |

| ಉಪವಿಭಾಗ | 25 ಕೆವಿಎ | 63 ಕೆವಿಎ | 100 ಕೆವಿಎ | ಒಟ್ಟು |
|---|---|---|---|---|
| ಗುಂಡ್ಲುಪೇಟೆ ಉಪವಿಭಾಗ | 439 | 17 | 10 | 466 |
| ಬೇಗೂರು ಉಪವಿಭಾಗ | 290 | 10 | | 305 |
| ಗುಂಡ್ಲುಪೇಟೆ ತಾಲ್ಲೂಕು ಒಟ್ಟು | 729 | 27 | 15 | 771 |

ಗ್ರಾಮವಾರು ಪರಿವರ್ತಕಗಳ ಬೇಡಿಕೆಯ ವಿವರಗಳು ಅಗಾಧವಾದ ಮಾಹಿತಿಯಾಗಿರುವುದರಿಂದ ಉಪವಿಭಾಗವಾರು ಮಾಹಿತಿಯನ್ನು ಸಲ್ಲಿಸಲಾಗಿದೆ.

ಸಂಖ್ಯೆ: ಎನರ್ಜಿ 9 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

## ಕರ್ನಾಟಕ ವಿಧಾನ ಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 470 |
| ಸದಸ್ಯರ ಹೆಸರು | : ಡಾ:ಅಜಯ್ ಧರ್ಮಸಿಂಗ್ (ಜೇವರ್ಗಿ) |
| ಉತ್ತರಿಸುವ ದಿನಾಂಕ | : 02.02.2021 |
| ಉತ್ತರಿಸುವ ಸಚಿವರು | : ಜಲಸಂಪನ್ಮೂಲ ಸಚಿವರು |

| ಕ್ರ ಸಂ: | ಪ್ರಶ್ನೆ | ಉತ್ತರ |
|---|---|---|
| ಅ) | ಕೃಷ್ಣಾ ಮೇಲ್ದಂಡೆ ಯೋಜನೆ ವ್ಯಾಪ್ತಿಯ ನಾರಾಯಣಪುರ ಎಡದಂಡೆ ಕಾಲುವೆಯಡಿಯಲ್ಲಿ SCADA Automation and GIS System ಅಳವಡಿಸುವ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆಯೇ; | ನಾರಾಯಣಪೂರ ಎಡದಂಡೆ ಕಾಲುವೆ ಜಾಲದ ಆಧುನೀಕರಣ ಯೋಜನೆಯನ್ನು (ಎನ್.ಎಲ್.ಬಿ.ಸಿ–ಇ.ಆರ್.ಎಂ) ಕೇಂದ್ರ ಸರ್ಕಾರದ AIBP- PMKSY ಸಹಾಯಧನದಡಿ 2013–14ರಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ನೀರಿನ ಬಳಕೆ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಯೋಜನೆಯಡಿ SCADA Based Automation and GIS Based Water Management System ಅಳವಡಿಸುವುದು ಒಳಗೊಂಡಿರುತ್ತವೆ. |
| ಆ) | ಹಾಗಿದ್ದಲ್ಲಿ, ಈ ಕಾಮಗಾರಿಯ ಅಂದಾಜು ವೆಚ್ಚವೆಷ್ಟು ಹಾಗೂ ಟೆಂಡರ್ ಅನ್ನು ಯಾರಿಗೆ ನೀಡಲಾಗಿದೆ; (ಪೂರ್ಣ ವಿವರ ನೀಡುವುದು) | ಎನ್.ಎಲ್.ಬಿ.ಸಿ–ಇ.ಆರ್.ಎಂ. ಯೋಜನೆಯಡಿ ಈ ಕೆಳಗಿನಂತೆ SCADA Based Automation and GIS Based Water Management System ಅಳವಡಿಸುವ ಕಾಮಗಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ವಹಿಸಿ ಅನುಷ್ಠಾನಗೊಳಿಸಲಾಗುತ್ತಿದೆ. |
| ಇ) | ಸದರಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಿ ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ? | (ರೂ. ಕೋಟಿಗಳಲ್ಲಿ) |

(ರೂ. ಕೋಟಿಗಳಲ್ಲಿ)

| ಯೋಜನೆಯ ವಿವರ | ಗುತ್ತಿಗೆದಾರರ ಹೆಸರು | ಗುತ್ತಿಗೆ ಮೊತ್ತ | ಇತ್ತೀಚಿನ ಹಂತ |
|---|---|---|---|
| ಎನ್‌ಎಲ್‌ಬಿಸಿ & ಹೆಚ್‌ಬಿಸಿ ಸ್ಕಾಡಾ ಹಂತ–1 ರ ಯೋಜನೆ | ಮೆ: ಮೆಕಟ್ರಾನಿಕ್ಸ್ ಸಿಸ್ಟಮ್ ಪ್ರೈ. ಲಿಮಿಟೆಡ್, ಪುಣೆ | 139.46 | ಕಾಮಗಾರಿಯು ಪೂರ್ಣಗೊಂಡಿದ್ದು, 5 ವರ್ಷದ ಓ & ಎಂ ಅವಧಿಯಲ್ಲಿದೆ. |
| ಎನ್‌ಎಲ್‌ಬಿಸಿ, ಎಸ್‌ಬಿಸಿ, ಎಂಬಿಸಿ, ಜೆಬಿಸಿ & ಐಬಿಸಿ ಸ್ಕಾಡಾ ಹಂತ–2ರ ಯೋಜನೆ | ಮೆ: ಮೇಧಾ ಸರ್ವೊ ಡ್ರೈವ್ಸ್ ಪ್ರೈ. ಲಿಮಿಟೆಡ್, – ಮೆ: ರೂಬಿಕಾನ್ ಸಿಸ್ಟಮ್ಸ್ (ಜೆವಿ) | 1123.25 | ಕಾಮಗಾರಿಯು ಪ್ರಗತಿಯಲ್ಲಿದೆ |

ಸಂಖ್ಯೆ: ಜಸಂಇ 4 ಡಬ್ಲ್ಯೂಬಿಎಂ 2021

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

## ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 471
ಸದಸ್ಯರ ಹೆಸರು : ಡಾ:ಅಜಯ್ ಧರ್ಮಸಿಂಗ್ (ಜೇವರ್ಗಿ)
ಉತ್ತರಿಸುವ ದಿನಾಂಕ : 02.02.2021
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ ಸಂ: | ಪ್ರಶ್ನೆ | ಉತ್ತರ |
|---|---|---|
| ಅ) | ಮಲ್ಲಾಬಾದ್ ಏತ ನೀರಾವರಿ ಯೋಜನೆ ಲಿಫ್ಟ್-1, ಲಿಫ್ಟ್-2 ಹಾಗೂ ಲಿಫ್ಟ್-3 ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗಿದೆ; | ಮಲ್ಲಾಬಾದ ಏತ ನೀರಾವರಿ ಯೋಜನೆಯು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿಯ ಒಂದು ಉಪ ಯೋಜನೆಯಾಗಿದ್ದು, ಈ ಯೋಜನೆಯಡಿ ಕ್ರಮವಾಗಿ ಜೆ.ಬಿ.ಸಿ, ಎಂ.ಬಿ.ಸಿ ಮತ್ತು ಎಸ್.ಬಿ.ಸಿ. ಕಾಲುವೆಗಳಿಂದ ಆಫ್ ಟೇಕ್ ಹೊಂದಿರುವ 3 ಲಿಫ್ಟ್‌ಗಳು ಒಳಗೊಂಡಿದೆ. ಲಿಫ್ಟ್-1 & 2 ಕಾಮಗಾರಿಗಳು 2010ರಲ್ಲಿ ಕೈಗೆತ್ತಿಕೊಳ್ಳಲಾಗಿದೆ, ಲಿಫ್ಟ್-3ರ ಕಾಮಗಾರಿಯು 2013ರಲ್ಲಿ ಕೈಗೆತ್ತಿಕೊಳ್ಳಲಾಗಿದೆ. |
| ಆ) | ಸದರಿ ಕಾಮಗಾರಿಯ ಅಂದಾಜು ವೆಚ್ಚವೆಷ್ಟು ಹಾಗೂ ನಿರ್ವಹಣೆಯನ್ನು ಯಾರಿಗೆ ವಹಿಸಲಾಗಿದೆ; ಪ್ರಸ್ತುತ ಸದರಿ ಏತ ನೀರಾವರಿ ಯೋಜನೆಯಡಿ ಬರುವಂತಹ ಮುಖ್ಯ ಕಾಲುವೆಗಳು ಹಾಗೂ ಉಪ ಕಾಲುವೆಗಳ ಕಾಮಗಾರಿಯನ್ನು ಪೂರಕವಾಗಿ ನಿರ್ಮಿಸಲಾಗುತ್ತಿದೆಯೇ; | ಮಲ್ಲಾಬಾದ್ ಏತ ನೀರಾವರಿ ಯೋಜನೆಯ ಅನುಮೋದಿತ ಅಂದಾಜು ಮೊತ್ತ ರೂ.578.27 ಕೋಟಿ ಆಗಿರುತ್ತದೆ.<br><br>ಸದರಿ ಯೋಜನೆಯಡಿಯ ಮುಖ್ಯ ಸ್ಥಾವರ, ಮುಖ್ಯ ಕಾಲುವೆ ಹಾಗೂ ಶಾಖಾ ಕಾಲುವೆಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಇಲ್ಲಿಯವರೆಗೆ ಒಟ್ಟಾರೆ ರೂ.207.27 ಕೋಟಿ ಖರ್ಚು ಮಾಡಲಾಗಿರುತ್ತದೆ.<br><br>ಸದರಿ ಯೋಜನೆಯಡಿ ಮುಖ್ಯ ಸ್ಥಾವರಗಳ ನಿರ್ವಹಣೆಯನ್ನು ಈ ಕೆಳಗಿನಂತೆ ಗುತ್ತಿಗೆದಾರರಿಂದ ನಿರ್ವಹಿಸಲಾಗುತ್ತಿದೆ.<br>ಲಿಫ್ಟ್-1 – ಶ್ರೀ ಸಿ.ಐ ಅಂಗಡಿ, (ವಾರ್ಷಿಕ ನಿರ್ವಹಣೆ)<br>ಲಿಫ್ಟ್-2 – ಶ್ರೀ ಕೆ. ದೊಡ್ಡಹನುಮಂತಪ್ಪ (ಮೂಲ ಗುತ್ತಿಗೆದಾರರು)<br>ಲಿಫ್ಟ್-3 – ಮೆ: ಆರ್.ಆರ್. ಸರ್ವಿಸ್ (ವಾರ್ಷಿಕ ನಿರ್ವಹಣೆ) |
| ಇ) | ಹಾಗಿದ್ದಲ್ಲಿ, ಸದರಿ ಕಾಲುವೆಗಳ ನಿರ್ಮಾಣಕ್ಕಾಗಿ ಇಲ್ಲಿಯವರೆಗೆ ವೆಚ್ಚ ಮಾಡಿರುವ ಮೊತ್ತವೆಷ್ಟು ಹಾಗೂ ಉಳಿದ ಕಾಮಗಾರಿ ಪೂರ್ಣಗೊಳಿಸಲು ಅವಶ್ಯವಿರುವ ಹಣದ ಮೊತ್ತವೆಷ್ಟು; (ವಿವರ ನೀಡುವುದು) | |
| ಈ) | ಸದರಿ ಏತ ನೀರಾವರಿ ಯೋಜನೆಯ ಪೂರ್ಣ ಕಾಮಗಾರಿಗಳನ್ನು ಯಾವಾಗ ಪೂರ್ಣ ಗೊಳಿಸಲಾಗುವುದು; (ಸಂಪೂರ್ಣ ವಿವರ ನೀಡುವುದು) | ಸದರಿ ಯೋಜನೆಯಡಿಯ 3 ಲಿಫ್ಟ್‌ಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಈಗಾಗಲೇ ಕೈಗೊಂಡಿರುವ ಮುಖ್ಯ/ಶಾಖಾ ಕಾಲುವೆ ಮತ್ತು ವಿತರಣಾ ಕಾಲುವೆ ಜಾಲಗಳ ನಿರ್ಮಾಣ ಕಾಮಗಾರಿಗಳನ್ನು ಮುಂದುವರೆಸುತ್ತಾ ಆದ್ಯತೆಯ ಮೇರೆಗೆ ಕಾರ್ಯಗತಗೊಳಿಸಲಾಗುತ್ತಿದೆ. ಯೋಜನೆಯಡಿಯ ಬಾಕಿ ವಿತರಣಾ ಕಾಲುವೆ ಜಾಲಗಳನ್ನು (ಕೇಂದ್ರ ಸರ್ಕಾರದಿಂದ ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪಿಗೆ ಗೆಜೆಟ್ ಅಧಿಸೂಚನೆಗೆ ಒಳಪಟ್ಟು) ಅನುದಾನದ ಲಭ್ಯತೆ ಮೇರೆಗೆ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. |
| ಉ) | ಸದರಿ ಯೋಜನೆಯಿಂದ ನೀರಾವರಿಗೊಳಪಡುವ ಅಚ್ಚುಕಟ್ಟು ಪ್ರದೇಶ ವಿಸ್ತೀರ್ಣವೆಷ್ಟು? (ಪೂರ್ಣ ವಿವರ ನೀಡುವುದು) | ಸದರಿ ಯೋಜನೆಯಡಿ ಒಟ್ಟಾರೆ ನೀರಾವರಿಗೆ ಒಳಪಡುವ ಅಚ್ಚುಕಟ್ಟು ಕ್ಷೇತ್ರ 33,730 ಹೆಕ್ಟೇರ್ ಆಗಿರುತ್ತದೆ. |

ಸಂಖ್ಯೆ: ಜಸಂಇ 7 ಡಬ್ಲ್ಯೂಬಿಎಂ 2021

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನ ಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 475 |
| ಸದಸ್ಯರ ಹೆಸರು | : | ಶ್ರೀ ತುಕಾರಾಮ್ ಈ. (ಸಂಡೂರ್) |
| ಉತ್ತರಿಸುವ ಸಚಿವರು | : | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 02.02.2021. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಎಲ್ಲಾ ವಿಧಾನಸಭಾ ಸದಸ್ಯರು ಪ್ರಸಕ್ತ ಹಣಕಾಸು ವರ್ಷ 2019-20ನೇ ಸಾಲಿನಲ್ಲಿ ರೂ.2.00 ಕೋಟಿಯ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರದಿಂದ ಸದರಿ ಕ್ರಿಯಾ ಯೋಜನಗೆ ಬಿಡುಗಡೆ ಮಾಡಿದ ಅನುದಾನವೆಷ್ಟು; | ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಅನುದಾನದ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಅನುಮೋದನೆ ನೀಡುವ ಜವಾಬ್ದಾರಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸೇರಿದ್ದು, ಮಾನ್ಯ ಶಾಸಕರುಗಳು ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸುವುದಿಲ್ಲ.<br><br>ಸರ್ಕಾರವು ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ಲಭ್ಯವಿರುವ ಅನುದಾನದ ಪ್ರಗತಿಯನ್ವಾಧರಿಸಿ ಅನುದಾನ ಬಿಡುಗಡೆ ಮಾಡಲಾಗುತ್ತದೆ. 2019-20ನೇ ಸಾಲಿನಲ್ಲಿ ಪ್ರಗತಿಯನ್ವಾಧರಿಸಿ ರೂ.296.09 ಕೋಟಿ ರೂಗಳನ್ನು ಬಿಡುಗಡೆಮಾಡಲಾಗಿದೆ. |
| ಆ) | ಪ್ರಸಕ್ತ 2020-21ನೇ ಸಾಲಿನಲ್ಲಿ ಶಾಸಕರಿಗೆ ಕ್ಷೇತ್ರಾಭಿವೃದ್ಧಿಗೆ ಕ್ರಿಯಾ ಯೋಜನೆಯನ್ನು ಸಲ್ಲಿಸಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿರುವ ಅನುದಾನದ ಮೊತ್ತವೆಷ್ಟು; ಅದರಲ್ಲಿ ಬಿಡುಗಡೆ ಮಾಡಿದ ಮೊತ್ತವೆಷ್ಟು? | 2020-21ನೇ ಸಾಲಿನಲ್ಲಿ ಶಾಸಕರ ಕ್ಷೇತ್ರಾಭಿವೃದ್ಧಿ ಯೋಜನಗೆ ಪ್ರಾರಂಭದಲ್ಲಿ ಕ್ರಿಯಾ ಯೋಜನೆಗಳು ತಯಾರಿಸಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಅದರಂತೆ ಪ್ರತಿ ಕ್ಷೇತ್ರಕ್ಕೆ ತಲಾ ರೂ.1.50 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. |

**ಸಂಖ್ಯೆ:ಪಿಡಿಎಸ್ 3 ಕೆಎಲ್ ಎಸ್ 2021**

**(ಕೆ.ಸಿ.ನಾರಾಯಣಗೌಡ)**
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

# ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 476
2. ಸದಸ್ಯರ ಹೆಸರು : ಶ್ರೀ ರಾಜೀವ್ ಪಿ (ಕುಡಚಿ)
3. ಉತ್ತರಿಸಬೇಕಾದ ದಿನಾಂಕ : 02.02.2021
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬೆಳಗಾವಿ ಜಿಲ್ಲೆಯ, ಕುಡಚಿ ಮತಕ್ಷೇತ್ರದ ಹಾರೂಗೇರಿ-ಯಬರಟ್ಟಿ (ಶ್ರೀ ಚನ್ನವೃಷಭೇಂದ್ರ) ಏತ ನೀರಾವರಿ ಯೋಜನೆ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ; | ಬೆಳಗಾವಿ ಜಿಲ್ಲೆಯ, ಕುಡಚಿ ಮತಕ್ಷೇತ್ರದ ಹಾರೂಗೇರಿ-ಯಬರಟ್ಟಿ (ಶ್ರೀ ಚನ್ನವೃಷಭೇಂದ್ರ) ಏತ ನೀರಾವರಿ ಯೋಜನೆಯ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಸರ್ವೆ ಕನ್ಸಲ್ಟೆನ್ಸಿ ಕಾಮಗಾರಿಯನ್ನು ವಹಿಸಲು ಟೆಂಡರ್ ಪಕ್ರಿಯೆ ಜಾರಿಯಲ್ಲಿದೆ. ಸದರಿ ಯೋಜನೆಯ ಕುರಿತು ನೀರಿನ ಹಂಚಿಕೆ, ಲಭ್ಯತೆ, ಆರ್ಥಿಕ ಮತ್ತು ತಾಂತ್ರಿಕ ಸಾಧ್ಯ-ಸಾಧ್ಯತೆ ಬಗ್ಗೆ ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿದೆ. |
| ಆ) | ಈ ಯೋಜನೆಯ ಪ್ರಸ್ತಾವನೆ ಬಂದಿದ್ದಲ್ಲಿ ಯಾವ ಕಾಲಮಿತಿಯೊಳಗೆ ಅನುಮೋದನೆ ನೀಡಲಾಗುವುದು; ಈ ಯೋಜನೆ ಯಾವ ಹಂತದಲ್ಲಿ ಇದೆ; (ವಿವರ ನೀಡುವುದು) | ಅನ್ವಯಿಸುವುದಿಲ್ಲ. |
| ಇ) | ಈ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಿ ಈ ಪಟ್ಟಣಗಳ ಸಾರ್ವಜನಿಕರಿಗೆ ಅನುಕೂಲ ಮಾಡಲಾಗುವುದು; | |
| ಈ) | ಈ ಯೋಜನೆಯ ಅಂದಾಜು ವೆಚ್ಚ ವೆಷ್ಟು? (ವಿವರ ನೀಡುವುದು) | |

**ಸಂಖ್ಯೆ: ಜಸಂಇ 05 ಡಬ್ಲ್ಯೂಎಲ್ಎ 2021**

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 477 |
| ಸದಸ್ಯರ ಹೆಸರು | : | ಶ್ರೀ ಕರುಣಾಕರ ರೆಡ್ಡಿ ಜಿ. (ಹರಪನಹಳ್ಳಿ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ರೈತರಿಗೆ ತತ್ಕಾಲ್ ಯೋಜನೆಯಡಿಯಲ್ಲಿ ಟ್ರಾನ್ಸ್‌ಫಾರಂನ್ನು ಒದಗಿಸಲಾಗುತ್ತಿದ್ದು, ಪ್ರಸ್ತುತ ಸದರಿ ಯೋಜನೆಯನ್ನು ಸ್ಥಗಿತ ಗೊಳಿಸಲಾಗಿದೆಯೇ; ಹಾಗಿದ್ದಲ್ಲಿ, ಈ ಯೋಜನೆಯನ್ನು ಸ್ಥಗಿತಗೊಳಿಸಲು ಕಾರಣವೇನು; | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಹರಪನಹಳ್ಳಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ತತ್ಕಾಲ್ ಯೋಜನೆಯನ್ನು ಸ್ಥಗಿತಗೊಳಿಸಿರುವುದಿಲ್ಲ. |
| ಆ) | ಸದರಿ ತತ್ಕಾಲ ಯೋಜನೆಯಿಂದ ರೈತರಿಗೆ ಅನುಕೂಲವಾಗುತ್ತಿದ್ದು, ಈ ಯೋಜನೆಯನ್ನು ಯಾವಾಗ ಪುನಃ ಪ್ರಾರಂಭಿಸಲಾಗುವುದು? (ಸಂಪೂರ್ಣ ವಿವರ ನೀಡುವುದು) | |

**ಸಂಖ್ಯೆ: ಎನರ್ಜಿ 10 ಪಿಪಿಎಂ 2021**

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

# ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 478
2. ಸದಸ್ಯರ ಹೆಸರು : ಶ್ರೀ ಲಿಂಗೇಶ್ ಕೆ.ಎಸ್
3. ಉತ್ತರಿಸಬೇಕಾದ ದಿನಾಂಕ : 02-02-2021
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಜುಲೈ 2019 ರಿಂದ ಈ ದಿನಾಂಕದವರೆಗೆ ಹೇಮಾವತಿ ಯೋಜನಾ ವಲಯ ಗೊರೂರು ವ್ಯಾಪ್ತಿಯ ವಿಭಾಗ ಕಛೇರಿಗಳಿಂದ ಗುತ್ತಿಗೆದಾರರಿಗೆ ಹಣ ಪಾವತಿಸಿರುವ ವಿವರಗಳನ್ನು ನೀಡುವುದು. ವಿಭಾಗವಾರು ಮತ್ತು ಕಾಮಗಾರಿವಾರು ಗುತ್ತಿಗೆದಾರರಿಗೆ ಪಾವತಿಸಿರುವ ಬಿಲ್ಲುಗಳ ಸಂಪೂರ್ಣ ಮಾಹಿತಿ ನೀಡುವುದು; | ಹೇಮಾವತಿ ಯೋಜನಾ ವಲಯ, ಗೊರೂರು ವ್ಯಾಪ್ತಿಯಲ್ಲಿನ ರೂ.5.00 ಕೋಟಿಗಳಿಗೂ ಮೇಲ್ಪಟ್ಟ ವಿಭಾಗವಾರು ಪ್ರಮುಖ ಕಾಮಗಾರಿಗಳ ಗುತ್ತಿಗೆದಾರರಿಗೆ ಹಣ ಪಾವತಿಸಿರುವ ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಆ | ಜುಲೈ 2019 ರಿಂದ ಈ ದಿನಾಂಕವರೆಗೆ ಹೇಮಾವತಿ ಯೋಜನಾ ವಲಯ, ಗೊರೂರು ವ್ಯಾಪ್ತಿಯಲ್ಲಿ ಬರುವ ವಿಭಾಗಗಳಿಗೆ ಹಣ ಭರವಸೆ ಪತ್ರ ನೀಡಲು ಆರ್ಥಿಕ ಇಲಾಖೆಯು ನಿಗಧಿಪಡಿಸಿರುವ ಮಾನದಂಡಗಳನ್ನು ಕಾವೇರಿ ನೀರಾವರಿ ನಿಗಮದಲ್ಲಿ ಪಾಲಿಸಲಾಗುತ್ತಿದೆಯೇ; ಪಾಲಿಸದೇ ಇದ್ದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು; | ವಿಭಾಗವಾರು ಬಿಡುಗಡೆ ಮಾಡುವ ಹಣ ಭರವಸೆ ಪತ್ರಗಳಂತೆ ಎಲ್ಲಾ 9 ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ರವರು ವಿಭಾಗದ ಮಟ್ಟದಲ್ಲಿ ಹಣ ಪಾವತಿ ಮಾಡುತ್ತಿದ್ದು, ಯಾವುದೇ ಮಾನದಂಡಗಳ ಉಲ್ಲಂಘನೆ ಮಾಡಿರುವ ಪ್ರಕರಣಗಳು ಕಂಡುಬಂದಿರುವುದಿಲ್ಲ. |
| ಇ | ಏತ ನೀರಾವರಿ ಯೋಜನೆಗಳ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ ಹಣ ಪಾವತಿ ಮಾಡುವಾಗ ಕೇವಲ ಪೈಪುಗಳ ಸರಬರಾಜಿಗೆ ಮಾತ್ರವೇ ಪ್ರಪ್ರಥಮವಾಗಿ ಸಂಪೂರ್ಣ ಹಣ ಪಾವತಿ ಮಾಡಿ, ಇನ್ನೀತರೇ ಅವಶ್ಯಕ ಕಾಮಗಾರಿಗಳಾದ ಜಾಕ್‌ವೆಲ್, ಪಂಪ್‌ಹೌಸ್ ಇತ್ಯಾದಿ ಕಾಮಗಾರಿಗಳನ್ನು ಗುತ್ತಿಗೆ ಕರಾರಿನ ನಿಗಧಿತ ಅವಧಿಯೊಳಗೆ ನಿರ್ವಹಿಸದೇ ವಿಳಂಬವಾಗಿ ಕಾರ್ಯಗತಗೊಳಿಸುತ್ತಿರುವ ಕಾಮಗಾರಿಗಳ ಸಂಪೂರ್ಣ ಮಾಹಿತಿ ನೀಡುವುದು? | ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನ ಮಾಡಿದ ಗುತ್ತಿಗೆದಾರರಿಗೆ ಹಣ ಪಾವತಿ ಮಾಡುವಾಗ ಕೇವಲ ಪೈಪುಗಳ ಸರಬರಾಜಿಗೆ ಮಾತ್ರವೇ ಪ್ರಪ್ರಥಮವಾಗಿ ಹಣ ಪಾವತಿ ಮಾಡದೇ ಇನ್ನಿತರೇ ಅವಶ್ಯಕತೆ ಕಾಮಗಾರಿಗಳಾದ ಜಾಕ್‌ವೆಲ್, ಪಂಪ್‌ಹೌಸ್ ಇತ್ಯಾದಿಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಲ್ಲಿ ಗುತ್ತಿಗೆ ಕರಾರಿನಂತೆ, ಆದ್ಯತೆ ಮೇರೆಗೆ ಬಿಲ್ಲು ಪಾವತಿಸಲು ಕ್ರಮ ವಹಿಸಲಾಗುತ್ತಿದ್ದು, ನಿರ್ವಹಿಸದೇ ವಿಳಂಬವಾಗಿ ಕಾರ್ಯಗತಗೊಳಿಸಿರುವ ಕಾಮಗಾರಿಗಳು ಯಾವುದೂ ಇರುವುದಿಲ್ಲ. |

***ಸಂಖ್ಯೆ:ಜಸಂಇ 02 ಎನ್‌ಎಲ್‌ಎ 2021***

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 483 |
| ಸದಸ್ಯರ ಹೆಸರು | : | ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ಯಾದಗಿರಿ ವಿಧಾನಸಭಾ ಕ್ಷೇತ್ರದಲ್ಲಿ ಹೊಸದಾಗಿ ರಚಿಸಿರುವ ವಡಗೇರಾ ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಎಲ್ಲಾ ಕಛೇರಿಗಳು ಪ್ರಾರಂಭವಾಗಿದ್ದರೂ ಜೆಸ್ಕಾಂನ (GESCOM) ಉಪವಿಭಾಗ ಪ್ರಾರಂಭವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಯಾದಗಿರಿ ವಿಭಾಗವನ್ನು ವಿಭಜಿಸಿ ಹೊಸದಾಗಿ ಸುರುಪುರ ವಿಭಾಗ ರಚನೆಗೆ ದಿನಾಂಕ 27-11-2020 ರಂದು ಜರುಗಿದ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ಮಂಡಳಿ ನಿರ್ದೇಶಕರ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ.<br><br>ಯಾದಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೊಸದಾಗಿ ಸುರಪುರ ವಿಭಾಗದ ರಚನೆಯ ನಂತರ ವಡಗೇರಾ ತಾಲ್ಲೂಕಿನಲ್ಲಿ ಹೊಸದಾಗಿ ಉಪ ವಿಭಾಗ ಕಛೇರಿ ಮಂಜೂರು ಮಾಡಲು ಕೆ.ಇ.ಬಿ. ವರ್ಕ್ಸ್ ಲೋಡ್ ನಾರ್ಮ್ಸ್ ಅನ್ವಯ ಸ್ಥಾವರಗಳ ಸಂಖ್ಯೆ, ವಿಸ್ತೀರ್ಣ, ಭೌಗೋಳಿಕ ಪ್ರದೇಶ, ವಿದ್ಯುತ್ ಗ್ರಾಹಕರ ಸಂಖ್ಯೆ, ಅಧಿಕಾರಿ / ಸಿಬ್ಬಂದಿಗಳ ಅಗತ್ಯತೆ ಮತ್ತು ಆರ್ಥಿಕ ಹೊರೆಯ ಮಾಹಿತಿಯನ್ನು ಆಧರಿಸಿ, ನಿಯಮಾನುಸಾರ ಪರಿಶೀಲಿಸಿ, ಉಪ ವಿಭಾಗ ಮಂಜೂರಾತಿಗೆ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ವತಿಯಿಂದ ಕ್ರಮ ಕೈಗೊಳ್ಳಲಾಗುವುದು. |
| ಆ) | ಬಂದಿದ್ದಲ್ಲಿ, ಉಪವಿಭಾಗ ಮಂಜೂರಾತಿ ಮಾಡುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

ಸಂಖ್ಯೆ: ಎನರ್ಜಿ 11 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 484 |
| ಸದಸ್ಯರ ಹೆಸರು | : | ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ಯಾದಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಭೀಮಾ ಮತ್ತು ಕೃಷ್ಣಾ ನದಿತೀರದ ರೈತರಿಗೆ ಇಲ್ಲಿಯವರೆಗೆ ರೈತರ ಹೊಲಗಳಿಗೆ ಇಲ್ಲಿಯವರೆಗೆ ನೀರುಹರಿಸಲು 7 ತಾಸು ವಿದ್ಯುತ್ ನೀಡಲಾಗುತ್ತಿದ್ದು, ರೈತರು ನೀರನ್ನು ಹರಿಸಲು ವಿದ್ಯುತ್ತಿನ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಯಾದಗಿರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಹಗಲಿನ ವೇಳೆಯಲ್ಲಿ ನಿರಂತರವಾಗಿ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. |
| ಆ) | ಬಂದಿದ್ದಲ್ಲಿ, ಸರ್ಕಾರವು 10 ತಾಸು ವಿದ್ಯುತ್ ನೀಡುವುದರ ಬಗ್ಗೆ ಚಿಂತನೆ ನಡೆಸಿದೆಯೇ; | ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಪ್ರಸ್ತುತ ಉಚಿತ ವಿದ್ಯುತ್ ನೀಡಲಾಗುತ್ತಿದ್ದು, KERC ರವರು ನಿಗದಿಪಡಿಸುವ ದರದಂತೆ ಸರ್ಕಾರದಿಂದ ಸಹಾಯಧನವನ್ನು ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆಗೊಳಿಸಲಾಗುತ್ತಿದೆ. ವಿದ್ಯುತ್ ಪೂರೈಕೆ ಅವಧಿಯನ್ನು 7 ಗಂಟೆಗಳಿಗಿಂತ ಹೆಚ್ಚಿನ ಅವಧಿಗೆ ಪೂರೈಸಬೇಕಾದಲ್ಲಿ, ಸರ್ಕಾರದ ಮೇಲೆ ಅಧಿಕ ಆರ್ಥಿಕ ಹೊರೆಯಾಗುವುದರಿಂದ, ಪ್ರಸ್ತುತ ಕೃಷಿ ಪಂಪ್ ಸೆಟ್‌ಗಳಿಗೆ ಹೆಚ್ಚಿನ ಅವಧಿಯ ವಿದ್ಯುತ್ ಪೂರೈಸುವ ಪ್ರಸ್ತಾವನೆಯಿರುವುದಿಲ್ಲ. |
| ಇ) | ರೈತರಿಗೆ ಅನುಕೂಲಕರವಾದ ವಾತಾವರಣ ನಿರ್ಮಾಣ ಮಾಡುವ ನಿಟ್ಟಿನಲ್ಲಿ 10 ತಾಸು ವಿದ್ಯುತ್ ಒದಗಿಸುವುದು, ಅವಶ್ಯವಿರುವುದರಿಂದ ಈ ಸಂಬಂಧ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | |

**ಸಂಖ್ಯೆ: ಎನರ್ಜಿ 12 ಪಿಪಿಎಂ 2021**

(ಸಹಿ)

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

## ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 485
ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸುವ ದಿನಾಂಕ : 02.02.2021
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ ಸಂ: | ಪ್ರಶ್ನೆ | ಉತ್ತರ |
|---|---|---|
| ಅ) | ಬೈಲಹೊಂಗಲ ಮತಕ್ಷೇತ್ರದ ಬೈಲಹೊಂಗಲ ತಾಲ್ಲೂಕಿನ ಎಷ್ಟು ಹಳ್ಳಿಗಳು ಮಲಪ್ರಭಾ ಯೋಜನೆಯಲ್ಲಿ ಮುಳುಗಡೆ ಹೊಂದಿರುತ್ತವೆ; | ಬೆಳಗಾವಿ ಜಿಲ್ಲೆ, ಬೈಲಹೊಂಗಲ ಮತಕ್ಷೇತ್ರದ ಬೈಲಹೊಂಗಲ ತಾಲ್ಲೂಕಿನ 13 ಹಳ್ಳಿಗಳು ಮಲಪ್ರಭಾ ಯೋಜನೆಯಲ್ಲಿ ಮುಳುಗಡೆ ಹೊಂದಿರುತ್ತವೆ. |
| ಆ) | ಈ ಎಲ್ಲಾ ಹಳ್ಳಿಗಳಲ್ಲಿ ಕಪ್ಪು ಮಿಶ್ರಿತ ಮಣ್ಣು ಇರುವುದರಿಂದ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿ ರೈತರಿಗೆ ಬಹಳಷ್ಟು ತೊಂದರೆಯಾಗುತ್ತಿರುವುದಘು ಸರ್ಕಾರದ ಗಮನದಲ್ಲಿದೆಯೇ; | ಬಂದಿದೆ. |
| ಇ) | ಈ ತಾಲ್ಲೂಕಿನ ಸಂಗೊಳ್ಳಿಯಿಂದ ಹೊಳೆಯವರೆಗಿನ ರಸ್ತೆ, ಗುಡದೂರ ದಿಂದ ಹಳೆ ಗುಡದೂರ ರಸ್ತೆ, ನಯಾನಗರ ದಿಂದ ಹಳೆ ನಯಾನಗರ ರಸ್ತೆ, ನಯಾನಗರ ದಿಂದ ಒಕ್ಕುಂದ ರಸ್ತೆ ಮತ್ತು ಕೆಂಗಾನೂರ ದಿಂದ ಹಳೆ ಕೆಂಗಾನೂರ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ; | ಇಲಾಖಾ ವ್ಯಾಪ್ತಿಯಲ್ಲಿ ಬರುವ ಕಾಡಾ ರಸ್ತೆಗಳನ್ನು ಹೊರತುಪಡಿಸಿ ಬೇರೆ ಇಲಾಖೆಯ ರಸ್ತೆಗಳ ಪ್ರಸ್ತಾವನೆ ಅಭಿವೃದ್ಧಿ ಪಡಿಸುವುದು ಈ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ |
| ಈ) | ಹಾಗಿದ್ದಲ್ಲಿ, ಈ ಎಲ್ಲಾ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ಈ ಭಾಗದ ರೈತರಿಗೆ ಅನುಕೂಲತೆಯನ್ನು ಮಾಡಿ ಕೊಡಲಾಗುವುದೇ? | |

ಸಂಖ್ಯೆ: ಜಸಂಇ 1 ಡಬ್ಲ್ಯೂಬಿಎಂ 2021

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

## ಕರ್ನಾಟಕ ವಿಧಾನ ಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 486 |
| ಸದಸ್ಯರ ಹೆಸರು | : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ) |
| ಉತ್ತರಿಸುವ ದಿನಾಂಕ | : 02.02.2021 |
| ಉತ್ತರಿಸುವ ಸಚಿವರು | : ಜಲಸಂಪನ್ಮೂಲ ಸಚಿವರು |

| ಕ್ರ ಸಂ: | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದ ಎಷ್ಟು ಹಳ್ಳಿಗಳು ಮಲಪ್ರಭಾ ಯೋಜನೆಯಲ್ಲಿ ಮುಳುಗಡೆ ಹೊಂದಿರುತ್ತವೆ; | ಬೆಳಗಾವಿ ಜಿಲ್ಲೆ, ಬೈಲಹೊಂಗಲ ಮತಕ್ಷೇತ್ರದ 44 ಹಳ್ಳಿಗಳು ಮಲಪ್ರಭಾ ಯೋಜನೆಯಲ್ಲಿ ಮುಳುಗಡೆ ಹೊಂದಿರುತ್ತವೆ. |
| ಆ) | ಇಲ್ಲಿನ ಭೂಮಿಯು ಸಂಪೂರ್ಣವಾಗಿ ಕಪ್ಪು ಮಣ್ಣಿಂದ ಕೂಡಿರುವುದರಿಂದ ಕಳೆದ ಎರಡು ವರ್ಷ ಸುರಿದ ಭಾರೀ ಮಳೆಯಿಂದ ರಸ್ತೆಗಳು ಸಂಪೂರ್ಣವಾಗಿ ನಾಶವಾಗಿದ್ದು, ಇಲ್ಲಿನ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಸವದತ್ತಿ ತಾಲ್ಲೂಕಿನ ಏಣಗಿಯಿಂದ ಹಳೆ ಏಣಗಿಯವರೆಗೆ, ರಸ್ತೆ ಸುಧಾರಣೆ ಕಾಮಗಾರಿಗೆ ರೂ.309.00 ಲಕ್ಷಗಳಿಗೆ ಅಂದಾಜು ಪತ್ರಿಕೆಯನ್ನು ತಯಾರಿಸಲಾಗಿದ್ದು, ಕರ್ನಾಟಕ ನೀರಾವರಿ ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿದೆ.<br><br>ಇಂಗಳಗಿ ಜಾಕ್‌ವೆಲ್ ರಸ್ತೆ (ಹೊಸೂರು-ವಕ್ಕುಂದು ಜಾಕ್‌ವೆಲ್ ರಸ್ತೆ ಕೂಡು ರಸ್ತೆ) ಕಾಮಗಾರಿಯನ್ನು 2020-21 ನೇ ಸಾಲಿನ ಲೆಕ್ಕ ಶೀರ್ಷಿಕೆ 2701 ಅಡಿಯಲ್ಲಿ ರೂ.28.20 ಲಕ್ಷಗಳಿಗೆ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.<br><br>ಇನ್ನುಳಿದ ರಸ್ತೆ ಕಾಮಗಾರಿಗಳ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ. |
| ಇ) | ಸವದತ್ತಿ ತಾಲ್ಲೂಕಿನ ಏಣಗಿಯಿಂದ ಹಳೆ ಏಣಗಿ ವರೆಗೆ, ಇಂಗಳಗಿ ಜಾಕ್‌ವೆಲ್ ರಸ್ತೆ, ಮಲ್ಲೂರ ಜಾಕ್‌ವೆಲ್ ರಸ್ತೆ (ಸ್ಮಶಾನ ಮುಖಾಂತರದ ರಸ್ತೆ) ಅಸುಂಡಿಯಿಂದ ಹಿಟ್ಟಣಗಿ ಚೇಂಬರ್ ವರೆಗೆ ಮತ್ತು ಬಧ್ಲಿಯಿಂದ ಜಾಕ್‌ವೆಲ್ ವರೆಗಿನ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ನಿಜವಲ್ಲವೇ; | |
| ಈ) | ಹಾಗಿದ್ದಲ್ಲಿ, ಸರ್ಕಾರವು ಕೂಡಲೇ ಈ ರಸ್ತೆಗಳನ್ನು ಅಭಿವೃದ್ಧಿಪಡಿಸಿ ಆ ಭಾಗದ ರೈತರಿಗೆ ಅನುಕೂಲತೆಯನ್ನು ಮಾಡಿಕೊಡಲಾಗುವುದೇ? | |

ಸಂಖ್ಯೆ: ಜಸಂಇ 8 ಡಬ್ಲ್ಯೂಬಿಎಂ 2021

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 488 |
| ಸದಸ್ಯರ ಹೆಸರು | : | ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸವದತ್ತಿ ತಾಲ್ಲೂಕಿನ ಹೊಸೂರು, ಬೈಲಹೊಂಗಲ ತಾಲ್ಲೂಕಿನ ಕುರುಕರಶೀಗಿಹಳ್ಳಿ ಗ್ರಾಮಗಳಲ್ಲಿ ಸಾರ್ವಜನಿಕರಿಗೆ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡಲು 110 ಕೆ.ವಿ. ಸ್ಟೇಷನ್ ಪ್ರಾರಂಭಿಸಲು ಸ್ಥಳವನ್ನು ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಳಗಾವಿ ಜಿಲ್ಲೆ, ಬೈಲಹೊಂಗಲ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸವದತ್ತಿ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ 110/11 ಕೆ.ವಿ ವಿದ್ಯುತ್ ಉಪಕೇಂದ್ರ ಮತ್ತು ಬೈಲಹೊಂಗಲ ತಾಲ್ಲೂಕಿನ ಕುರುಕರ ಶೀಗಿಹಳ್ಳಿಯಲ್ಲಿ 110/11 ಕೆ.ವಿ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಅಗತ್ಯವಿರುವ ಜಮೀನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸುಪರ್ದಿಯಲ್ಲಿರುತ್ತದೆ. |
| ಆ) | ಈ ಭಾಗದಲ್ಲಿ ಸರಿಯಾಗಿ ವಿದ್ಯುತ್ ಸರಬರಾಜು ಆಗದೇ ಇರುವುದರಿಂದ ಸದರಿ 110 ಕೆ.ವಿ. ಸ್ಟೇಷನ್‌ಗಳನ್ನು ತುರ್ತಾಗಿ ಸ್ಥಾಪಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಬೈಲಹೊಂಗಲ ತಾಲೂಕಿನ ಕುರುಕರ ಶೀಗಿಹಳ್ಳಿ ಗ್ರಾಮ ಹಾಗೂ ಸವದತ್ತಿ ತಾಲೂಕಿನ ಹೊಸೂರ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳಿಗೆ ಪ್ರಸ್ತುತ ನಿರಂತರ ಜ್ಯೋತಿ ವಿದ್ಯುತ್ ಮಾರ್ಗಗಳ ಮುಖಾಂತರ 22 ರಿಂದ 24 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸುವ ನಿಟ್ಟಿನಲ್ಲಿ ಕುರಕರಶೀಗಿಹಳ್ಳಿ ಮತ್ತು ಹೊಸೂರ ಗ್ರಾಮಗಳಲ್ಲಿ 110 ಕೆ.ವಿ. ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸುವ ಅವಶ್ಯಕತೆ ಇರುತ್ತದೆ. |
| ಇ) | ಹಾಗಿದ್ದಲ್ಲಿ, ಈಗಾಗಲೇ ಒದಗಿಸಿರುವ ಸ್ಥಳದಲ್ಲಿ 110 ಕೆ.ವಿ. ಸ್ಟೇಷನ್ ಗಳನ್ನು ಪ್ರಾರಂಭಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ? | ಸದರಿ 110 ಕೆ.ವಿ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಅಂದಾಜು ಪಟ್ಟಿಯನ್ನು ತಯಾರಿಸುವ ಪ್ರಕ್ರಿಯೆ ಜಾರಿಯಲ್ಲಿದೆ, |

**ಸಂಖ್ಯೆ: ಎನರ್ಜಿ 13 ಪಿಪಿಎಂ 2021**

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

.52

# ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 498
2. ಸದಸ್ಯರ ಹೆಸರು : ಶ್ರೀ ದಿನೇಶ್ ಗುಂಡೂರಾವ್, (ಗಾಂಧೀನಗರ)
3. ಉತ್ತರಿಸಬೇಕಾದ ದಿನಾಂಕ : 02-02-2021
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು.

| ಸಂ | ಪ್ರಶ್ನೆ | ಉತ್ತರ |
|---|---|---|
| ಅ) | "ನಮ್ಮ ಮೆಟ್ರೋ" ಎರಡನೇ ಹಂತದ ಕಾಮಗಾರಿಯನ್ನು ಎಷ್ಟು ವಿಸ್ತೀರ್ಣದ ಎಷ್ಟು ಮೊತ್ತದ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ; | ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2ರ ಉದ್ದ 72.1 ಕಿ.ಮೀ.ಗಳಷ್ಟಿದ್ದು, ಇದರ ಅಂದಾಜು ವೆಚ್ಚ ರೂ. 30695 ಕೋಟಿಗಳು. |
| ಆ) | ಸದರಿ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ; | ಪ್ರಸ್ತುತ ಸದರಿ ಯೋಜನೆಯು ಪ್ರಗತಿಯಲ್ಲಿದ್ದು, ಈಗಾಗಲೇ ಶೇ. 50% ರಷ್ಟು ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು ಹೊಂದಿರುತ್ತದೆ. |
| ಇ) | ಯಾವ ಕಾಲಮಿತಿಯಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು? (ವಿವರಗಳನ್ನು ನೀಡುವುದು) | ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2 ರೀಚ್-4ರ ದಕ್ಷಿಣ ವಿಸ್ತರಣೆಯ ಯಲಚೇನಹಳ್ಳಿಯಿಂದ ರೇಷ್ಮೆ ಸಂಸ್ಥೆವರೆಗೆ 6 ಕಿ.ಮೀ. ಉದ್ದದ ಮಾರ್ಗವನ್ನುದಿನಾಂಕ: 14.01.2021 ರಂದು ಪೂರ್ಣಗೊಳಿಸಿ ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸಲಾಗಿದೆ.<br>ಹಂತ-2 ರೀಚ್-2ರ ಪಶ್ಚಿಮ ವಿಸ್ತರಣೆ ಮೈಸೂರು ರಸ್ತೆಯಿಂದ ಕೆಂಗೇರಿಯವರೆಗೆ 7.5 ಕಿ.ಮೀ. ಉದ್ದದ ಮಾರ್ಗವನ್ನು ಜೂನ್-2021ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಬಾಕಿ ಉಳಿದ 58.5 ಕಿ.ಮೀ.ಗಳನ್ನು ಹಂತ-ಹಂತವಾಗಿ ಪೂರ್ಣಗೊಳಿಸಿ ಎಲ್ಲಾ ಮಾರ್ಗಗಳನ್ನು ಜೂನ್-2024ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. |

ಕಡತ ಸಂಖ್ಯೆ: ನಅಇ 22 ಪಿ.ಆರ್.ಜೆ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿಗಳು

# ಕರ್ನಾಟಕ ವಿಧಾನ ಸಭೆ

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರ.ಸಂ. | : | 500 |
| 2. | ಸದಸ್ಯರ ಹೆಸರು | : | ಶ್ರೀ ನಾಗೇಂದ್ರ .ಬಿ |
| 3. | ಉತ್ತರಿಸಬೇಕಾದ ದಿನಾಂಕ | : | 02-02-2021 |
| 4. | ಉತ್ತರಿಸುವವರು | : | ಮಾನ್ಯ ಸಣ್ಣ ನೀರಾವರಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬಳ್ಳಾರಿ ಗ್ರಾಮಾಂತರ ಮತಕ್ಷೇತ್ರದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ 2019-20ನೇ ಸಾಲಿನ ಆಯವ್ಯಯದಲ್ಲಿ ಅನುಮೋದಿಸಿದ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿದೆ; (ವಿವರ ನೀಡುವುದು) | 2019-20ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಬಳ್ಳಾರಿ ಗ್ರಾಮಾಂತರ ಮತಕ್ಷೇತ್ರದ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಇರುವುದಿಲ್ಲ. |
| ಆ | ಈ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಡಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ; (ವಿವರ ನೀಡುವುದು) | ಪ್ರಶ್ನೆ ಉದ್ಭವಿಸುವುದಿಲ್ಲ |
| ಇ | ಕಳೆದ ಎರಡು ವರ್ಷಗಳಿಂದ ಇಲ್ಲಿಯವರೆಗೆ ಈ ಯೋಜನೆಯು ವಿಳಂಭವಾಗಲು ಕಾರಣಗಳೇನು; (ವಿವರ ನೀಡುವುದು) | |
| ಈ | ಈ ಯೋಜನೆಯನ್ನು ಯಾವ ಕಾಲಮಿತಿಯಲ್ಲಿ ಪ್ರಾರಂಭಿಸಲಾಗುವುದು; (ವಿವರ ನೀಡುವುದು) | |
| ಉ | ಬಳ್ಳಾರಿ ಗ್ರಾಮಾಂತರ ಮತ ಕ್ಷೇತ್ರದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಸರ್ಕಾರವು ಕೂಡಲೇ ಕೈಗೆತ್ತಿಕೊಳ್ಳುವುದೇ? | ಬಳ್ಳಾರಿ ಗ್ರಾಮಾಂತರ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯ ಅಡಿ 9 ಜಿನುಗು ಕೆರೆಗಳಿರುತ್ತವೆ. ಪ್ರಸ್ತುತ ಈ ಕೆರೆಗಳನ್ನು ತುಂಬಿಸುವ ಯೋಜನೆ ಇರುವುದಿಲ್ಲ |

**ಸಂಖ್ಯೆ:ಎಂಐಡಿ 32 ಎಲ್‌ಎಕ್ಯೂ 2021**

**(ಜೆ.ಸಿ.ಮಾಧುಸ್ವಾಮಿ)**
ಸಣ್ಣ ನೀರಾವರಿ ಸಚಿವರು

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **502** |
| ಸದಸ್ಯರ ಹೆಸರು | : | ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ) |
| ಉತ್ತರಿಸಬೇಕಾದ ದಿನಾಂಕ | : | **02.02.2021** |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ವೈಟಿಪಿಎಸ್ ಮತ್ತು ಆರ್‌ಟಿಪಿಎಸ್ ಗಳಲ್ಲಿ ಹೊರಗುತ್ತಿಗೆ ಕಾರ್ಮಿಕರನ್ನು ಒದಗಿಸಲು ಪವರ್ ಮೆಕ್ ಕಂಪನಿಗೆ ಗುತ್ತಿಗೆ ವಹಿಸಲಾಗಿದ್ದು, ಸದರಿ ಕಂಪನಿಯು ಕಾರ್ಮಿಕರಿಗೆ ಸರಿಯಾಗಿ ವೇತನ ಪಾವತಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪವರ್ ಮೆಕ್ ಕಂಪನಿಯವರು ವೈಟಿಪಿಎಸ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಸರ್ಕಾರದ ಕನಿಷ್ಟ ವೇತನ ಕಾಯ್ದೆಯ ಪ್ರಕಾರ ಪ್ರತಿ ತಿಂಗಳು ಸರಿಯಾಗಿ ವೇತನ ಪಾವತಿ ಮಾಡಲಾಗುತ್ತಿದೆ. |
| ಆ) | ಸದರಿ ಕಂಪನಿಯವರು 800 ಕಾರ್ಮಿಕರು ಮಾಡುವ ಕೆಲಸವನ್ನು ಕೇವಲ 400 ಕಾರ್ಮಿಕರಿಂದ ಕೆಲಸ ಮಾಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪವರ್ ಮೆಕ್‌ನ ಚಾಲನೆ ಮತ್ತು ನಿರ್ವಹಣೆಯ ಕರಾರು ಒಪ್ಪಂದದ ಪ್ರಕಾರ ಸುಮಾರು 820 ಕಾರ್ಮಿಕರು ಹಾಗೂ ಅಧಿಕಾರಿಗಳನ್ನು ಒಳಗೊಂಡು ವೈಟಿಪಿಎಸ್‌ನಲ್ಲಿ ಕಾರ್ಯನಿರ್ವಹಿಸಲು ಒದಗಿಸಬೇಕಾಗಿರುತ್ತದೆ. ಆದಾಗ್ಯೂ 931 ಕಾರ್ಮಿಕರು ಹಾಗೂ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. |
| ಇ) | ಪ್ರಸ್ತುತ ಕೇವಲ 400 ಕಾರ್ಮಿಕರಿಂದ ಕೆಲಸ ಮಾಡಿಸುತ್ತಿರುವುದರಿಂದ ಕಾರ್ಮಿಕರ ಆರ್ಯೋಗದ ಮೇಲೆ ದುಷ್ಪರಿಣಾಮ ಬೀರುವುದರಿಂದ ಸದರಿ ಕಂಪನಿಯ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? (ವಿವರ ನೀಡುವುದು) | ಉದ್ಭವಿಸುವುದಿಲ್ಲ. |

**ಸಂಖ್ಯೆ: ಎನರ್ಜಿ 16 ಪಿಪಿಎಂ 2021**

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಪ್ರಶ್ನೆ ಸಂಖ್ಯೆ : 509
2. ಸದಸ್ಯರ ಹೆಸರು : ಶ್ರೀ ರಘುಮೂರ್ತಿ ಟಿ.
3. ಉತ್ತರಿಸಬೇಕಾದ ದಿನಾಂಕ : 02-02-2021.
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ನಾರಾಯಣಪುರ ಬಲದಂಡೆ ನಾಲೆಯಿಂದ ಟಿ.ಎನ್.ಕೋಟೆ, ಗೋಪಿಕೆರೆ, ಚೌಳೂರು ಪರಶುರಾಂಪುರದ ಚಿಕ್ಕ ಮತ್ತು ದೊಡ್ಡ ಕೆರೆಗಳಿಗೆ ನೀರು ಹರಿಸುವ ಸಂಬಂಧ ಈ ನಾಲೆಯನ್ನು ಸಂಪೂರ್ಣ ಆಧುನೀಕರಣಗೊಳಸುವ ಪ್ರಕ್ರಿಯೆಯು ಸರ್ಕಾರದ ಗಮನದಲ್ಲಿದೆಯೇ? | ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕಿನಲ್ಲಿ ವೇದಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ನಾರಾಯಣಪುರ ಅಣೆಕಟ್ಟು ಮಧ್ಯಮ ನೀರಾವರಿ ಯೋಜನೆಯಾಗಿದೆ. ಈ ಯೋಜನೆಯ ಬಲದಂಡೆ ಕಾಲುವೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತದೆ. ಈ ಕಾಲುವೆಯು ಹಿರಿಯೂರು ತಾಲ್ಲೂಕಿನಲ್ಲಿ 21.00 ಕಿ.ಮೀ ಮತ್ತು ಚಳ್ಳಕೆರೆ ತಾಲ್ಲೂಕಿನಲ್ಲಿ 25.00 ಕಿ.ಮೀ ಒಟ್ಟು 46.00 ಕಿ.ಮೀ ಉದ್ದವಿದೆ. ಹಿರಿಯೂರು ತಾಲ್ಲೂಕಿನಲ್ಲಿ ಬುಡ್ರಕುಂಟೆ ಗೋಕಟ್ಟೆ, ಸೂಗೂರು ಚೆಕ್‌ಡ್ಯಾಂಗೆ ಮತ್ತು ಚಳ್ಳಕೆರೆ ತಾಲ್ಲೂಕಿನಲ್ಲಿ ಟಿ.ಎನ್.ಕೋಟೆ, ಗೂಸಿಕೆರೆ, ಚೌಳೂರು, ಪರಶುರಾಂಪುರ ಹೊಸಕೆರೆ ಮತ್ತು ಪರಶುರಾಂಪುರ ಹಳೆಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ.<br>2014-15 ನೇ ಸಾಲಿನಲ್ಲಿ ಸರ್ಕಾರದಿಂದ 450.00 ಲಕ್ಷಗಳ ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ.ಪಿ) ಅಡಿಯಲ್ಲಿ ಅನುದಾನ ದೊರಕಿದ್ದು ಆಯ್ದ ಭಾಗಗಳಲ್ಲಿ ಸುಮಾರು 6.00 ಕಿ.ಮೀ ಉದ್ದ ಲೈನಿಂಗ್ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. 2019-20ನೇ ಸಾಲಿನಲ್ಲಿ ಈ ನಾಲೆಯಲ್ಲಿ ತಾತ್ಕಾಲಿಕವಾಗಿ ಅವಶ್ಯ ಇರುವ ಕಾಮಗಾರಿಗಳನ್ನು (ಅಕ್ವಡಕ್ಟ್, ವಯಾಡಕ್ಟ್, ಕೆಲಭಾಗಗಳಲ್ಲಿ ಏರಿಯ ದುರಸ್ಥಿ, ಹೂಳು ತೆಗೆಯುವುದು) ನಿರ್ವಹಿಸಿ ಹಿರಿಯೂರು ತಾಲ್ಲೂಕಿನ ಬುಡ್ರಕುಂಟೆ ಗೋಕಟ್ಟೆ, ಸೂಗೂರು ಚೆಕ್‌ಡ್ಯಾಂ ಮತ್ತು ಚಳ್ಳಕೆರೆ ತಾಲ್ಲೂಕಿನ ಟಿ.ಎನ್.ಕೋಟೆ ಕೆರೆಗೆ ಮಾತ್ರ ನೀರು ಹರಿಸಲಾಗಿರುತ್ತದೆ.<br>ಚಳ್ಳಕೆರೆ ತಾಲ್ಲೂಕಿನಲ್ಲಿ ಬರುವ ಕಾಲುವೆಯ ಕೊನೆಯ ಭಾಗದ 5 ಕೆರೆಗಳಿಗೆ ನೀರು ಮುಂದೆ ಹರಿಸುವುದು ಕಷ್ಟಸಾಧ್ಯವಾಗುತ್ತಿದ್ದು, ನೀರು ಪೋಲಾಗುವುದನ್ನು ತಡೆಗಟ್ಟಲು ನಾಲೆಯ ಆಧುನೀಕರಣ ಕಾಮಗಾರಿ ಅವಶ್ಯವಿದೆ. |
| ಆ | ಹಾಗಿದ್ದಲ್ಲಿ ಈ ನಾಲೆಯಿಂದ 5 ಕೆರೆಗಳಿಗೆ ನೀರು ಹರಿಸುವ ಕಾಮಗಾರಿಗೆ ಅಂದಾಜು ರೂ.36ಕೋಟಿ ವೆಚ್ಚದಲ್ಲಿ 46 ಕಿ.ಮೀ ವರವಿಗೆ ಕಾಮಗಾರಿ ಕೈಗೊಳ್ಳುವ ಬಗ್ಗೆ ಸರ್ಕಾರವು ಕ್ರಮ ಕೈಗೊಳ್ಳುವುದೇ? ( ಸಂಪೂರ್ಣ ವಿವರ ನೀಡುವುದು) | ಅನುದಾನದ ಲಭ್ಯತೆಯ ಮೇರೆಗೆ ಕಾಮಗಾರಿ ಕೈಗೊಳ್ಳಲು ಪರಿಶೀಲಿಸಲಾಗುವುದು. |

ಸಂಖ್ಯೆ: ಸನೀಇ 42 ವಿಸವಿ 2021.(ಸಿ-425618)

(ಜೆ.ಸಿ.ಮಾಧುಸ್ವಾಮಿ,)
ಸಣ್ಣ ನೀರಾವರಿ ಸಚಿವರು.

# ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 511
2. ಸದಸ್ಯರ ಹೆಸರು : ಶ್ರೀ ಮಂಜುನಾಥ್ ಎ.
3. ಉತ್ತರಿಸಬೇಕಾದ ದಿನಾಂಕ : 02-02-2021
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಮಾಗಡಿ ವಿಧಾನಸಭಾ ಕ್ಷೇತ್ರವು ಡಾ: ಎಂ.ನಂಜುಡಪ್ಪ ವರದಿಯಲ್ಲಿ ಅತ್ಯಂತ ಹಿಂದುಳಿದ ಕ್ಷೇತ್ರವೆಂದು ಘೋಷಣೆಯಾಗಿರುವುದರಿಂದ ಹಾಗೂ ಮಳೆಯನ್ನೇ ಆಶ್ರಯಿಸುವುದರಿಂದ ರೈತರಿಗೆ ಶಾಶ್ವತವಾಗಿ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಹಾಗೂ ಕೆರೆಗಳಿಗೆ ನೀರು ತುಂಬಿಸುವ ಉದ್ದೇಶದಿಂದ ಶ್ರೀರಂಗ ಯೋಜನೆಯನ್ನು ಜಾರಿಗೆ ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೇಮಾವತಿ ಯೋಜನೆಯ ತುಮಕೂರು ಶಾಖಾ ಸರಪಳಿ 192.30 ಕಿ.ಮೀ ನಾಲೆಯಿಂದ ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಮತ್ತು ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಹುತ್ರಿದುರ್ಗ ಹೋಬಳಿಯ ಗ್ರಾಮಗಳ 83 ಕೆರೆಗಳಿಗೆ ಕುಡಿಯುವ ನೀರನ್ನು ಒದಗಿಸುವ (ಶ್ರೀರಂಗ) ಯೋಜನೆಯಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. |
| ಆ | ಸದರಿ ಯೋಜನೆಯು ಎಂದಿನಿಂದ ಜಾರಿಗೆ ಬಂದಿರುತ್ತದೆ; ಈ ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಸದರಿ ಯೋಜನೆಗೆ ರೂ.277.50 ಕೋಟಿ ಮೊತ್ತದ ಮೂಲ ಅಂದಾಜಿಗೆ ದಿನಾಂಕ:28-02-2014 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ದಿನಾಂಕ:23-12-2015 ರಲ್ಲಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| ಇ | ಈಗಾಗಲೇ ಈ ಯೋಜನೆಯಡಿ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿರುವುದರಿಂದ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಾಮಗಾರಿಯ ವಿಳಂಬಕ್ಕೆ ಕಾರಣಗಳೇನು; | ಸದರಿ ಯೋಜನೆಗೆ ಬೇಕಾಗಿರುವ ಭೂಸ್ವಾಧೀನ ವಿಸ್ತೀರ್ಣವನ್ನು ಕಡಿತಗೊಳಿಸಿ ಯೋಜನೆಯನ್ನು ತೀವ್ರಗತಿಯಲ್ಲಿ ಅನುಷ್ಠಾನಗೊಳಿಸಲು ಗ್ರಾವಿಟೀ ಮೈನ್ ಪೈಪ್‌ನ್ನು ರಸ್ತೆಯ ಬದಿಯಲ್ಲಿ ಅಳವಡಿಸಲು ರೂ.450.00 ಕೋಟಿ ಮೊತ್ತದ ಪರಿಷ್ಕೃತ ಅಂದಾಜಿಗೆ ದಿನಾಂಕ:15-09-2020 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br>ಭೂ ಸ್ವಾಧೀನ ಪ್ರಕ್ರಿಯೆಯಿಂದ ಕಾಮಗಾರಿಯು ವಿಳಂಬವಾಗುತ್ತಿದ್ದು, ಮೇಲಿನಂತೆ ಕ್ರಮ ವಹಿಸಲಾಗಿದೆ. |
| ಈ | ತುಮಕೂರು ಶಾಖೆಯ 77ನೇ ಕಿ.ಮೀ. ಯಿಂದ 167 ಕಿ.ಮೀ. ವರೆಗೆ ಎಕ್ಸ್‌ಪ್ರೆಕ್ಸ್ ಚಾನಲ್ ನಿರ್ಮಾಣವಾಗುತ್ತಿದ್ದು ಇದನ್ನು ಶ್ರೀರಂಗ ಯೋಜನೆ ವ್ಯಾಪ್ತಿಗೆ ಸೇರ್ಪಡೆಗೊಳಿಸುವ ಉದ್ದೇಶ ಸರ್ಕಾರದ ಮುಂದಿದೆಯೇ: | ತುಮಕೂರು ಶಾಖಾ ನಾಲೆಯ ಸರಪಳಿ 70.00 ಕಿ.ಮೀ. ನಿಂದ 165.60 ಕಿ.ಮೀ. ವರೆಗೆ ಎಕ್ಸ್‌ಪ್ರೆಸ್ ಚಾನೆಲ್ (ಲಿಂಕ್ ಕೆನಾಲ್) ಕಾಮಗಾರಿಯ ಬದಲಿಗೆ ತುಮಕೂರು ಶಾಖಾ ನಾಲೆಯ ಸರಪಳಿ 70.360 ಕಿ.ಮೀ. ರಿಂದ 166.90 ಕಿ.ಮೀ. ವರೆಗೆ ಆಧುನೀಕರಣ ಮಾಡುವ ರೂ.550.00 ಕೋಟಿಗಳ ಮೊತ್ತದ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. |
| ಉ | ಈ ಯೋಜನೆಯ ವ್ಯಾಪ್ತಿಗೆ ಎಕ್ಸ್‌ಪ್ರೆಕ್ಸ್ ಚಾನಲ್‌ನ್ನು ಸೇರ್ಪಡೆಗೊಳಿಸಲು ಸರ್ಕಾರ ಎಷ್ಟು ಅನುದಾನವನ್ನು ನಿಗದಿಪಡಿಸಲಾಗಿದೆ? | |

*ಸಂಖ್ಯೆ:ಜಸಂಇ 21 ಎನ್‌ಎಲ್‌ಎ 2021*

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

55

# ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 517
2. ಸದಸ್ಯರ ಹೆಸರು : ಶ್ರೀ ಸತೀಶ್ ರೆಡ್ಡಿ ಎಂ. (ಬೊಮ್ಮನಹಳ್ಳಿ)
3. ಉತ್ತರಿಸಬೇಕಾದ ದಿನಾಂಕ : 02-02-2021
4. ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು.

| ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬನ್ನೇರು ಘಟ್ಟ ರಸ್ತೆಯ ಅಗಲೀಕರಣಕ್ಕೆ ಪಡೆಯುವ ಜಾಗಕ್ಕೆ ಮೆಟ್ರೋ ಸಂಸ್ಥೆಯವರು ಮಾರುಕಟ್ಟೆ ಬೆಲೆ ಒಂದು ಚದರ ಅಡಿಗೆ ಸುಮಾರು 22 ಸಾವಿರ ನಿಗದಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ಮೆಟ್ರೊಗಾಗಿ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಸ್ಥಳದ ಆಧಾರದ ಮೇಲೆ ಮತ್ತು ಮೌಲ್ಯ ಮಾಪನ ಮಾನದಂಡಗಳ ಪ್ರಕಾರ ಪ್ರತಿ ಚದರ ಅಡಿಗೆ ರೂ.2322 ರಿಂದ ರೂ.8454 ರವರೆಗೆ ಮೌಲ್ಯೀಕರಿಸಲಾಗಿದೆ. ಇದರ ಜೊತೆಗೆ, 100% ಸೋಲೇಷಿಯಂ ಸೇರಿಸಿ ಪರಿಹಾರವನ್ನು ನೀಡಲಾಗಿರುತ್ತದೆ. |
| ಆ) | 150 ಅಡಿ ರಸ್ತೆಯ ವಿಸ್ತರಣೆಗೆ ಮೆಟ್ರೋ ಸಂಸ್ಥೆಯವರು ಅರ್ಧ ಹಣವನ್ನು ಉಳಿದರ್ಧ ಹಣವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮೂಲಕ ಟಿ.ಡಿ.ಆರ್ ವಿತರಿಸುವುದಕ್ಕೆ ಯೋಜನೆ ರೂಪಿಸಿರುವುದು ನಿಜವೇ; | ಮೆಟ್ರೋ ಯೋಜನೆಗಾಗಿ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಮೆಟ್ರೋ ನಿಲ್ದಾಣಗಳ ಅವಶ್ಯಕತೆ ಮತ್ತು ಮೆಟ್ರೋ ನಿರ್ಮಾಣಕ್ಕಾಗಿ ರಸ್ತೆಯನ್ನು 90 ಅಡಿ (3+3 ಲೇನ್ ರಸ್ತೆಗೆ) ಅಗಲಗೊಳಿಸುವುದಕ್ಕೆ ಸೀಮಿತಗೊಳಿಸಲಾಗಿದೆ. ರಸ್ತೆಯನ್ನು 150 ಅಡಿ ಅಗಲಕ್ಕೆ ಅಗಲಗೊಳಿಸುವುದು ಮೆಟ್ರೋ ಯೋಜನೆಯ ಭಾಗವಾಗಿರುವುದಿಲ್ಲ. |
| ಇ) | ಹಾಗಿದ್ದಲ್ಲಿ, ಈ ಯೋಜನೆಯಡಿ ಒಂದು ಚದರ ಅಡಿಯ ಟಿ.ಡಿ.ಆರ್ ಮಾರುಕಟ್ಟೆ ದರವೇನು? | ಅಭಿವೃದ್ಧಿ ಹಕ್ಕುಗಳನ್ನು ಕೋರಿ ಸಾರ್ವಜನಿಕ ಪ್ರಾಧಿಕಾರಗಳಿಗೆ ಅಧ್ಯರ್ಪಿಸಲಾಗುವ ಸ್ವತ್ತುಗಳಿಗೆ, ಸಾರ್ವಜನಿಕ ಪ್ರಾಧಿಕಾರದ ಪ್ರಸ್ತಾವನೆಯ ಮೇರೆಗೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ಅಭಿವೃದ್ಧಿ ಹಕ್ಕುಗಳ ಪ್ರಯೋಜನ) ನಿಯಮಗಳು, 2016 ರ ನಿಯಮ 2[i]ರ ವ್ಯಾಖ್ಯಾನದನ್ವಯ, ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಸೆಕ್ಷನ್ 45-ಬಿ ರಡಿ ನಿಗದಿಪಡಿಸಿರುವ ಮಾರ್ಗಸೂಚಿ ದರಗಳನ್ನು ಅನ್ವಯಿಸಿ ಅಧ್ಯರ್ಪಿತ ಸ್ವತ್ತಿನ ಸ್ವರೂಪ, ಬಳಕೆ ಇತ್ಯಾದಿ ಅಂಶಗಳನ್ನು ಗಮನಿಸಿ ಪ್ರತಿ ಚ.ಮೀಗೆ ದರಗಳನ್ನು ನಿಗಧಿಪಡಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. |

ಕಡತ ಸಂಖ್ಯೆ: ನಅಇ 23 ಪಿ.ಆರ್.ಜೆ 2021

ಬಿ.ಎಸ್.ಸ್.

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿಗಳು

57

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 519
ಸದಸ್ಯರ ಹೆಸರು : ಶ್ರೀ ಸತೀಶ್ ರೆಡ್ಡಿ.ಎಂ. (ಬೊಮ್ಮನಹಳ್ಳಿ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 02.02.2021
ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿರವರು

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಬೆಂಗಳೂರು ಸುತ್ತಮುತ್ತ ಇರುವ ಹಸಿರು ವಲಯ ವ್ಯಾಪ್ತಿಯಲ್ಲಿ ತಲೆ ಎತ್ತಿರುವ ಅಕ್ರಮ ಬಡಾವಣೆ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿರುತ್ತದೆ; | 2003–2004 ನೇ ಸಾಲಿನಲ್ಲಿ ಬೆಂಗಳೂರು ಸುತ್ತಮುತ್ತ ಸುಮಾರು 127 ಅನಧಿಕೃತ ಬಡಾವಣೆಗಳನ್ನು ಗುರುತಿಸಲಾಗಿದ್ದು, ಅಂದು ಚಾಲ್ತಿಯಲ್ಲಿದ್ದ RCDP-1995 ರಂತೆ ಕೃಷಿ ವಲಯದಲ್ಲಿದ್ದ (ವ್ಯವಸಾಯ ವಲಯ) ಸುಮಾರು 11 ಅನಧಿಕೃತ ಬಡಾವಣೆಗಳ ವಿರುದ್ಧ ಕ್ರಮ ಕೈಗೊಳ್ಳಲು ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು 1965 ರ ನಿಯಮ 37(3) ರಂತೆ ಉಪ ಸಮಿತಿಯೊಂದನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಕಾಲಕಾಲಕ್ಕೆ ವಿಚಾರಣೆಯನ್ನು ನಡೆಸಿ ಕೆಲವು ಅನಧಿಕೃತ ಬಡಾವಣೆಗಳನ್ನು ನೆಲಸಮಗೊಳಿಸಲು ತೀರ್ಮಾನಿಸಿತ್ತು. ಆದರೆ ಸದರಿ ಅನಧಿಕೃತ ಬಡಾವಣೆಗಳಲ್ಲಿನ ನಿವೇಶನಗಳಿಗೆ ಸ್ಥಳೀಯ ಸಂಸ್ಥೆಗಳು ಖಾತಾ ನೀಡಿ ಕಟ್ಟಡ ನಕ್ಷೆ ಅನುಮೋದಿಸಿದ್ದು, ಕಟ್ಟಡ ನಿರ್ಮಾಣವಾಗಿದ್ದು, ಸದರಿ ಕಟ್ಟಡಗಳಿಗೆ ಬೆಸ್ಕಾಂರವರು ವಿದ್ಯುತ್ ಪೂರೈಕೆ ನೀಡಿರುವ ಹಿನ್ನಲೆಯಲ್ಲಿ ಈ ಅನಧಿಕೃತ ಬಡಾವಣೆಗಳನ್ನು ನೆಲಸಮಗೊಳಿಸಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತವಾಗಿ ಒಟ್ಟು 172 ಅನಧಿಕೃತ ಬಡಾವಣೆಗಳಿದ್ದು, ಈ ಪೈಕಿ ಹಲವಾರು ಬಡಾವಣೆಗಳ ಅಭಿವೃದ್ಧಿದಾರರಿಗೆ ಪ್ರಾಧಿಕಾರದಿಂದ ನೋಟೀಸ್ ಜಾರಿ ಮಾಡಲಾಗಿದೆ. ಇವರುಗಳಿಂದ ಉತ್ತರ ಸ್ವೀಕೃತಗೊಂಡ ನಂತರ ನಿಯಾಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಲಾಗುವುದು. |
| ಆ | ದೊಡ್ಡತೋಗೂರು, ವಿಟ್ಟಸಂದ್ರ, ಮೈಲಸಂದ್ರ, ಹುಲಿಮಂಗಲ, ಬೇಗೂರು, ಸಕಲವಾರ, ಬೆಟ್ಟದಾಸನಪುರ ಗ್ರಾಮಗಳ ಹಸಿರು ವಲಯಗಳಲ್ಲಿ ಅಕ್ರಮ ಬಡಾವಣೆಗಳು ತಲೆಎತ್ತಿದ್ದು, ಇದರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

ಸಂಖ್ಯೆ: ನಅಇ 10 ಬೆಂಭೂಸ್ವಾ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

## ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 520

ಸದಸ್ಯರ ಹೆಸರು : ಶ್ರೀ ಗೂಳಿಹಟ್ಟಿ ಡಿ.ಶೇಖರ್

ಉತ್ತರಿಸಬೇಕಾದ ದಿನಾಂಕ : 02.02.2021.

ಉತ್ತರಿಸುವ ಸಚಿವರು : ಗೃಹ ಸಚಿವರು.

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಎಷ್ಟು ಜನ ವಿ.ಐ.ಪಿ., ವಿ.ವಿ.ಐ.ಪಿ ಗಳಿಗೆ ಗನ್‌ಮ್ಯಾನ್ ಸೌಲಭ್ಯ ನೀಡಲಾಗಿದೆ; ಎಷ್ಟು ಅತಿ ಗಣ್ಯ ವ್ಯಕ್ತಿಗಳಿಗೆ ಗನ್‌ಮ್ಯಾನ್ ಸೌಲಭ್ಯ ನೀಡಲಾಗಿದೆ(ವಿವರ ನೀಡುವುದು)? | ರಾಜ್ಯದ ಗಣ್ಯ ವ್ಯಕ್ತಿಗಳಿಗೆ (ಮಾಜಿ ಶಾಸಕರು/ಮಾಜಿ ಸಂಸದರುಗಳನ್ನು ಒಳಗೊಂಡಂತೆ) ಅಂಗರಕ್ಷಕ ಭದ್ರತೆಯನ್ನು/ವರ್ಗೀಕೃತ ಭದ್ರತೆಯನ್ನು ಸ್ಥಳೀಯ ಪರಿಸ್ಥಿತಿ ಮತ್ತು ಬೆದರಿಕೆಯ ಸ್ವರೂಪಕ್ಕೆ ಅನುಗುಣವಾಗಿ ನೀಡಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಒಟ್ಟು 311 ಗಣ್ಯ ವ್ಯಕ್ತಿಗಳಿಗೆ ಭದ್ರತೆ ಒದಗಿಸಲಾಗಿರುತ್ತದೆ. ಸುರಕ್ಷತೆಯ ಹಿನ್ನೆಲೆಯಲ್ಲಿ ಹೆಸರುಗಳನ್ನು ನೀಡಿರುವುದಿಲ್ಲ. |

**ಹೆಚ್ ಡಿ 63 ಎಸ್‌ಎಸ್‌ಟಿ 2021**

**(ಬಸವರಾಜ ಬೊಮ್ಮಾಯಿ)**
**ಗೃಹ ಸಚಿವರು**

## ಕರ್ನಾಟಕ ವಿಧಾನ ಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 521 |
| ಸದಸ್ಯರ ಹೆಸರು. | : ಶ್ರೀ ಗೂಳಿಹಟ್ಟಿ ಡಿ.ಶೇಖರ್(ಹೊಸದುರ್ಗ) |
| ಉತ್ತರಿಸಬೇಕಾದ ದಿನಾಂಕ | : 02.02.2021 |
| ಉತ್ತರಿಸುವ ಸಚಿವರು | : ಗೃಹ ಸಚಿವರು |

| ಕ್ರ.ಸ | ವಿಷಯ | ಉತ್ತರ |
|---|---|---|
| ಅ | ರಾಜ್ಯದ ವಿವಿಧ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಜನರನ್ನು ಗುರಿಯಾಗಿಸಿಕೊಂಡು ಮತಾಂತರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಸಮುದಾಯದ ಜನರನ್ನು ಮತಾಂತರ ಮಾಡಲಾಗಿದೆ; | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಮತಾಂತರ ಮಾಡುತ್ತಿರುವವರ ವಿರುದ್ಧ ಪ್ರಕರಣಗಳು ದಾಖಲಾಗಿರುತ್ತವೆ. ಜಿಲ್ಲಾವಾರು ಹಾಗೂ ವರ್ಷವಾರು ವಿವರ ಕೆಳಗಿನಂತಿದೆ: (ಕೋಷ್ಟಕ ಕೆಳಗೆ) |

| ಕ್ರಸ | ಘಟಕ | ವರ್ಷ | | | |
|---|---|---|---|---|---|
| | | 2018 | 2019 | 2020 | 2021 |
| 1 | ಬೆಂಗಳೂರು ನಗರ | 1 | 1 | 2 | 0 |
| 2 | ಮಂಗಳೂರು ನಗರ | 0 | 1 | 0 | 0 |
| 3 | ಮೈಸೂರು ಜಿಲ್ಲೆ | 0 | 0 | 1 | 0 |
| 4 | ಮಂಡ್ಯ | 0 | 1 | 2 | 1 |
| 5 | ರಾಮನಗರ | 0 | 2 | 0 | 0 |
| 6 | ಚಿಕ್ಕಮಗಳೂರು | 0 | 0 | 0 | 0 |
| 7 | ಕೊಡಗು | 0 | 0 | 0 | 0 |
| 8 | ಹಾಸನ | 2 | 0 | 0 | 0 |
| 9 | ಧಾರವಾಡ | 0 | 1 | 0 | 0 |
| 10 | ಉಡುಪಿ | 0 | 1 | 0 | 0 |
| | **ಒಟ್ಟು** | **3** | **7** | **5** | **1** |

| ಕ್ರ.ಸ | ವಿಷಯ | ಉತ್ತರ |
|---|---|---|
| ಆ | ಮತಾಂತರ ಆಗುವುದಕ್ಕೆ ಕಾನೂನಿನ ಪ್ರಕಾರ ಅಧಿಕೃತವೇ ಅಥವಾ ಅನಧಿಕೃತವೇ; | ಭಾರತ ಸಂವಿಧಾನದ ಅನುಚ್ಛೇದ 25ರ ಅನುಸಾರ ಭಾರತದ ಪ್ರತಿಯೊಬ್ಬ ವ್ಯಕ್ತಿಯು ತಮ್ಮ ಆತ್ಮ ಸಾಕ್ಷಿಗೆ ಸರಿಯೆನಿಸುವ ಯಾವುದೇ ಧರ್ಮವನ್ನು ಸ್ವೀಕರಿಸುವ, ಪಾಲಿಸುವ, ಆಚರಿಸುವ, ಪ್ರಚಾರ ಮಾಡುವ ಸ್ವಾತಂತ್ರ್ಯವನ್ನು ಹೊಂದಿರುತ್ತಾನೆ. ಆದರೆ ಬಲವಂತದ ಮತಾಂತರಕ್ಕೆ ಸಂವಿಧಾನದ ಅಡಿಯಲ್ಲಿ ಅವಕಾಶವಿರುವುದಿಲ್ಲ. |
| ಇ | ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಕಡೆ ಮತಾಂತರವಾಗುತ್ತಿದೆ; | ಚಿತ್ರದುರ್ಗ ಜಿಲ್ಲೆಯಲ್ಲಿ ಬಲವಂತವಾಗಿ ಮತಾಂತರ ಮಾಡಿರುವ ಬಗ್ಗೆ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |
| ಈ | ಹೊಸದುರ್ಗ ತಾಲ್ಲೂಕಿನಲ್ಲಿ ಕಳೆದ 10 ರಿಂದ 15 ವರ್ಷಗಳಿಂದ ಯಾವ ಯಾವ ಸಮುದಾಯದ ಎಷ್ಟೆಷ್ಟು ಜನರನ್ನು ಮತಾಂತರಕ್ಕೆ ಪ್ರೇರೇಪಿಸಲಾಗಿದೆ? | ಹೊಸದುರ್ಗ ತಾಲ್ಲೂಕಿನಲ್ಲಿ ಬಲವಂತವಾಗಿ ಅಥವಾ ಆಮಿಷವೊಡ್ಡಿ ಮತಾಂತರವನ್ನು ಮಾಡಿದ ಬಗ್ಗೆ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |

**ಹೆಚ್‌ಡಿ 68 ಎಸ್‌ಎಸ್‌ಟಿ 2021**

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

# ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 530
2. ಸದಸ್ಯರ ಹೆಸರು : ಶ್ರೀ ಹೆಚ್.ಡಿ. ರೇವಣ್ಣ
3. ಉತ್ತರಿಸಬೇಕಾದ ದಿನಾಂಕ : 02-02-2021
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಹೇಮಾವತಿ ಜಲಾಶಯ ಯೋಜನೆಯಡಿಯಲ್ಲಿ 2018-19 ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಹಾಸನ ಜಿಲ್ಲೆಯ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ, ಸಕಲೇಶಪುರ ವಿಧಾನಸಭಾ ಕ್ಷೇತ್ರ ಮತ್ತು ಅರಕಲಗೂಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಟೆಂಡರ್ ಪ್ರಕ್ರಿಯೆ ನಡೆದಿದ್ದು, ಹಲವು ಕಾಮಗಾರಿಗಳ ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್‌ಗಳು ಅನುಮೋದನೆಗಾಗಿ ವಿವಿಧ ಹಂತದಲ್ಲಿದ್ದು, ಸದರಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯನ್ನು ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು.<br><br>ದಿನಾಂಕ:20-09-2019 ರಂದು ನಡೆದ ನಿಗಮದ 70ನೇ ಮಂಡಳಿ ಸಭೆಯಲ್ಲಿ ಇನ್ನೂ ಅನುಷ್ಠಾನಗೊಳ್ಳದೆ ಟೆಂಡರ್ ಪ್ರಕ್ರಿಯೆಯಲ್ಲಿರುವ, ತಾಂತ್ರಿಕ ಮಂಜೂರಾತಿ ಆಗಬೇಕಿರುವ ಹಾಗೂ ಟೆಂಡರ್ ಆಹ್ವಾನಿಸಬೇಕಿರುವ ಕಾಮಗಾರಿಗಳನ್ನು ಕೈಬಿಡಲು ಸೂಚಿಸಲಾಗಿದೆ.<br><br>ಈ ಪೈಕಿ, ಹಾಸನ ಜಿಲ್ಲೆಯ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ, ಸಕಲೇಶಪುರ ವಿಧಾನಸಭಾ ಕ್ಷೇತ್ರ ಮತ್ತು ಅರಕಲಗೂಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿವಿಧ ಪ್ರಕ್ರಿಯೆಯಲ್ಲಿರುವ ಒಟ್ಟು 738 ಸಂಖ್ಯೆಯ ರೂ.348.45 ಕೋಟಿಗಳ ಕಾಮಗಾರಿಗಳು ಒಳಗೊಂಡಿರುತ್ತವೆ. |
| ಆ | ಕಾವೇರಿ ನೀರಾವರಿ ನಿಗಮದ ಹೇಮಾವತಿ ಯೋಜನಾ ವಲಯದ ವಿವಿಧ ವಿಭಾಗಗಳಲ್ಲಿ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆಗಳನ್ನು ತಡೆಹಿಡಿದಿರುವುದು ನಿಜವೇ; | |
| ಇ | ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಅರಕಲಗೂಡು, ಹೊಳೆನರಸೀಪುರ ಮತ್ತು ಸಕಲೇಶಪುರ ವಿಧಾನಸಭಾ ಕ್ಷೇತ್ರದ ಶಾಸಕರುಗಳು ದಿನಾಂಕ:06.03.2020 ರಲ್ಲಿ ಮನವಿ ನೀಡಿದ್ದು, ಸದರಿ ಮನವಿ ಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಕಛೇರಿ ಕಡತ ಸಂಖ್ಯೆ:ಇ.ಸಿ.ಎಂ./1230358/2020, ದಿ:06.03.2020ರಲ್ಲಿ "ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಕಡತ ಮಂಡಿಸಿ" ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಜಲಸಂಪನ್ಮೂಲ ಇಲಾಖೆ ರವರಿಗೆ ನಿರ್ದೇಶನ ನೀಡಿರುವುದು ನಿಜವೇ; | ಹೌದು. |
| ಈ | ತಡೆಹಿಡಿದಿರುವ ಕಾಮಗಾರಿಗಳ ಬಗ್ಗೆ ಕಾವೇರಿ ನೀರಾವರಿ ನಿಗಮದಿಂದ ಆರ್ಥಿಕ ಅನುಮೋದನೆಗಾಗಿ ಆರ್ಥಿಕ ಇಲಾಖೆಗೆ ಕಡತವನ್ನು ಸಲ್ಲಿಸಿರುವುದು ನಿಜವೇ; ಹಾಗಿದ್ದಲ್ಲಿ, ತಡೆಹಿಡಿದಿರುವ ಟೆಂಡರ್ ನೋಟಿಫಿಕೇಷನ್‌ಗಳಲ್ಲಿನ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | ಹೇಮಾವತಿ ಯೋಜನೆ ಅಡಿಯಲ್ಲಿ ಬರುವ ಹೊಳೆನರಸೀಪುರ, ಸಕಲೇಶಪುರ ಮತ್ತು ಅರಕಲಗೂಡು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿರುವ ಒಟ್ಟು 738 ಸಂಖ್ಯೆಯ ರೂ.348.45 ಕೋಟಿ ಮೊತ್ತದ Non-Grounded (Under Tender process) ಕಾಮಗಾರಿಗಳ ಪೈಕಿ ಒಟ್ಟು 230 ಸಂಖ್ಯೆಯ ರೂ.108.20 ಕೋಟಿ ಮೊತ್ತದ ದೇವಸ್ಥಾನಗಳು, ಮಸೀದಿಗಳು, ಚರ್ಚ್‌ಗಳು, ಸಮುದಾಯ ಭವನಗಳು ಹಾಗೂ ರಸ್ತೆ ಲೆಕ್ಕ ಶೀರ್ಷಿಕೆ ಅಡಿ ಬರುವ ದೇವಸ್ಥಾನ ಕಾಮಗಾರಿಗಳು ನಿಗಮದ ಧ್ಯೇಯೋದ್ದೇಶಗಳಡಿಯಲ್ಲಿ ಅವಕಾಶವಿರದ ಕಾರಣ, ಇವುಗಳನ್ನು ಹೊರತುಪಡಿಸಿ ಉಳಿದಂತೆ, ಒಟ್ಟು 508 ಸಂಖ್ಯೆಯ ರೂ.240.25 ಕೋಟಿಗಳ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕೋರಿ ನಿಗಮದಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ. |

*ಸಂಖ್ಯೆ:ಜಸಂಇ 06 ಎನ್‌ಎಲ್‌ಎ 2021*

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

# <u>ಕರ್ನಾಟಕ ವಿಧಾನ ಸಭೆ</u>

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರ.ಸಂ. | : | 534 |
| 2. | ಸದಸ್ಯರ ಹೆಸರು | : | ಶ್ರೀ ನಿಂಬಣ್ಣನವರ್ ಸಿ.ಎಂ. |
| 3. | ಉತ್ತರಿಸಬೇಕಾದ ದಿನಾಂಕ | : | 02-02-2021 |
| 4. | ಉತ್ತರಿಸುವವರು | : | ಮಾನ್ಯ ಸಣ್ಣ ನೀರಾವರಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಲಘಟಗಿ ಮತಕ್ಷೇತ್ರದ ಧಾರವಾಡ ತಾಲ್ಲೂಕಿನ ದೇವರ ಹುಬ್ಬಳ್ಳಿ ಗ್ರಾಮದಲ್ಲಿ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಒಳಪಡುವ ಹೊಸ ಕೆರೆ ನಿರ್ಮಾಣದ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ |
| ಆ | ಈ ಕೆರೆ ನಿರ್ಮಾಣಕ್ಕಾಗಿ 308 ಎಕರೆ ಕ್ಷೇತ್ರವಿದ್ದು, 2 ಪಕ್ಕಗಳಲ್ಲಿ ನೈಸರ್ಗಿಕವಾಗಿ 2 ಗುಡ್ಡಗಳಿವೆ, ಈ ಕೆರೆ ನಿರ್ಮಾಣದಿಂದ ನೂರಾರು ಎಕರೆ ಜಮೀನು ನೀರಾವರಿಗೆ ಒಳಪಡುತ್ತವೆ: ಈ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ: | ಧಾರವಾಡ ಜಿಲ್ಲೆ ಮತ್ತು ತಾಲ್ಲೂಕಿನ ದೇವರ ಹುಬ್ಬಳ್ಳಿ ಗ್ರಾಮದ ಹೊಸಕೆರೆ ನಿರ್ಮಾಣಕ್ಕಾಗಿ ಡಿ.ಪಿ.ಆರ್. ಸಿದ್ಧಪಡಿಸಲಾಗಿದ್ದು, ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಮುಂದೆ ಮಂಡಿಸಿ ತೀರುವಳಿ ಪಡೆದು ನಂತರ ಪರಿಶೀಲಿಸಲಾಗುವುದು. |
| ಇ | ಸಣ್ಣ ನೀರಾವರಿ ಇಲಾಖೆಯಿಂದ ಡಿ.ಪಿ.ಆರ್. ತಯಾರಿಸಿ ಅಂದಾಜು ರೂ.3.50 ಕೋಟಿಗಳ ಅಂದಾಜು ಪಟ್ಟಿ ಸಲ್ಲಿಸಿದ್ದು, ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | |

**ಸಂಖ್ಯೆ:ಎಂಐಡಿ 34 ಎಲ್ಎಕ್ಯೂ 2021**

**(ಜೆ.ಸಿ.ಮಾಧುಸ್ವಾಮಿ)**
ಸಣ್ಣ ನೀರಾವರಿ ಸಚಿವರು

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 545 |
| ಸದಸ್ಯರ ಹೆಸರು | : | ಶ್ರೀ ಶಿವಾನಂದ್ ಎಸ್. ಪಾಟೀಲ್ (ಬಸವನಬಾಗೇವಾಡಿ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆ ನಿಡಗುಂದಿ ತಾಲ್ಲೂಕಿನ ಚಿಮ್ಮಲಗಿ/ಗಣಿ ಕ್ರಾಸ್ ಗ್ರಾಮದಲ್ಲಿ 110/11 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪಿಸುವಂತೆ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ವಿಜಯಪುರ ಜಿಲ್ಲೆ ನಿಡಗುಂದಿ ತಾಲ್ಲೂಕಿನ ಚಿಮ್ಮಲಗಿ / ಗಣಿ ಕ್ರಾಸ್ ಗ್ರಾಮದಲ್ಲಿ 110/11 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದ್ದು, ಮುಂಬರುವ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಮಂಡಿಸಲಾಗುವುದು. |
| ಆ) | ಹಾಗಿದ್ದಲ್ಲಿ, ಸದರಿ ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಕ್ಕೆ ವಿದ್ಯುತ್ ಸೌಕರ್ಯ ಕಲ್ಪಿಸಲು ಉಪಕೇಂದ್ರ ಸ್ಥಾಪಿಸಲು ಇದುವರೆವಿಗೂ ಕೈಗೊಂಡಿರುವ ಕ್ರಮಗಳೇನು; ಇದಕ್ಕಾಗಿ ತಗುಲುವ ವೆಚ್ಚ ಎಷ್ಟು; | |
| ಇ) | ಈ ವಿದ್ಯುತ್ ಉಪ ಕೇಂದ್ರವನ್ನು ಯಾವ ನಿರ್ದಿಷ್ಟ ಕಾಲಮಿತಿಯೊಳಗೆ ಸ್ಥಾಪಿಸಲಾಗುವುದು? | |

ಸಂಖ್ಯೆ: ಎನರ್ಜಿ 23 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

## ಕರ್ನಾಟಕ ವಿಧಾನ ಸಭೆ

1. ಪ್ರಶ್ನೆ ಸಂಖ್ಯೆ : 546
2. ಸದಸ್ಯರ ಹೆಸರು : ಶ್ರೀ ಹಾಲಪ್ಪ ಹರತಾಳ್, ಹೆಚ್.
3. ಉತ್ತರಿಸಬೇಕಾದ ದಿನಾಂಕ : 02-02-2021.
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಸಾಗರ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಈ ಹಿಂದೆ ಬಿದ್ದ ಬಾರಿ ಮಳೆಯಿಂದಾಗಿ ಕೆರೆ ಹಳ್ಳ ಕೊಳ್ಳಗಳು ಚೆಕ್‌ಡ್ಯಾಂಗಳು ಸಾರ್ವಜನಿಕ ಹಾಗೂ ಸರ್ಕಾರಿ ಆಸ್ತಿ-ಪಾಸ್ತಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ?. | ಗಮನಕ್ಕೆ ಬಂದಿದೆ. |
| ಆ | ಬಂದಿದ್ದಲ್ಲಿ ಹಾಳಾಗಿರುವ ಸರ್ಕಾರಿ ಹಾಗೂ ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ದುರಸ್ಥಿಗೊಳಿಸಲು ಅನುದಾನದ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದಿಯೇ?. | ಪ್ರಸ್ತಾವನೆ ಬಂದಿದ್ದು, ಅನುದಾನದ ಲಭ್ಯತೆಯನ್ನಾಧರಿಸಿ, ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಪರಿಶೀಲಿಸಲಾಗುವುದು. |
| ಇ | ಈ ಬಗ್ಗೆ ಸಣ್ಣ ನೀರಾವರಿ ಇಲಾಖೆಯಿಂದ ಅನುದಾನ ನೀಡಲು ಕೈಗೊಂಡ ಕ್ರಮಗಳೇನು (ವಿವರ ಒದಗಿಸುವುದು) | |

**ಸಂಖ್ಯೆ: ಸನೀಇ 41 ವಿಸವಿ 2021.**

(ಜೆ.ಸಿ.ಮಾಧುಸ್ವಾಮಿ,)
ಸಣ್ಣ ನೀರಾವರಿ ಸಚಿವರು.

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 547 |
| ಸದಸ್ಯರ ಹೆಸರು | : | ಶ್ರೀ ಬಸವರಾಜ್ ದಡೆಸುಗೂರ್ (ಕನಕಗಿರಿ) |
| ಉತ್ತರಿಸುವ ದಿನಾಂಕ | : | 02.02.2021 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ತುಂಗಭದ್ರಾ ಜಲಾಶಯದಲ್ಲಿ ಅಂದಾಜು 40 ಟಿ.ಎಂ.ಸಿ. ಹೂಳು ತುಂಬಿರುವುದರಿಂದ ಇದಕ್ಕೆ ಪರ್ಯಾಯವಾಗಿ ಕೊಪ್ಪಳ ಜಿಲ್ಲೆ, ನವಲಿ ಗ್ರಾಮದ ಹತ್ತಿರ ಸಮನಾಂತರ ಜಲಾಶಯ ನಿರ್ಮಾಣ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; | 2020-21 ರ ಆಯವ್ಯಯದಲ್ಲಿ ಸದರಿ ಪ್ರಸ್ತಾವನೆಯ ವಿವರವಾದ ಯೋಜನಾ ವರದಿಯನ್ನು ತಯಾರಿಸುವ ಕಾಮಗಾರಿಗೆ ರೂ.20.00 ಕೋಟಿ ಅನುದಾನವನ್ನು ಒದಗಿಸುವ ಬಗ್ಗೆ ಘೋಷಣೆಯಾಗಿದ್ದು, ನವಲಿ ಗ್ರಾಮದ ಹತ್ತಿರ ಸಮತೋಲನಾ ಜಲಾಶಯ ನಿರ್ಮಿಸುವ ಸಲುವಾಗಿ ಸರ್ವೇ ಸಮೀಕ್ಷೆ ಕೈಗೊಳ್ಳಲು ರೂ.14.30 ಕೋಟಿ ಮೊತ್ತದ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ:16.05.2020 ರಂದು ನೀಡಲಾಗಿದ್ದು, ಯೋಜನೆಯ ಸರ್ವೆ ಕನ್ಸಲ್ಟೆನ್ಸಿ ಕಾಮಗಾರಿಯ ಟೆಂಡರ್ ಅಂತಿಮಗೊಂಡು ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ. |
| ಆ | ಈ ಜಲಾಶಯ ನಿರ್ಮಾಣ ಮಾಡಲು ಯಾವ ಕಾಲಮಿತಿಯಲ್ಲಿ ಆರ್ಥಿಕ ಮಂಜೂರಾತಿ ನೀಡಲಾಗುವುದು? | |

ಸಂಖ್ಯೆ: ಜಸಂಇ 15 ಎಂಎಲ್ಎ 2021

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 548 |
| ಸದಸ್ಯರ ಹೆಸರು | : | ಶ್ರೀ ಬಸವರಾಜ್ ದಡೆಸೂಗೂರ್ (ಕನಕಗಿರಿ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕನಕಗಿರಿ, ಕಾರಟಗಿ, ಗಂಗಾವತಿ ತಾಲ್ಲೂಕಿನ ಗ್ರಾಮಗಳಲ್ಲಿ 7 ಗಂಟೆ ವಿದ್ಯುತ್ ನೀಡುತ್ತಿದ್ದು, ಕ್ಷೇತ್ರದ ವ್ಯಾಪ್ತಿಯಲ್ಲಿ ತುಂಗಾಭದ್ರ ನದಿಯು ಹಾಯ್ದು ಹೋಗಿದ್ದು, ಸರಿಯಾದ ಸಮಯದಲ್ಲಿ ಮಳೆ ಬರದೇ ಬೆಳೆಗಳು ಹಾಳಾಗುತ್ತಿದ್ದು, ರೈತರುಗಳು ತುಂಬಾ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕನಕಗಿರಿ, ಕಾರಟಗಿ, ಗಂಗಾವತಿ ತಾಲ್ಲೂಕಿನ ಗ್ರಾಮಗಳಲ್ಲಿ ಪ್ರಸ್ತುತ, ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಪ್ರತಿದಿನ ಹಗಲಿನ ವೇಳೆಯಲ್ಲಿ ನಿರಂತರ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. |
| ಆ) | ಮಳೆಗಾಲ ಹಾಗೂ ಬೇಸಿಗೆ ಕಾಲದಲ್ಲಿ ರೈತರು ವ್ಯವಸಾಯಕ್ಕಾಗಿ ಏತ ನೀರಾವರಿ ಯೋಜನೆ ಮೂಲಕ ಮತ್ತು ಪಂಪ್‌ಸೆಟ್‌ಗಳು ಹಾಗೂ ಕೊಳವೆ ಬಾವಿಯನ್ನೇ ನಂಬಿಕೊಂಡಿರುವುದರಿಂದ ಪ್ರಸ್ತುತ ಇರುವ ವಿದ್ಯುತ್ ಸರಬರಾಜನ್ನು 12 ಗಂಟೆಗಳ ಕಾಲ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಪ್ರಸ್ತುತ ರೈತರ ನೀರಾವರಿ ಪಂಪ್ ಸೆಟ್‌ಗಳಿಗೆ ಪೂರೈಸಲಾಗುತ್ತಿರುವ 7 ಗಂಟೆಗಳ 3 ಫೇಸ್ ವಿದ್ಯುತ್ ಪ್ರಮಾಣಕ್ಕೆ KERC ರವರು ನಿಗದಿಪಡಿಸಿರುವ ದರಗಳಂತೆ ಸರ್ಕಾರದಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ಒಂದು ವೇಳೆ ಪಂಪ್ ಸೆಟ್‌ಗಳಿಗೆ ಹೆಚ್ಚಿನ ಅವಧಿಯ ವಿದ್ಯುತ್ತನ್ನು ಪೂರೈಸಬೇಕಾದಲ್ಲಿ ಸರ್ಕಾರದ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಬೀಳುವುದರಿಂದ ಸದರಿ ಪ್ರಸ್ತಾವನೆಯು ಪ್ರಸ್ತುತ ಸರ್ಕಾರದ ಮುಂದೆ ಇರುವುದಿಲ್ಲ. |
| ಇ) | 12 ಗಂಟೆಗಳ ಕಾಲ ವಿದ್ಯುತ್ ಸರಬರಾಜನ್ನು ವಿಸ್ತರಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು? | |

ಸಂಖ್ಯೆ: ಎನರ್ಜಿ 24 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

58

# ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 569
2. ಸದಸ್ಯರ ಹೆಸರು : ಶ್ರೀ ಶಿವಣ್ಣ.ಬಿ.(ಆನೇಕಲ್)
3. ಉತ್ತರಿಸಬೇಕಾದ ದಿನಾಂಕ : 02-02-2021
4. ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು.

| ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯಗಳಲ್ಲಿ ಮೆಟ್ರೋ ರೈಲು ಸೇವೆ ವಿಸ್ತರಣೆಗೆ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಮಾನದಂಡಗಳೇನು; (ಪೂರ್ಣ ಮಾಹಿತಿ ನೀಡುವುದು) | ರಾಜ್ಯಗಳಲ್ಲಿ ಮೆಟ್ರೋ ರೈಲು ಸೇವೆ ವಿಸ್ತರಣೆಗೆ ಸರ್ಕಾರವು ನಿಗಧಿಪಡಿಸಿರುವ ಮಾನದಂಡಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ಪ್ರಸ್ತುತ ಬೆಂಗಳೂರಿನಲ್ಲಿ ಮೆಟ್ರೋ ರೈಲು ಸೇವೆ ವಿಸ್ತರಣೆಯ ಕಾಮಗಾರಿಗಳು ಕೇಂದ್ರ ಸರ್ಕಾರದ ಮಾನದಂಡಗಳಂತೆ ನಡೆಯುತ್ತಿದೆಯೇ? (ಕಾಮಗಾರಿಗಳ ಮಾಹಿತಿ ನೀಡುವುದು) | ಹೌದು,<br><br>ಬೆಂಗಳೂರಿನಲ್ಲಿ ಮೆಟ್ರೋ ರೈಲು ಸೇವೆ ವಿಸ್ತರಣೆಯ ಕಾಮಗಾರಿಗಳು ಕೇಂದ್ರ ಸರ್ಕಾರದ ಮಾನದಂಡಗಳಂತೆ ನಡೆಯುತ್ತಿದ್ದು, ಅವುಗಳ ವಿವರಗಳ ಕೆಳಕಂಡಂತಿರುತ್ತದೆ:<br><br>➢ ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-1 ಮುಕ್ತಾಯಗೊಂಡು ಕಾರ್ಯಾಚರಣೆಯಲ್ಲಿದೆ.<br><br>➢ ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2 ಪ್ರಗತಿಯಲ್ಲಿದೆ.<br><br>➢ ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2 ಮತ್ತು 2ಬಿ ರ ಪೂರ್ವ ಸಿದ್ಧತೆ ಕೆಲಸಗಳು ಪ್ರಾರಂಭಿಸಲಾಗಿದೆ. |

ಕಡತ ಸಂಖ್ಯೆ: ನಅಇ 21 ಪಿ.ಆರ್.ಜೆ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿಗಳು

## ಕರ್ನಾಟಕ ವಿಧಾನ ಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1022 |
| ಸದಸ್ಯರ ಹೆಸರು | : ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್ (ಕುಷ್ಟಗಿ) |
| ಉತ್ತರಿಸುವ ದಿನಾಂಕ | : 02.02.2021 |
| ಉತ್ತರಿಸುವ ಸಚಿವರು | : ಜಲಸಂಪನ್ಮೂಲ ಸಚಿವರು |

| ಕ್ರ ಸಂ: | ಪ್ರಶ್ನೆ | ಉತ್ತರ |
|---|---|---|
| ಅ) | ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ವತಿಯಿಂದ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಕೊಪ್ಪಳ ಏತ ನೀರಾವರಿ ಯೋಜನೆಯನ್ನು ಸೇರ್ಪಡೆ ಮಾಡಲಾಗಿದೆಯೇ; | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿಯಲ್ಲಿ ಕೊಪ್ಪಳ ಏತ ನೀರಾವರಿ ಯೋಜನೆಯು ಒಂದು ಉಪ ಯೋಜನೆ ಆಗಿರುತ್ತದೆ.<br>ನಾರಾಯಣಪುರ ಜಲಾಶಯದ ಹಿನ್ನೀರಿನಿಂದ ಆರ್.ಎಲ್.586 ಮೀ.ನಿಂದ 640 ಮೀ.ವರೆಗಿನ ಎರಡು ಹಂತದ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರಗಳು ಪೂರ್ಣಗೊಂಡಿರುತ್ತವೆ. |
| ಆ) | ಈ ಯೋಜನೆಯನ್ನು ಸೇರ್ಪಡೆ ಮಾಡಿದ್ದಲ್ಲಿ ಇಲ್ಲಿಯವರೆಗೆ ಯೋಜನೆಯ ಪ್ರಗತಿಯೇನು; (ವಿವರ ಒದಗಿಸುವುದು) | ಪ್ರಸ್ತುತ ಯೋಜನೆಯ 2ನೇ ಹಂತದಲ್ಲಿ ಅಚ್ಚುಕಟ್ಟು ವ್ಯಾಪ್ತಿಯಲ್ಲಿನ 77 ಕೆರೆಗಳನ್ನು ತುಂಬಿಸಲು Secondary pumping, Bulk water supply, pressure pipeline distribution network & Power supply component ಗಳನ್ನು ಒಳಗೊಂಡಂತೆ 03 ಪ್ಯಾಕೇಜ್‌ಗಳಲ್ಲಿ ಟರ್ನ-ಕೀ ಆಧಾರದ ಮೇಲೆ ಗುತ್ತಿಗೆ ಕಾಮಗಾರಿಗಳನ್ನು ವಹಿಸಿದ್ದು ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ.<br>ಮುಂದುವರೆದು ಯೋಜನೆಯಡಿಯ ಹನಿ ನೀರಾವರಿ ಕಲ್ಪಿಸಲು ವಿವರವಾದ ಸರ್ವೆ ತನಿಖಾ ಕಾರ್ಯ ಕೈಗೊಂಡಿದ್ದು, ಅಂದಾಜು ಪತ್ರಿಕೆ ಅಂತಿಮಗೊಳಿಸಲಾಗುತ್ತಿದೆ. |
| ಇ) | ಈ ಯೋಜನೆಯು ಎಷ್ಟು ಎಕರೆ ವ್ಯಾಪ್ತಿಗೆ ಉಪಯೋಗ ವಾಗುವುದು; ಅದು ಯಾವ ಯಾವ ತಾಲ್ಲೂಕಿಗೆ ಸಂಬಂಧಿಸಿರುತ್ತದೆ; | ಸದರಿ ಯೋಜನೆಯಡಿಯಲ್ಲಿ ಕೊಪ್ಪಳ ಜಿಲ್ಲೆಯ ಕೊಪ್ಪಳ, ಕುಷ್ಟಗಿ, ಯಲಬುರ್ಗಾ, ಗಂಗಾವತಿ, ಕನಕಗಿರಿ, ಕುಕನೂರು ತಾಲೂಕುಗಳು ಮತ್ತು ಬಾಗಲಕೋಟೆ ಜಿಲ್ಲೆಯ ಹುನಗುಂದ, ಬದಾಮಿ, ಇಲಕಲ್ ತಾಲೂಕುಗಳು ಹಾಗೂ ಗದಗ ಜಿಲ್ಲೆಯ ಗದಗ, ರೋಣ ತಾಲೂಕುಗಳು ಒಳಗೊಂಡಂತೆ ಒಟ್ಟು 2.77 ಲಕ್ಷ ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. |
| ಈ) | ಈ ಯೋಜನೆಯನ್ನು ಪ್ರಾರಂಭಿಸಲು ಸರ್ಕಾರವು ನಿಗಡಿಪಡಿಸಿದ ಅನುದಾನವೆಷ್ಟು ಇಲ್ಲಿಯವರೆಗೆ ಖರ್ಚಾದ ಅನುದಾನವೆಷ್ಟು; | ಅನುಮೋದಿತ ಪರಿಷ್ಕೃತ ಕೃ.ಮೇ.ಯೋ. ಹಂತ-3 ರ ಯೋಜನಾ ವರದಿ ಅನುಸಾರ ಕೊಪ್ಪಳ ಏತ ನೀರಾವರಿ ಯೋಜನೆಯ ಅಂದಾಜು ಮೊತ್ತ ರೂ.8860.38 ಕೋಟಿ ಆಗಿರುತ್ತದೆ. ಯೋಜನಾ ಕಾಮಗಾರಿಗೆ ಪ್ರಾರಂಭದಿಂದ ಇದುವರೆವಿಗೂ ಒಟ್ಟು ಅನುದಾನದಲ್ಲಿ ರೂ.2333.00 ಕೋಟಿ ಮೊತ್ತವನ್ನು ಖರ್ಚು ಮಾಡಲಾಗಿರುತ್ತದೆ. |
| ಉ) | ಸದರಿ ಯೋಜನೆಯು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಯೋಜನೆಯ ಕಾಮಗಾರಿಗಳನ್ನು ತೀವ್ರಗತಿಯಲ್ಲಿ ಮುಕ್ತಾಯಗೊಳಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ? | ಯೋಜನೆಯಡಿಯ ಎರಡು ಹಂತದ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರಗಳು ಈಗಾಗಲೇ ಪೂರ್ಣಗೊಂಡಿದ್ದು, ಪ್ರಸ್ತುತ ಅಚ್ಚುಕಟ್ಟು ವ್ಯಾಪ್ತಿಯ 77 ಕೆರೆಗಳನ್ನು ತುಂಬಿಸಲು 03 ಪ್ಯಾಕೇಜುಗಳಡಿ ಕೈಗೊಂಡಿರುವ Secondary pumping, Bulk water supply, pressure pipeline distribution network ಕಾಮಗಾರಿಗಳು ತೀವ್ರ ಪ್ರಗತಿಯಲ್ಲಿದ್ದು, ನಿಗದಿತ ಟೆಂಡರ್ ಅವಧಿ ಡಿಸೆಂಬರ್ 2021ರ ವೇಳೆಗೆ ಪೂರ್ಣಗೊಳಿಸಲು ಹಾಗೂ ಯೋಜನೆಯಡಿ ಉದ್ದೇಶಿತ ಹನಿ ನೀರಾವರಿ ಅಳವಡಿಕೆಯ ಘಟಕಗಳನ್ನು ಅಂತಿಮವಾಗಿ ಅಳವಡಿಸಿ ತ್ವರಿತವಾಗಿ ನೀರಾವರಿ ಸೌಲಭ್ಯ ಕಲ್ಪಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಜಸಂಇ 3 ಡಬ್ಲ್ಯೂಬಿಎಂ 2021

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

## ಕರ್ನಾಟಕ ವಿಧಾನ ಸಭೆ

1. ಪ್ರಶ್ನೆ ಸಂಖ್ಯೆ : 1023
2. ಸದಸ್ಯರ ಹೆಸರು : ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್
3. ಉತ್ತರಿಸಬೇಕಾದ ದಿನಾಂಕ : 02-02-2021.
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕಿನ ಮೇಣಸಗೇರಾ ಹಾಗೂ ಇತರೆ 14 ಗ್ರಾಮಗಳ ಕೆರೆಗಳಿಗೆ ಕೃಷ್ಣಾ ನದಿಯಿಂದ ಏತ ನೀರಾವರಿ ಯೋಜನೆ ಮೂಲಕ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ) ನೀರು ತುಂಬಿಸುವ ಯೋಜನೆಯನ್ನು ಕಾರ್ಯಗತ ಗೊಳಿಸುವುದು ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ: | ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕಿನ ಮೇಣಸಗೇರಾ ಹಾಗೂ ಇತರೆ 14 ಗ್ರಾಮಗಳ ಕೆರೆಗಳಿಗೆ ಕೃಷ್ಣಾ ನದಿಯಿಂದ ಏತ ನೀರಾವರಿ ಯೋಜನೆ ಮೂಲಕ ನೀರನ್ನು ತುಂಬಿಸುವ "ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನಲ್ಲಿ ಕುಡಿಯುವ ನೀರು ಹಾಗೂ ಅಂತರ್ಜಲ ಅಭಿವೃದ್ಧಿ ಸಲುವಾಗಿ ಕೃಷ್ಣಾ ನದಿಯಿಂದ ಏತ ನೀರಾವರಿ ಯೋಜನೆ ಮೂಲಕ ಕೆರೆಗಳಿಗೆ ನೀರನ್ನು ತುಂಬಿಸುವ ಕಾಮಗಾರಿಯನ್ನು ರೂ.498.80 ಕೋಟಿ ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಯಿಂದ 1.ಮೇಣಸಗೇರಾ ಕೆರೆ, 2.ಮಿಯ್ಯಾಪುರ ಕೆರೆ, 3.ಹೊಸಳ್ಳಿ ಕೆರೆ, 4.ಹನಮಸಾಗರ ಕೆರೆ, 5.ಮಾವಿನಇಟಗಿ ಕೆರೆ, 6.ಬಾದಮಿನಾಳ ಕೆರೆ, 7.ಜಾಗೀರ ಗುಡದೂರು ಕೆರೆ, 8.ಜುಮಲಾಪುರ ಕೆರೆ, 9.ವಿಠಲಾಪುರ ಕೆರೆ, 10.ನಾರಿನಾಳ ಕೆರೆ, 11.ರಾಯನಕೆರೆ, 12.ಮೆಣೆದಾಳ ಕೆರೆ, 13.ಹುಲಿಯಾಪುರ ಕೆರೆ. 14.ಪುರ ಕೆರೆ ಮತ್ತು 15.ನೀಡಶೇಸಿ ಕೆರೆಯನ್ನು ತುಂಬಿಸಲು ಯೋಜಿಸಲಾಗಿದೆ.<br>ಸದರಿ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ರೂ.492.30ಕೋಟಿಗಳಿಗೆ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದ್ದು, ರೈಜಿಂಗ್ ಮೇನ್ ಕಾಮಗಾರಿಯು ಪ್ರಗತಿಯಲ್ಲಿದೆ. |
| ಆ | ಸದರಿ ಯೋಜನೆಗಾಗಿ ಸಮಗ್ರ ತಾಂತ್ರಿಕ ವರದಿಯನ್ನು (ಡಿ.ಪಿ.ಆರ್) ಸಿದ್ಧಪಡಿಸಲಾಗಿದೆಯೇ; ಇದಕ್ಕಾಗಿ ತಗಲಬಹುದಾದ ಅಂದಾಜು ವೆಚ್ಚ ಎಷ್ಟು: | |
| ಇ | ಸದರಿ ಯೋಜನೆಯನ್ನು 2020-21ನೇ ಸಾಲಿನ ಆರ್ಥಿಕ ಪೂರಕ ಆಯ-ವ್ಯಯದಲ್ಲಿ ಘೋಷಿಸಲು ಸರ್ಕಾರವು ಕ್ರಮವನ್ನು ವಹಿಸಲು ಬಯಸುತ್ತದೆಯೇ? | |

**ಸಂಖ್ಯೆ: ಸನೀಇ 40 ವಿಸವಿ 2021.**

(ಸಹಿ)

**(ಜೆ.ಸಿ.ಮಾಧುಸ್ವಾಮಿ,)**
ಸಣ್ಣ ನೀರಾವರಿ ಸಚಿವರು.

# ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1024
2. ಸದಸ್ಯರ ಹೆಸರು : ಶ್ರೀ ದಿನಕರ್ ಕೇಶವ್ ಶೆಟ್ಟಿ
3. ಉತ್ತರಿಸಬೇಕಾದ ದಿನಾಂಕ : 02.02.2021
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಕತಗಾಲದಲ್ಲಿ ಚಂಡಿಕಾ ನದಿ ಮತ್ತು ಅಘನಾಶಿನಿ ನದಿ ಕೂಡುವಲ್ಲಿ ಬ್ಯಾರೇಜ್ ನಿರ್ಮಾಣ ಮಾಡುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗಮನಕ್ಕೆ ಬಂದಿದೆ. |
| ಆ. | ಬ್ಯಾರೇಜ್ ನಿರ್ಮಾಣ ಮಾಡುವುದರಿಂದ 10 ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಜನರಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಸಾಧ್ಯವಾಗಲಿದ್ದು, ಈ ನಿಟ್ಟಿನಲ್ಲಿ ಸರ್ಕಾರದ ಮಟ್ಟದಲ್ಲಿ ಆಗಿರುವ ಕ್ರಮಗಳೇನು; | "ಪಶ್ಚಿಮವಾಹಿನಿ ಯೋಜನೆ" ಮಾಸ್ಟರ್ ಪ್ಲಾನ್ ನಲ್ಲಿ ಸದರಿ ಯೋಜನೆಯನ್ನು ರೂ.6000.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಳ್ಳುವ ಪ್ರಸ್ತಾವನೆಯಿದ್ದು ತಾಂತ್ರಿಕ ಶಕ್ಯತೆ ಹಾಗೂ ಅನುದಾನದ ಲಭ್ಯತೆ ಆಧರಿಸಿ ಕಾಮಗಾರಿಯನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು. |
| ಇ. | ಈ ಬ್ಯಾರೇಜ್ ನಿರ್ಮಾಣ ಮಾಡಲು ಆಗುವ ಅಂದಾಜು ವೆಚ್ಚ ಎಷ್ಟು; ಎಷ್ಟು ಸಮಯದಲ್ಲಿ ಬ್ಯಾರೇಜ್ ನಿರ್ಮಾಣ ಮಾಡಲಾಗುವುದು? | |

ಸಂಖ್ಯೆ: MID 27 LAQ 2021

(ಜೆ.ಸಿ.ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು.

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 387 |
| ಸದಸ್ಯರ ಹೆಸರು | : | ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ) |
| ಉತ್ತರಿಸುವ ದಿನಾಂಕ | : | 02.02.2021 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ನೀರಾವರಿ ನಿಗಮದಿಂದ ಭೀಮಾ ನದಿಗೆ ಅಡ್ಡಲಾಗಿ ಸೊನ್ನ ಬ್ಯಾರೇಜ್ ನಿರ್ಮಾಣ ಮಾಡಿರುವುದು ನಿಜವೇ; | ಹೌದು.<br>1994 ರಿಂದ ನಿರ್ಮಾಣ ಕಾರ್ಯ ಪ್ರಾರಂಭವಾಗಿದ್ದು, 31-03-2010 ರಂದು ಸೊನ್ನ ಬ್ಯಾರೇಜ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ. |
| ಆ | ಹಾಗಿದ್ದಲ್ಲಿ, ಯಾವಾಗ ನಿರ್ಮಾಣ ಮಾಡಲಾಗಿದೆ; (ವಿವರ ಒದಗಿಸುವುದು) | |
| ಇ | ಸದರಿ ಬ್ಯಾರೇಜ್ ನಿರ್ಮಾಣಕ್ಕೆ ಇಂಡಿ ತಾಲ್ಲೂಕಿನ ಭೀಮಾ ನದಿ ತೀರದಲ್ಲಿ ಬರುವ ಖೇಡಗಿ, ಮಿರಗಿ, ರೋಡಗಿ, ಚಿಕ್ಕಮಣ್ಣೂರು, ಅಗರಖೇಡ, ಗುಬ್ಬೇವಾಡ, ಭುಯ್ಯಾರ ಶಿರಗೂರು ಇನಾಂ ಸೇರಿದಂತೆ ಸಿಂದಗಿ ತಾಲ್ಲೂಕಿನ ಹಲವಾರು ಗ್ರಾಮಗಳ ರೈತರ ಜಮೀನುಗಳನ್ನು, ವಶಪಡಿಸಿಕೊಂಡಿರುವುದು ನಿಜವೇ? ವಶಪಡಿಸಿಕೊಂಡ ಜಮೀನಿನ ವಿವರಗಳೇನು; (ಗ್ರಾಮವಾರು ವಿವರ ಒದಗಿಸುವುದು) | ಸದರಿ ಬ್ಯಾರೇಜ ನಿರ್ಮಾಣಕ್ಕೆ ಇಂಡಿ ತಾಲೂಕಿನ ಭೀಮಾ ನದಿ ತೀರದಲ್ಲಿ ಬರುವ ಖೇಡಗಿ, ಮಿರಗಿ, ರೋಡಗಿ, ನಾಗರಹಳ್ಳಿ, ಚಿಕ್ಕಮಣ್ಣೂರ, ಅಗರಖೇಡ, ಗುಬ್ಬೇವಾಡ, ಭುಯ್ಯಾರ ಗ್ರಾಮಗಳು ಸೇರಿದಂತೆ ಸಿಂದಗಿ ತಾಲ್ಲೂಕಿನ ದೇವಣಗಾಂವ್, ಬ್ಯಾಡಗಿಹಾಳ, ಮದ್ನಳ್ಳಿ, ಆಲಮೇಲ, ಕುರುಬತಾಳ ಹಳ್ಳಿ, ಕಡಣಿ, ತಾರಾಪೂರ ಮತ್ತು ತಾವರಖೇಡ ಗ್ರಾಮಗಳ ರೈತರ ಜಮೀನುಗಳನ್ನು ಕರ್ನಾಟಕ ನೀರಾವರಿ ನಿಗಮದಿಂದ ವಶಪಡಿಸಿಕೊಳ್ಳಲಾಗಿದೆ.<br>ಶಿರಗೂರು ಇನಾಂ ಗ್ರಾಮದ ಜಮೀನುಗಳನ್ನು ವಶಪಡಿಸಿಕೊಂಡಿರುವುದಿಲ್ಲ.<br><br>ಇಂಡಿ ತಾಲೂಕು ವಿವರ ಕೆಳಗಿನಂತಿದೆ. |

| ಕ್ರ. ಸಂ. | ಗ್ರಾಮ | ಒಟ್ಟು ಎ.ಗುಂ. | ಬಾಕಿ ಉಳಿದ ಕ್ಷೇತ್ರ ಎ.ಗುಂ | ಬಾಕಿ ಉಳಿದ ಕ್ಷೇತ್ರದ ಪ್ರಸ್ತುತ ಹಂತ |
|---|---|---|---|---|
| 1 | ಖೇಡಗಿ | 25-30 | 5-30 | 11(1) ಆಗಿ ಜೆಎಂಸಿ ಹಂತದಲ್ಲಿದೆ. |
| 2 | ರೋಡಗಿ | 49-28 | 27-33 | 11(1) ಆಗಿ ಜೆಎಂಸಿ ಹಂತದಲ್ಲಿದೆ. |
| 3 | ನಾಗರಹಳ್ಳಿ | 10-14 | 5-06 | 11(1) ಆಗಿ ಜೆಎಂಸಿ ಹಂತದಲ್ಲಿದೆ. |
| 4 | ಮಿರಗಿ | 25-08 | - | - |
| 5 | ಚಿಕ್ಕಮಣ್ಣೂರ | 2-18 | - | - |

| | | | | |
|---|---|---|---|---|
| 6 | ಗುಬ್ಬೇವಾಡ | 1–09 | – | – |
| 7 | ಅಗರಖೇಡ | 2–14 | – | – |
| 8 | ಭೂಯ್ಯಾರ | 16–29 | 16–29 | 11(1) ಆಗಿ ಜೆಎಂಸಿ ಹಂತದಲ್ಲಿದೆ. |

ಸಿಂದಗಿ ತಾಲೂಕು ವಿವರ

| | | | |
|---|---|---|---|
| 1 | ದೇವಣಗಾಂವ್ | 80–30 | – |
| 2 | ಬ್ಯಾಡಗಿಹಾಳ | 94–05 | – |
| 3 | ಮದ್ನಳ್ಳಿ | 186–26 | – |
| 4 | ಆಲಮೇಲ | 14–05 | – |
| 5 | ಕುರುಬತಾಳ ಹಳ್ಳಿ | 01–20 | – |
| 6 | ಕಡಣಿ | 61–30 | – |
| 7 | ತಾರಾಪೂರ | 43–10 | – |
| 8 | ತಾವರಖೇಡ | 70–38 | 39–39 11(1) ಆಗಿ ಜೆಎಂಸಿ ಹಂತದಲ್ಲಿದೆ. |

| | | |
|---|---|---|
| ಈ) | ಜಮೀನು ವಶಪಡಿಸಿಕೊಂಡಿದ್ದಲ್ಲಿ, ಸ್ವಾಧೀನಪಡಿಸಿಕೊಂಡಿದ್ದಲ್ಲಿ ಸದರಿ ಜಮೀನು ಕಳೆದುಕೊಂಡ ರೈತರುಗಳಿಗೆ ಇದುವರೆಗೂ ಪರಿಹಾರ ಧನ ನೀಡದಿರಲು ಕಾರಣಗಳೇನು; | ಪರಿಹಾರ ಧನ ವಿತರಣೆ ಮಾಡಲಾಗಿದ್ದು, ಬಾಕಿ ಉಳಿದ ಪರಿಹಾರ ಧನ ಪಾವತಿ ವಿವಿಧ ಹಂತಗಳ ಪ್ರಕ್ರಿಯೆಯಲ್ಲಿದೆ. |
| ಉ) | ಸದರಿ ಜಮೀನು ಕಳೆದುಕೊಂಡ ರೈತರುಗಳಿಗೆ ಯಾವಾಗ ಮತ್ತು ಯಾವ ಕಾಲಮಿತಿಯೊಳಗಾಗಿ ಜಮೀನಿನ ನಷ್ಟದ ಪರಿಹಾರ ಹಣವನ್ನು ವಿತರಿಸಲಾಗುವುದು; | ಆದ್ಯತೆ ಮೇರೆಗೆ ವಿವಿಧ ಹಂತಗಳ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ, ಭೂ ಪರಿಹಾರ ಹಣವನ್ನು ವಿತರಿಸಲು ಯೋಜಿಸಿದೆ. |
| ಊ) | ಅದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

**ಸಂಖ್ಯೆ: ಜಸಂಇ 10 ಎಂಎಲ್ಎ 2021**

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 397
2. ಸದಸ್ಯರ ಹೆಸರು : ಡಾ. ಯತೀಂದ್ರ ಸಿದ್ಧರಾಮಯ್ಯ
3. ಉತ್ತರಿಸಬೇಕಾದ ದಿನಾಂಕ : 02/02/2021
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ವರುಣ ವಿಧಾನಸಭಾ ಕ್ಷೇತದಲ್ಲಿ 2018-19, 2019-20 ಮತ್ತು 2020-21ನೇ ಸಾಲಿನಲ್ಲಿ ಎಷ್ಟು ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ. (ವರ್ಷವಾರು ವಿವರ ನೀಡುವುದು)</td><td>ವರುಣ ವಿಧಾನಸಭಾ ಕ್ಷೇತದಲ್ಲಿ 2018-19, 2019-20 ಮತ್ತು 2020-21ನೇ ಸಾಲಿನಲ್ಲಿ ಅಭಿವೃದ್ಧಿ ಪಡಿಸಿದ ಕೆರೆಗಳ ವಿವರಗಳು ಕೆಳಗಿನಂತಿದೆ:<br><br>
<table>
<tr><th>ಕ್ರ. ಸಂ.</th><th>ವರ್ಷ</th><th>ಅಭಿವೃದ್ಧಿಪಡಿಸಿದ ಕೆರೆಗಳ ಸಂಖ್ಯೆ</th><th>ಅಂದಾಜು ಮೊತ್ತ (ರೂ.ಲಕ್ಷ ಗಳಲ್ಲಿ</th></tr>
<tr><td>1</td><td>2018-19</td><td>2</td><td>400.00</td></tr>
<tr><td>2</td><td>2019-20</td><td>-</td><td>-</td></tr>
<tr><td>3</td><td>2020-21</td><td>-</td><td>-</td></tr>
</table>
<br>ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಆ</td><td>ನಂಜನಗೂಡು ತಾಲ್ಲೂಕು ಕಾರ್ಯ ಗ್ರಾಮದ ಇಂಗು ಕೆರೆ ಅಭಿವೃದ್ಧಿಗೆ 2 ವರ್ಷದ ಹಿಂದೆ ರೂ 2.00 ಕೋಟಿ ಮಂಜೂರಾಗಿದ್ದು, ಈ ಕೆರೆಯನ್ನು ಅಭಿವೃದ್ಧಿಪಡಿಸಲು ಹೆಚ್ಚುವರಿಯಾಗಿ ಅವಶ್ಯವಿರುವ ರೂ 3.00 ಕೋಟಿಗಳ ಅನುದಾನವನ್ನು ಈವರೆಗೆ ಮಂಜೂರು ಮಾಡದೇ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗದೇ ಇರುವುದು ಗಮನಕ್ಕೆ ಬಂದಿದೆಯೇ:</td><td rowspan="2">ವರುಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನಂಜನಗೂಡು ತಾಲ್ಲೂಕು ಕಾರ್ಯ ಗ್ರಾಮದ ಹತ್ತಿರ ಇಂಗುಕೆರೆ ನಿರ್ಮಾಣ ಕಾಮಗಾರಿಗೆ ರೂ.200.00 ಲಕ್ಷಗಳಿಗೆ ಅನುಮೋದನೆಗೊಂಡಿದ್ದು, ಸದರಿ ಯೋಜನೆಗೆ ಅಗತ್ಯವಿರುವ ಹೆಚ್ಚುವರಿ ಅನುದಾನ, ರೂ.300.00 ಲಕ್ಷಗಳನ್ನು ಅನುದಾನದ ಲಭ್ಯತೆಗನುಗುಣವಾಗಿ ಒದಗಿಸಲು ಕ್ರಮ ವಹಿಸಲಾಗುವುದು.</td></tr>
<tr><td>ಇ</td><td>ಬಂದಿದ್ದಲ್ಲಿ ಯಾವಾಗ ಅನುದಾನ ಬಿಡುಗಡೆ ಮಾಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು? (ವಿವರ ನೀಡುವುದು)</td></tr>
</table>

ಸಂಖ್ಯೆ:ಸನೀಇ 47 ಎಲ್‌ಎಕ್ಯೂ 2021

(ಜೆ.ಸಿ. ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು

ಅನುಬಂಧ

ವಿಧಾನಸಭಾ ಸದಸ್ಯರಾದ ಡಾ: ಯತೀಂದ್ರ ಸಿದ್ದರಾಮಯ್ಯ (ವರುಣ ಕ್ಷೇತ್ರ) ಇವರ ಪ್ರಶ್ನೆ 397 ಗೆ ಉತ್ತರ

**2018–19, 2019–20 ಮತ್ತು 2020–21 ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ವಿವಿಧ ಲೆಕ್ಕ ಶೀರ್ಷಿಕೆಯಡಿ ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಂಡಿರುವ ಕೆರೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಗಳ ವಿವರ**

ರೂ.ಲಕ್ಷಗಳಲ್ಲಿ

| ಕ್ರಮ ಸಂಖ್ಯೆ | ವರ್ಷ | ಲೆಕ್ಕ ಶೀರ್ಷಿಕೆ | ಜಿಲ್ಲೆ | ಕ್ಷೇತ್ರ | ಕಾಮಗಾರಿ ಹೆಸರು | ಅಂದಾಜು ಮೊತ್ತ | ಒಟ್ಟು ವೆಚ್ಚ | ಕಾಮಗಾರಿಯ ಹಂತ | | ಷರಾ |
|---|---|---|---|---|---|---|---|---|---|---|
| | | | | | | | | ಪೂರ್ಣಗೊಂಡಿದೆ | ಪ್ರಗತಿಯಲ್ಲಿದೆ | |
| | 2018–19 ಮುಂದುವರೆದ | | | | | | | | | |
| 1 | 2018–19 ಮುಂದುವರೆದ | 4702-00-101-1-02-139 – ಹೊಸ ಕೆರೆಗಳ ನಿರ್ಮಾಣ | ಮೈಸೂರು | ವರುಣ | ಕಾರ್ಯಗ್ರಾಮದ ಹತ್ತಿರ ಇಂಗುಕೆರೆ ನಿರ್ಮಾಣ ಕಾಮಗಾರಿ | 200.00 | 0.00 | - | | ಸದರಿ ಕಾಮಗಾರಿಯು ರೂ.200.00 ಲಕ್ಷಗಳಿಗೆ ಅನುಮೋದನೆಗೊಂಡಿದ್ದು, ರೂ.300.00ಲಕ್ಷಗಳಿಗೆ ಹೆಚ್ಚುವರಿ ಅನುದಾನವನ್ನು ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. |
| 2 | 2018–19 ಮುಂದುವರೆದ | 4702-00-101-1-07-139 – ಕೆರೆಗಳ ಆಧುನೀಕರಣ | ಮೈಸೂರು | ವರುಣ | ನಂಜನಗೂಡು ತಾಲ್ಲೂಕು ಹನುಮನಪುರ ಗ್ರಾಮದ ಹಲಸ್ತಿಕಟ್ಟೆ ಇಂಗು ಕೆರೆ ನಿರ್ಮಾಣ ಕಾಮಗಾರಿ. | 200.00 | 214.32 | ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ. | - | |
| | | | | | ಒಟ್ಟು | **400.00** | **214.32** | | | |
| | 2019–20 | ಯಾವುದೂ ಇರುವುದಿಲ್ಲ | | | | | | | | |
| | 2020–21 | ಯಾವುದೂ ಇರುವುದಿಲ್ಲ | | | | | | | | |

# ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 398
2. ಸದಸ್ಯರ ಹೆಸರು : ಡಾ. ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ)
3. ಉತ್ತರಿಸಬೇಕಾದ ದಿನಾಂಕ : 02.02.2021
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ನೆಲಮಂಗಲ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಎತ್ತಿನಹೊಳೆ ಯೋಜನೆಯ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ; | ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಸಲುವಾಗಿ ಮಾರ್ಚ್ 2019ರಲ್ಲಿ ಪ್ರಾರಂಭಿಸಲಾದ ಎತ್ತಿನಹೊಳೆ ಗುರುತ್ವ ಮುಖ್ಯ ಕಾಲುವೆಯ ಸರಪಳಿ 244.90 ಕಿ.ಮೀ ನಿಂದ ಕವಲೊಡೆಯುವ ತಿಪ್ಪಗೊಂಡನಹಳ್ಳಿ–ರಾಮನಗರ ಪೂರಕ ಕಾಲುವೆಯ ಕಾಮಗಾರಿಯು ತುಮಕೂರು, ಕೊರಟಗೆರೆ, ನೆಲಮಂಗಲ, ಬೆಂಗಳೂರು ಗ್ರಾಮಾಂತರ, ರಾಮನಗರ ತಾಲ್ಲೂಕುಗಳಲ್ಲಿ ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ.<br><br>ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಸದರಿ ಕಾಮಗಾರಿಯನ್ನು ಕೈಗೊಳ್ಳಲು ರೈತರುಗಳು ಒಪ್ಪಿಗೆ ನೀಡಿದ ಜಾಗಗಳಲ್ಲಿ ಪೈಪು ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಒಟ್ಟಾರೆ, ಸದರಿ ವಿಧಾನಸಭಾ ಕ್ಷೇತ್ರದಲ್ಲಿ 36.639 ಕಿ.ಮೀ. ಉದ್ದಕ್ಕೆ ಪೈಪು ಅಳವಡಿಸುವ ಕಾಮಗಾರಿ ಇದ್ದು, ಇದರಲ್ಲಿ 16.00 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಅಳವಡಿಸಲಾಗಿರುತ್ತದೆ. |
| ಆ) | ಸದರಿ ಕ್ಷೇತ್ರದ ಯಾವ ಯಾವ ಭಾಗದಲ್ಲಿ ಎತ್ತಿನಹೊಳೆ ಯೋಜನೆಯ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; | ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಸಲುವಾಗಿ ಕೈಗೊಳ್ಳಲಾಗಿರುವ ತಿಪ್ಪಗೊಂಡನಹಳ್ಳಿ–ರಾಮನಗರ ಪೂರಕ ಕಾಲುವೆಯ ಕಾಮಗಾರಿಯಡಿ ನೆಲಮಂಗಲ ಕ್ಷೇತ್ರದಲ್ಲಿ ರೈತರುಗಳು ಒಪ್ಪಿಗೆ ನೀಡಿದ ಗ್ರಾಮಗಳಾದ ಸೋಂಪುರ ಹೋಬಳಿಯ ಮರಳುಕುಂಟೆ, ಕುಂಟಗೊಮ್ಮನಹಳ್ಳಿ, ತ್ಯಾಮಗೊಂಡ್ಲು ಹೋಬಳಿಯಲ್ಲಿ, ತ್ಯಾಮಗೊಂಡ್ಲು ಕಸಬಾ, ತ್ಯಾಮಗೊಂಡ್ಲು ಅಮಾನಿಕೆರೆ, ಬಿದಲೂರು, ಕುಲುವನಹಳ್ಳಿ, ಬ್ಯಾಡರಹಳ್ಳಿ ಮತ್ತು ಕಸಬಾ ಹೊಬಳಿಯಲ್ಲಿ ಅರಳಸಂದ್ರ, ಕೆಂಪೊಹಳ್ಳಿ, ಶ್ರೀನಿವಾಸಪುರ, ಚೌಡಸಂದ್ರ, ಹೊನ್ನಸಂದ್ರ ಗ್ರಾಮಗಳಲ್ಲಿನ ಕೆಲವು ಭಾಗಗಳಲ್ಲಿ ಕಾಮಗಾರಿ ಕೈಗೊಳ್ಳಲಾಗಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. |
| ಇ) | ಈ ಕಾಮಗಾರಿಗಳು ಪೂರ್ಣಗೊಳ್ಳಲು ನಿಗದಿ ಮಾಡಿದ ಸಮಯವೆಷ್ಟು; | ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿ ಬರುವ ಟಿ.ಜಿ.ಹಳ್ಳಿ ಮತ್ತು ರಾಮನಗರ ಫೀಡರ್ ಕಾಲುವೆ ಕಾಮಗಾರಿಯನ್ನು ಮಾರ್ಚ್–2021 ರ ಒಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. |
| ಈ) | ಈ ಯೋಜನೆಗೆ ನೆಲಮಂಗಲ ಕ್ಷೇತ್ರದಲ್ಲಿ ಯಾವ ಯಾವ ಭಾಗಗಳಲ್ಲಿ ರೈತರ ಜಮೀನುಗಳನ್ನು ಭೂ ಸ್ವಾಧೀನ ಪಡಿಸಲಾಗಿದೆ; ರೈತರ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳುವಾಗ ಸರ್ಕಾರ ರೈತರಿಗೆ ನೀಡಿದ ಪರಿಹಾರ ಮೊತ್ತವೆಷ್ಟು; (ಸರ್ವೆ ನಂಬರ್ ಸಹಿತ ಗ್ರಾಮವಾರು ರೈತವಾರು ಮಾಹಿತಿ ನೀಡುವುದು | • ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿ ಕೈಗೆತ್ತಿಕೊಂಡಿರುವ ತಿಪ್ಪಗೊಂಡನಹಳ್ಳಿ – ರಾಮನಗರ ಗುರುತ್ವಾ ಫೀಡರ್ ಕಾಲುವೆ ಕಾಮಗಾರಿಯಡಿ ನೆಲಮಂಗಲ ಕ್ಷೇತ್ರದಲ್ಲಿ ಒಟ್ಟು 83ಎ – 09ಗುಂ ಅವಶ್ಯಕವಿದ್ದು, ಸದರಿ ಜಮೀನುಗಳ ಎಸ್.ಐ.ಎ ಪ್ರಕ್ರಿಯೆ ಪೂರ್ಣಗೊಂಡಿದ್ದು, 11(1) ಜಾರಿಗೊಳಿಸಲಾಗಿದ್ದು, ಜೆ.ಎಂ.ಸಿ ಕಾರ್ಯವು ಪ್ರಗತಿಯಲ್ಲಿದೆ. ಜೆ.ಎಂ.ಸಿ ಕಾರ್ಯ ಪೂರ್ಣಗೊಂಡು 19(1) ಅಧಿಸೂಚನೆಯಾದ ನಂತರ ಪರಿಹಾರವನ್ನು ನೀಡಬೇಕಿರುತ್ತದೆ. ಇನ್ನೂ ಪರಿಹಾರ ಮೊತ್ತದ ನಿರ್ಧಾರಣೆಯಾಗಬೇಕಾಗಿರುತ್ತದೆ.<br>• ಪ್ರಸ್ತುತ ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಭೂಮಾಲೀಕರಿಗೆ ಯಾವುದೇ ಭೂಪರಿಹಾರವನ್ನು ನೀಡಿರುವುದಿಲ್ಲ. |

<table>
<tr><td>ಉ)</td><td>ಎತ್ತಿನಹೊಳೆ ಯೋಜನೆಯಿಂದ ಸದರಿ ಕ್ಷೇತ್ರದ ಯಾವ ಯಾವ ಕೆರೆಗಳಿಗೆ ನೀರು ತುಂಬಿಸಲು ಯೋಜನೆ ರೂಪಿಸಲಾಗಿದೆ; (ಕೆರೆಗಳ ಮಾಹಿತಿ ಒದಗಿಸುವುದ)</td><td>ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಟಿ.ಜಿ.ಹಳ್ಳಿ ಫೀಡರ್ ಮೂಲಕ ನೆಲಮಂಗಲ ವಿಧಾನಸಭಾ ಕ್ಷೇತ್ರದ ಈ ಕೆಳಕಂಡ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಲು ಯೋಜಿಸಲಾಗಿದೆ.<br><br>
<table>
<tr><th>ಕ್ರ.ಸಂ</th><th>ಕೆರೆಯ ಹೆಸರು</th><th>ಹೋಬಳಿ</th><th>ಗ್ರಾಮ</th></tr>
<tr><td>1</td><td>ಮರಳಕುಂಟೆ ಕೆರೆ</td><td>ದಾಬಾಸ್‌ಪೇಟೆ</td><td>ಮರಳಕುಂಟೆ</td></tr>
<tr><td>2</td><td>ಮದಗಕೆರೆ</td><td>ದಾಬಾಸ್‌ಪೇಟೆ</td><td>ಮದಗಹಳ್ಳಿ</td></tr>
</table></td></tr>
<tr><td>ಊ)</td><td>ಈ ಯೋಜನೆಗೆ ಸದರಿ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳಿಗೆ, ಸರ್ಕಾರ ನಿಗದಿ ಮಾಡಿರುವ ಅನುದಾನವೆಷ್ಟು? (ಆದೇಶ ಪ್ರತಿ ಒದಗಿಸುವುದು)</td><td>ನಿಗಮದ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳಿಗೆ ಯೋಜನಾವಾರು ಅನುದಾನ ನಿಗದಿಪಡಿಸಲಾಗುತ್ತಿದ್ದು, ವಿಧಾನಸಭಾ ಕ್ಷೇತ್ರವಾರು ಅನುದಾನ ನಿಗದಿಪಡಿಸಿರುವುದಿಲ್ಲ.</td></tr>
</table>

**ಸಂಖ್ಯೆ: ಜಸಂಇ 04 ಡಬ್ಲ್ಯೂಎಲ್ಎ 2021**

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

# ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 401
2. ಸದಸ್ಯರ ಹೆಸರು : ಡಾ॥ ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ)
3. ಉತ್ತರಿಸುವ ದಿನಾಂಕ : 02-02-2021
4. ಉತ್ತರಿಸುವವರು : ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮಾನ್ಯ ಮುಖ್ಯ ಮಂತ್ರಿಗಳ ನವ ಬೆಂಗಳೂರು ಯೋಜನೆಯಡಿ ರಾಮನಗರ, ಮಾಗಡಿ, ದೇವನಹಳ್ಳಿ ಹಾಗೂ ನೆಲಮಂಗಲ ಕ್ಷೇತ್ರಗಳಿಗೆ ಮೀಸಲಿಟ್ಟಿರುವ 50 ಕೋಟಿ ಅನುದಾನದಲ್ಲಿ ಘನ ತ್ಯಾಜ್ಯ ವಿಲೇವಾರಿಯಿಂದಾಗಿ ಭಾದಿತ ಗೊಂಡಿರುವ ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಯೋಜನೆಯು ಯಾವ ಹಂತದಲ್ಲಿದೆ; | ಬಿಬಿಎಂಪಿ ವ್ಯಾಪ್ತಿಯ ಹೊರಗಿರುವ ನಾಲ್ಕು ವಿಧಾನ ಸಭಾ ಕ್ಷೇತ್ರಗಳಾದ ರಾಮನಗರ, ಮಾಗಡಿ, ನೆಲಮಂಗಲ ಮತ್ತು ದೇವನಹಳ್ಳಿ ವಿಧಾನ ಸಭಾ ಕ್ಷೇತ್ರಗಳ ಘನತ್ಯಾಜ್ಯ ನಿರ್ವಹಣೆಗೆ ರಾಮನಗರ ವಿಧಾನಸಭಾ ಕ್ಷೇತ್ರಕ್ಕೆ ರೂ.20.00 ಕೋಟಿಗಳು, ಮಾಗಡಿ ವಿಧಾನಸಭಾ ಕ್ಷೇತ್ರಕ್ಕೆ ರೂ.10.00 ಕೋಟಿಗಳು, ನೆಲಮಂಗಲ ವಿಧಾನಸಭಾ ಕ್ಷೇತ್ರಕ್ಕೆ ರೂ.10.00 ಕೋಟಿಗಳು ಹಾಗೂ ದೇವನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ರೂ.10.00 ಕೋಟಿಗಳು ಹೀಗೆ ಒಟ್ಟು ರೂ.50.00 ಕೋಟಿಗಳ ಅಂದಾಜು ಮೊತ್ತದಲ್ಲಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ಸರ್ಕಾರದ ಪತ್ರ ಸಂಖ್ಯೆ: ನಅಇ 57 ಎಂಎನ್‌ವೈ 2019, ದಿನಾಂಕ: 05-10-2020 ರಲ್ಲಿ ಬಿಬಿಎಂಪಿ ಆಯುಕ್ತರಿಗೆ ಪತ್ರ ಬರೆಯಲಾಗಿರುತ್ತದೆ.<br><br>ಅದರಂತೆ, ಆಯುಕ್ತರು, ಬಿಬಿಎಂಪಿ ಇವರು ದಿನಾಂಕ: 03-11-2020 ರಲ್ಲಿ ಸರ್ಕಾರಕ್ಕೆ ಪತ್ರ ಬರೆದು, ಈ ಮೇಲೆ ಹೇಳಿದ ನಾಲ್ಕು ವಿಧಾನಸಭಾ ಕ್ಷೇತ್ರಗಳಿಗೆ ಸದರಿ ಅನುದಾನವನ್ನು ಬಳಕೆ ಮಾಡಲು ಕ್ರಿಯಾ ಯೋಜನೆಯ ಬಗ್ಗೆ ನಿರ್ದಿಷ್ಟ ಮಾನದಂಡಗಳನ್ನು ಮತ್ತು ಸದರಿ ವಿಧಾನಸಭಾ ಕ್ಷೇತ್ರಗಳ ಯಾವ ಗ್ರಾಮಗಳಿಗೆ ಈ ಅನುದಾನವನ್ನು ಬಳಕೆ ಮಾಡಬೇಕು ಎಂಬ ಬಗ್ಗೆ ಸೂಕ್ತ ನಿರ್ದೇಶನ ನೀಡುವಂತೆ ಪತ್ರ ಬರೆದಿರುತ್ತಾರೆ. ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |
| ಆ | ಈ ಯೋಜನೆಗೆ ಅನುದಾನ ಮಂಜೂರು ಮಾಡಲಾಗಿದೆಯೇ; (ವಿವರ ಒದಗಿಸುವುದು) | ಅನುದಾನವನ್ನು ಒದಗಿಸಲು ಆರ್ಥಿಕ ಇಲಾಖೆಯು ಸಹಮತಿ ನೀಡಿರುತ್ತದೆ. |
| ಇ | ಈ ಯೋಜನೆಯ ಕ್ರಿಯಾ ಯೋಜನೆಗೆ ಇನ್ನೂ ಅನುಮತಿ ನೀಡದಿರಲು ಕಾರಣವೇನು; ಯಾವ ಅವಧಿಯೊಳಗೆ ಕ್ರಿಯಾ ಯೋಜನೆಗೆ ಅನುಮತಿ ನೀಡಿ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು; | ರಾಮನಗರ, ಮಾಗಡಿ, ನೆಲಮಂಗಲ ಮತ್ತು ದೇವನಹಳ್ಳಿ ವಿಧಾನ ಸಭಾ ಕ್ಷೇತ್ರಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಹೊರಗೆ ಇದ್ದು, ಸದರಿ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬಿಬಿಎಂಪಿಯು ಯಾವುದೇ ಘನತ್ಯಾಜ್ಯ ನಿರ್ವಹಣೆಯನ್ನು ಮಾಡುತ್ತಿರುವುದಿಲ್ಲ.<br>ಬಿಬಿಎಂಪಿ ಆಯುಕ್ತರು ಈ ಬಗ್ಗೆ ಮಾರ್ಗದರ್ಶನ ನೀಡುವಂತೆ ಕೋರಿದ್ದು, ತಾಂತ್ರಿಕ ಸಮಸ್ಯೆ ಇರುವ ಹಿನ್ನೆಲೆಯಲ್ಲಿ ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ. |

| | | |
|---|---|---|
| ಈ | ಈ ಯೋಜನೆಯಡಿ ನೆಲಮಂಗಲ ಕ್ಷೇತ್ರಕ್ಕೆ ಒಟ್ಟು ರೂ.30 ಕೋಟಿ ಅನುದಾನ ನಿಗದಿ ಮಾಡಲಾಗಿದ್ದು, ಆ ಪೈಕಿ ಪ್ರಸ್ತುತ ರೂ.10 ಕೋಟಿಗೆ ಮಾತ್ರ ಅನುಮತಿ ನೀಡಲಾಗಿರುವುದರಿಂದ ಬಾಕಿ ಇರುವ ರೂ.20 ಕೋಟಿ ಅನುದಾನವನ್ನು ಯಾವ ಅವಧಿಯೊಳಗೆ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದು? (ವಿವರ ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ: ನಅಇ/57/ಎಂಎನ್‌ವೈ/2019, ದಿನಾಂಕ: 29-07-2019ರನ್ವಯ ರಾಮನಗರ, ಮಾಗಡಿ, ಮತ್ತು ನೆಲಮಂಗಲ ವಿಧಾನಸಭಾ ಕ್ಷೇತ್ರಗಳಿಗೆ ತಲಾ 30.00 ಕೋಟಿಗಳಂತೆ ಒಟ್ಟು ರೂ.90.00 ಕೋಟಿಗಳನ್ನು ಬಿಡುಗಡೆ ಮಾಡಿ ಆದೇಶಿಸಲಾಗಿದ್ದ ಆದೇಶವನ್ನು, ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20-09-2019ರ "ಮುಖ್ಯ ಮಂತ್ರಿಗಳ ನವ ನಗರೋತ್ಥಾನ" ಯೋಜನೆಯಡಿ ಹಿಂಪಡೆಯಲಾಗಿರುತ್ತದೆ.<br><br>ಪ್ರಸ್ತುತ ಆರ್ಥಿಕ ಇಲಾಖೆಯು ರಾಮನಗರ ವಿಧಾನಸಭಾ ಕ್ಷೇತ್ರಕ್ಕೆ ರೂ.20.00 ಕೋಟಿಗಳು, ಮಾಗಡಿ ವಿಧಾನಸಭಾ ಕ್ಷೇತ್ರಕ್ಕೆ ರೂ.10.00 ಕೋಟಿಗಳು, ನೆಲಮಂಗಲ ವಿಧಾನಸಭಾ ಕ್ಷೇತ್ರಕ್ಕೆ ರೂ.10.00 ಕೋಟಿಗಳು ಹಾಗೂ ದೇವನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ರೂ.10.00 ಕೋಟಿಗಳು ಹೀಗೆ ಒಟ್ಟು ರೂ.50.00 ಕೋಟಿಗಳ ಅನುದಾನವನ್ನು ಸದರಿ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿಯಿಂದಾಗಿ ಭಾದಿತಗೊಂಡಿರುವ ಗ್ರಾಮಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಆರ್ಥಿಕ ಇಲಾಖೆಯು ಸಹಮತಿ ನೀಡಿರುತ್ತದೆ.<br><br>ಸದರಿ ಕ್ಷೇತ್ರಗಳು ಬಿಬಿಎಂಪಿ ವ್ಯಾಪ್ತಿಯ ಹೊರಗೆ ಇರುವುದರಿಂದ ಹಾಗೂ ಬಿಬಿಎಂಪಿಯು ಘನತ್ಯಾಜ್ಯವನ್ನು ಸದರಿ ಪ್ರದೇಶಗಳಲ್ಲಿ ವಿಲೇವಾರಿ ಮಾಡದೇ ಇರುವ ಹಿನ್ನೆಲೆಯಲ್ಲಿ, ರೂ.50.00 ಕೋಟಿಗಳ ಅಂದಾಜು ಮೊತ್ತದ ಕ್ರಿಯಾ ಯೋಜನೆಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸುವ ಕುರಿತು ಬಿಬಿಎಂಪಿ ಆಯುಕ್ತರು ಸರ್ಕಾರದ ನಿರ್ದೇಶನ ಕೋರಿದ್ದು, ಆದರೆ, ಈ ಕುರಿತು ಸ್ವಲ್ಪಮಟ್ಟದ ತಾಂತ್ರಿಕ ಸಮಸ್ಯೆ ಇರುವ ಹಿನ್ನೆಲೆಯಲ್ಲಿ ಈ ಬಗ್ಗೆ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ. |

**ಸಂಖ್ಯೆ: ನಅಇ 14 ಎಂಎನ್‌ವೈ 2021 (ಇ)**

(ಬಿ.ಎಸ್. ಯಡಿಯೂರಪ್ಪ.)
ಮುಖ್ಯಮಂತ್ರಿ

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 406 |
| ಸದಸ್ಯರ ಹೆಸರು | : | ಶ್ರೀ ಮಸಾಲ ಜಯರಾಮ್ (ತುರುವೇಕೆರೆ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ತುರುವೇಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ 2015–16 ನೇ ಸಾಲಿನಲ್ಲಿ ಬೆಸ್ಕಾಂ ವತಿಯಿಂದ ನಿರಂತರ ಜ್ಯೋತಿ ಯೋಜನೆಯಡಿ 2 ಮತ್ತು 3ನೇ ಹಂತದಲ್ಲಿ ಕೈಗೊಂಡಿರುವ ಕಾಮಗಾರಿಯುಕಳಪೆ ಮಟ್ಟದಿಂದ ಕೂಡಿದ್ದು, ಕಾಮಗಾರಿಯ ಕುರಿತು ತನಿಖೆ ನಡೆಸಿ ಗುತ್ತಿಗೆದಾರರು ಮತ್ತು ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅವು ಯಾವ ಹಂತದಲ್ಲಿದೆ (ಸಂಪೂರ್ಣ ಮಾಹಿತಿ ನೀಡುವುದು); | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ತುರುವೇಕೆರೆ ತಾಲ್ಲೂಕಿನಲ್ಲಿ ನಿರಂತರ ಜ್ಯೋತಿ ಯೋಜನೆಯ ಹಂತ–2 ರಲ್ಲಿ 14 ಫೀಡರ್ ಗಳ ಕಾಮಗಾರಿಯನ್ನು 2013ರಲ್ಲಿ ಮತ್ತು ಹಂತ–3ರಲ್ಲಿ 12 ಫೀಡರ್ ಗಳ ಕಾಮಗಾರಿಯನ್ನು 2016 ರಲ್ಲಿ ಮೆ॥ ಟ್ರಾನ್ಸ್ ಗ್ಲೋಬಲ್ ಪವರ್ ಲಿಮಿಟೆಡ್ ರವರಿಗೆ ಗುತ್ತಿಗೆ ನೀಡಿದ್ದು, ಹಂತ–2 ಮತ್ತು ಹಂತ–3 ಫೀಡರ್ ಗಳ ಕಾಮಗಾರಿಗಳನ್ನು ಕ್ರಮವಾಗಿ 2015 ಮತ್ತು 2019 ರಲ್ಲಿ ಪೂರ್ಣಗೂಳಿಸಲಾಗಿರುತ್ತದೆ.<br><br>ಮುಂದುವರೆದು, ಸದರಿ ದೂರಿನ ಅನ್ವಯ ಈಗಾಗಲೇ ಬೆವಿಕಂ ವತಿಯಿಂದ ನಾಲ್ಕು ಅಧಿಕಾರಿಗಳನ್ನು ಒಳಗೊಂಡ ಒಂದು ತನಿಖಾ ತಂಡವನ್ನು ರಚಿಸಿದ್ದು, ತನಿಖಾ ಕಾರ್ಯವು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. |
| ಆ) | ಸದರಿ ಯೋಜನೆಯಡಿ 26 ಫೀಡರ್ ಗಳಿದ್ದು, ಗುಣಮಟ್ಟವಿಲ್ಲದ ಎ.ಬಿ.ಕೇಬಲ್ ಮತ್ತು ಯು.ಜಿ. ಕೇಬಲ್, ಟ್ರಾನ್ಸ್ ಫಾರ್ಮರ್, ವಿದ್ಯುತ್ ಕಂಬಗಳನ್ನು ಅಳವಡಿಸಿದ್ದು, ಅವುಗಳು ಸಂಪೂರ್ಣ ಕಳಪೆ ಮಟ್ಟದಿಂದ ಕೂಡಿದ್ದು, ಇದು ಅಕ್ರಮವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನಿರಂತರ ಜ್ಯೋತಿ ಯೋಜನೆ ಹಂತ–2 ಮತ್ತು ಹಂತ–3 ರ ಟೆಂಡರ್ ನಲ್ಲಿ ನಮೂದಿಸಿರುವ ತಾಂತ್ರಿಕ ನಿಯಮಾವಳಿಗೆ ಒಳಪಟ್ಟಿರುವಂತೆ ಬೆವಿಕಂ ಅನುಮೋದನೆ ಪಡೆದಿರುವ ಕಂಪನಿಯಿಂದ (BESCOM approved vendors) ಗುಣಮಟ್ಟ ವಿರುವ ಎ.ಬಿ.ಕೇಬಲ್ ಮತ್ತು ಯು.ಜಿ.ಕೇಬಲ್, ಟ್ರಾನ್ಸಫಾರ್ಮರ್, ವಿದ್ಯುತ್ ಕಂಬಗಳನ್ನು ಸದರಿ ಕಾಮಗಾರಿಗೆ ಒದಗಿಸಲಾಗಿರುತ್ತದೆ.<br><br>ಮುಂದುವರೆದು, ಹಂತ–2 ರಲ್ಲಿ ಸುಮಾರು 35.02 ಕಿ.ಮೀ ಹಾಗು ಹಂತ–3 ರಲ್ಲಿ ಸುಮಾರು 52.35 ಕಿ.ಮೀ ಎ.ಬಿ.ಕೇಬಲ್ ಅಳವಡಿಸಿದ್ದು, 1.16 ಕಿಮೀ ಎ.ಬಿ.ಕೇಬಲ್ ಖಾತರಿ ಅವಧಿ ಮುಗಿದ ನಂತರ ಹಾನಿಗೊಳಗಾಗಿದ್ದು, ಉಳಿದ ಎ.ಬಿ.ಕೇಬಲ್ ಚಾಲನೆಯಲ್ಲಿರುತ್ತದೆ. ಹಾನಿಗೊಳಗಾದ ಎ.ಬಿ.ಕೇಬಲ್ ಅನ್ನು ಬದಲಾಯಿಸಿ Rabbit ಕಂಡಕ್ಟರ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. |

…2

| | | |
|---|---|---|
| ಇ) | ಬಂದಿದ್ದಲ್ಲಿ, ಸದರಿ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು); | ಸದರಿ ದೂರಿನ ಅನ್ವಯ ತನಿಖೆ ಪೂರ್ಣಗೊಳ್ಳುವ ಹಂತದಲ್ಲಿದ್ದು, ತನಿಖಾ ವರದಿ ಬಂದ ನಂತರ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಲಾಗುವುದು. |
| ಈ) | ಈ ಅಕ್ರಮ ಯೋಜನೆಯಲ್ಲಿ ಶಾಮೀಲಾಗಿರುವ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸುವ ಬಗ್ಗೆ ಹಾಗೂ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | |

ಸಂಖ್ಯೆ: ಎನರ್ಜಿ 6 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

## ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 413
2. ಸದಸ್ಯರ ಹೆಸರು : ಶ್ರೀ ಪ್ರಿಯಾಂಕ್ ಎಂ. ಖರ್ಗೆ
3. ಉತ್ತರಿಸಬೇಕಾದ ದಿನಾಂಕ : 02.02.2021
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು.

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | 2020–21ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಗೆ ನಬಾರ್ಡ್ ಯೋಜನೆಯಡಿಯಲ್ಲಿ ಎಷ್ಟು ಅನುದಾನ ಬಿಡುಗಡೆಗೊಳಿಸಲಾಗಿರುತ್ತದೆ; | 2020–21ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಗೆ ನಬಾರ್ಡ್ ಯೋಜನೆಯಡಿಯಲ್ಲಿ ಮುಂದುವರೆದ ಕಾಮಗಾರಿಗಳಿಗೆ ಇದುವರೆಗೆ ರೂ.100.00 ಲಕ್ಷ ಅನುದಾನ ಬಿಡುಗಡೆಗೊಳಿಸಲಾಗಿರುತ್ತದೆ. |
| ಆ | ಬಿಡುಗಡೆಗೊಳಿಸಿದ್ದಲ್ಲಿ, ಯಾವ ಯಾವ ಕಾಮಗಾರಿಗೆ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿರುತ್ತದೆ (ಕಾಮಗಾರಿವಾರು ವಿವರ ನೀಡುವುದು); | ಕಾಮಗಾರಿವಾರು ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಇ | 2020–21ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಗೆ ನಬಾರ್ಡ್ ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆಗೊಳಿಸದಿದ್ದಲ್ಲಿ, ಯಾವ ಕಾರಣಕ್ಕೆ ಬಿಡುಗಡೆ ಮಾಡಲಾಗಿರುವುದಿಲ್ಲ (ಸಂಪೂರ್ಣ ವಿವರ ನೀಡುವುದು)? | ಪ್ರಶ್ನೆ ಉದ್ಭವಿಸುವುದಿಲ್ಲ. |

ಕಡತ ಸಂಖ್ಯೆ: MID 29 LAQ 2021

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಶ್ರೀ ಪ್ರಿಯಾಂಕ್ ಎಂ. ಖರ್ಗೆ, ಮಾನ್ಯ ವಿಧಾನಸಭೆ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:413ಕ್ಕೆ ಅನುಬಂಧ

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ | 2020-21ನೇ ಸಾಲಿನಲ್ಲಿ ಇದುವರೆಗೆ ಬಿಡುಗಡೆಯಾದ ಅನುದಾನ | ಒಟ್ಟು ವೆಚ್ಚ | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಕಲಬುರಗಿ | ಅಫಜಲಪೂರ | ಬಡದಾಳ ಗ್ರಾಮದ ಹತ್ತಿರ ಸ್ಥಳಿಯ ನಾಲಾಕ್ಕೆ ಅಡ್ಡಲಾಗಿ ಜಿನುಗು ಕೆರೆ ನಿರ್ಮಾಣ | 90.12 | 0.00 | 89.52 | ಕಾಮಗಾರಿ ಪೂರ್ಣಗೊಂಡಿದೆ |
| 2 | ಕಲಬುರಗಿ | ಅಫಜಲಪೂರ | ದೇವಲ ಘಾಣಗಾಪೂರ-ತೆಲ್ಲೂರ ಗ್ರಾಮಗಳ ಮಧ್ಯೆ ಬಿ.ಸಿ.ಬಿ. ನಿರ್ಮಾಣ | 423.35 | 63.92 | 420.98 | ಕಾಮಗಾರಿ ಪೂರ್ಣಗೊಂಡಿದೆ |
| 3 | ಕಲಬುರಗಿ | ಚಿಂಚೋಳಿ | ಬೀರನಳ್ಳಿ ಕೆರೆಯ ಮುಖ್ಯ ಕಾಲುವೆ (ರಾಜ ಕಾಲುವೆ) ಸುಧಾರಣೆ | 93.34 | 0.00 | 92.95 | ಕಾಮಗಾರಿ ಪೂರ್ಣಗೊಂಡಿದೆ |
| 4 | ಕಲಬುರಗಿ | ಕಲಬುರಗಿ | ಹಾಗರಗುಂಡಗಿ ಗ್ರಾಮದ ಹತ್ತಿರ ಬಿ.ಸಿ.ಬಿ. ನಿರ್ಮಾಣ | 162.30 | 36.08 | 167.63 | ಕಾಮಗಾರಿ ಪೂರ್ಣಗೊಂಡಿದೆ |
| 5 | ಕಲಬುರಗಿ | ಕಲಬುರಗಿ | ಶ್ರೀನಿವಾಸ ಸರಡಗಿ ಗ್ರಾಮದ ಹತ್ತಿರ ಆಣೆಕಟ್ಟು ನಿರ್ಮಾಣ | 85.10 | 0.00 | 81.50 | ಕಾಮಗಾರಿ ಪೂರ್ಣಗೊಂಡಿದೆ |
| 6 | ಕಲಬುರಗಿ | ಚಿತ್ತಾಪೂರ | ಮುಡಬಾಳ ಗ್ರಾಮದ ಹತ್ತಿರ ಕಾಗಿಣಾ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ | 1018.60 | 0.00 | 845.68 | ಕಾಮಗಾರಿ ಪೂರ್ಣಗೊಂಡಿದೆ |
| 7 | ಕಲಬುರಗಿ | ಚಿತ್ತಾಪೂರ | ಮುಚಖೇಡ ಗ್ರಾಮದ ಹತ್ತಿರ ಬಿ.ಸಿ.ಬಿ. ನಿರ್ಮಾಣ | 167.06 | 0.00 | 165.17 | ಕಾಮಗಾರಿ ಪೂರ್ಣಗೊಂಡಿದೆ |
| | | | | **2039.87** | **100.00** | **1863.43** | |

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 419 |
| ಸದಸ್ಯರ ಹೆಸರು | : | ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ಚಿಕ್ಕಬಳ್ಳಾಪುರ ಜಿಲ್ಲೆಗೆ H.N.Vally ಮತ್ತು ಎತ್ತಿನ ಹೊಳೆ ಯೋಜನೆಯಡಿ ಕೆರೆ ತುಂಬಿಸುವ ಕಾರ್ಯಕ್ರಮ ಜಾರಿಯಲ್ಲಿದ್ದು ಕೆರೆಗಳನ್ನು ಅಭಿವೃದ್ಧಿ ಪಡಿಸಲು ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕಾಗಿದ್ದು ಕೆರೆಗಳಲ್ಲಿ ಇಂಧನ ಇಲಾಖೆಯಿಂದ ಅಳವಡಿಸಿರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರ ಮಾಡುವ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ H.N.Vally ಮತ್ತು ಎತ್ತಿನ ಹೊಳೆ ಯೋಜನೆಯಡಿ ಕೆರೆ ತುಂಬಿಸುವ ಕಾರ್ಯಕ್ರಮ ಜಾರಿಯಲ್ಲಿದ್ದು, ಉದ್ದೇಶಿತ ಕೆರೆಗಳಲ್ಲಿ ಈ ಮೊದಲು ನೀರಿಲ್ಲದೆ ಇರುವ ಕಾರಣ ಕುಡಿಯುವ ನೀರಿಗೋಸ್ಕರ ಸರ್ಕಾರದ ವತಿಯಿಂದ ಕುಡಿಯುವ ನೀರಿಗೆ ವಿವಿಧ ಇಲಾಖೆಗಳಾದ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಅಗ್ನಿಶಾಮಕ, ಇತರೆ ಇಲಾಖೆಯವರು ಕೊಳವೆಬಾವಿ ಕೊರೆಸಿ ಅದಕ್ಕೆ ವಿದ್ಯುಧ್ದೀಕರಣಗೊಳಿಸಲು ವಿದ್ಯುತ್ ಮಾರ್ಗಗಳನ್ನು ಎಳೆದು ಪರಿವರ್ತಕ ಕೇಂದ್ರಗಳನ್ನು ಬೆ.ವಿ.ಕಂ / ಕೆ.ಇ.ಆರ್.ಸಿ ನಿಯಾಮಾನುಸಾರ ಅಳವಡಿಸಲಾಗಿರುತ್ತದೆ. ಇಂತಹ ವಿದ್ಯುತ್ ಮಾರ್ಗಗಳನ್ನು ಮತ್ತು ಪರಿವರ್ತಕಗಳನ್ನು ಸ್ಥಳಾಂತರ ಮಾಡಲು ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಬಳ್ಳಾಪುರ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಗಿ ಕುಡಿಯುವ ನೀರಿನ ಕೊಳವೆಬಾವಿಗಳಿಗೆ ಅಳವಡಿಸಿರುವ ವಿದ್ಯುತ್ ಮಾರ್ಗಗಳನ್ನು ಹಾಗೂ ಪರಿವರ್ತಕಗಳನ್ನು ಸಂಬಂಧಪಟ್ಟ ಇಲಾಖೆಯವರೇ ಸ್ಥಳಾಂತರಿಸಲು ಒಪ್ಪಿಕೊಂಡಿರುತ್ತಾರೆ. ಕಾರ್ಯಾದೇಶ ನೀಡಿ ಕ್ರಮ ಕೈಗೊಳ್ಳಲಾಗಿರುತ್ತದೆ. |
| ಆ) | ಕೆರೆಗಳಲ್ಲಿ ಅಳವಡಿಸಿರುವ ಈ ವಿದ್ಯುತ್ ಕಂಬಗಳನ್ನು ಸ್ಥಳಾಂತರ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; | |
| ಇ) | ಈ ವಿದ್ಯುತ್ ಕಂಬಗಳನ್ನು ಸ್ಥಳಾಂತರ ಮಾಡಲು ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಹಣ ಪಾವತಿ ಮಾಡಬೇಕಾಗಿದೆಯೇ; (ವಿವರ ನೀಡುವುದು) | ಸಣ್ಣ ನೀರಾವರಿ ಇಲಾಖೆಯವರ ಕೋರಿಕೆ ಮೇರೆಗೆ ಕುಡಿಯುವ ನೀರಿನ ಸ್ಥಾವರಗಳ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು ನಿಗಮ / ಕೆ.ಇ.ಆರ್.ಸಿ ನಿಯಮಾವಳಿಗಳ ಅನ್ವಯ ಸ್ವಯಂ ಕಾರ್ಯ ನಿರ್ವಹಣೆ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅಂದಾಜು ಪಟ್ಟಿಯನ್ನು ತಯಾರಿಸಿ ಹಣ ಪಾವತಿಸುವಂತೆ ತಿಳಿಸಿ ಸಣ್ಣ ನೀರಾವರಿ ಇಲಾಖೆಗೆ ಪತ್ರವನ್ನು ಬರೆಯಲಾಗಿರುತ್ತದೆ. ಆದರೆ ಸದರಿಯವರು ಇದುವರೆಗೂ ಹಣವನ್ನು ಪಾವತಿ ಮಾಡಿರುವುದಿಲ್ಲ. |

...2

| | | |
|---|---|---|
| ಈ) | ಹಾಗಿದ್ದಲ್ಲಿ, ವಿದ್ಯುತ್ ಕಂಬ ಅಳವಡಿಸಲು ಮೊದಲು ಸಣ್ಣ ನೀರಾವರಿ ಇಲಾಖೆಯ ಅನುಮತಿ ಪಡೆದು ಅಳವಡಿಸಲಾಗಿದೆಯೇ? | ಸರ್ಕಾರದ ವಿವಿಧ ಇಲಾಖೆಗಳು ಕುಡಿಯುವ ನೀರಿನ ಉದ್ದೇಶಕ್ಕಾಗಿ ಕುಡಿಯುವ ನೀರಿನ ಕೊಳವೆಬಾವಿಗಳ ಬಿಂದುಗಳನ್ನು ಸರ್ಕಾರದ ವತಿಯಿಂದ ಗೊತ್ತುಪಡಿಸಿರುವ ಜಾಗವು ಕೆರೆಯಲ್ಲೇ ಆಗಿರುವುದರಿಂದ ಕುಡಿಯುವ ನೀರು ಸಾರ್ವಜನಿಕರಿಗೆ / ಜಾನುವಾರುಗಳಿಗೆ ಅತ್ಯವಶ್ಯಕ ವಾಗಿರುವುದರಿಂದ ಇವುಗಳಿಗೆ ವಿದ್ಯುದ್ದೀಕರಣವನ್ನು ಬೇರೆ ವಿದ್ಯುತ್ ಮಾರ್ಗ ಇಲ್ಲದೆ ಇರುವುದರಿಂದ ನಿಗಮ / ಕೆ.ಇ.ಆರ್.ಸಿ ನಿಯಮಾನುಸಾರ ಮಾಡಲಾಗಿದೆ. ಆದ್ದರಿಂದ ಬೆ.ವಿ.ಕಂಪನಿ ವತಿಯಿಂದ ಸಣ್ಣ ನೀರಾವರಿ ಇಲಾಖೆಯ ಅನುಮತಿ ಪಡೆದಿರುವುದಿಲ್ಲ. |

**ಸಂಖ್ಯೆ: ಎನರ್ಜಿ 8 ಪಿಪಿಎಂ 2021**

ಬಿಎಸ್
(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

**ಕರ್ನಾಟಕ ವಿಧಾನ ಸಭೆ**

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 426 |
| 2 | ಸದಸ್ಯರ ಹೆಸರು | : | ಶ್ರೀ ಸೋಮಲಿಂಗಪ್ಪ ಎಂ.ಎಸ್ |
| 3 | ಉತ್ತರಿಸಬೇಕಾದ ದಿನಾಂಕ: | : | 02.02.2021 |
| 4 | ಉತ್ತರಿಸುವವರು | : | ಸಣ್ಣ ನೀರಾವರಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬಲಕುಂದಿ ಮುದೇನೂರು ಗ್ರಾಮಗಳ ಮಧ್ಯ ಹರಿಯುವ ವೇದಾವತಿ ನದಿಗೆ ಬ್ರಿಜ್ ಕಂ ಬ್ಯಾರೇಜ್ ನಿರ್ಮಿಸಲು ಅವಶ್ಯವಿರುವ ರೂ.35.00 ಕೋಟಿ ರೂಪಾಯಿಗಳ ಪೈಕಿ ಈಗಾಗಲೇ ಖನಿಜ ನಿಧಿಯಿಂದ ರೂ.17.50 ಕೋಟಿ ಅನುದಾನ ಬಿಡುಗಡೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗಮನಕ್ಕೆ ಬಂದಿದೆ. |
| ಆ | ಹಾಗಿದ್ದಲ್ಲಿ, ಬ್ರಿಜ್ ಕಂ ಬ್ಯಾರೇಜ್‌ಗೆ ಇನ್ನುಳಿದ ರೂ.17.50 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದ್ದರೂ ಅನುದಾನ ಬಿಡುಗಡೆ ಮಾಡುವಲ್ಲಿ ವಿಳಂಬವಾಗುತ್ತಿದ್ದು, ಈ ಬಗ್ಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು? (ಮಾಹಿತಿ ಒದಗಿಸುವುದು) | ಸದರಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ರೂ.35.00ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಪ್ರಸ್ತಾಪಿಸಿದ್ದು, ಈ ಪೈಕಿ ರೂ.17.50ಕೋಟಿಗಳನ್ನು ಖನಿಜ ನಿಧಿಯಿಂದ ಬಿಡುಗಡೆಯಾಗಿದ್ದು, ಉಳಿದ ರೂ.17.50 ಕೋಟಿಗಳನ್ನು ಇಲಾಖೆಯಿಂದ ಒದಗಿಸಿ, ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ. ಆರ್ಥಿಕ ಇಲಾಖೆಯು ಕಾಮಗಾರಿಗೆ ಅವಶ್ಯವಿರುವ ಪೂರ್ಣ ಅನುದಾನವನ್ನು DMF ನಿಂದಲೇ ಪಡೆದು ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸುವಂತೆ ಸೂಚಿಸಿರುತ್ತದೆ.<br><br>ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ಉತ್ತರ ವಲಯ ವಿಜಯಪುರ ಇವರು ಜಿಲ್ಲಾ ಖನಿಜ ಪ್ರತಿಷ್ಠಾನ ಇವರೊಂದಿಗೆ ಸಮಾಲೋಚಿಸಿದ್ದು, ಪೂರ್ಣ ಅನುದಾನವನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ಒದಗಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತದೆ. ಈ ಯೋಜನೆಯ ಅನುಷ್ಠಾನದಿಂದ ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲ್ಲೂಕಿನ ಮುದೇನೂರು ಹಾಗೂ ಬಲಕುಂದಿ ಗ್ರಾಮಗಳ ನಡುವೆ ವೇದಾವತಿ ನದಿಗೆ ಅಡ್ಡಲಾಗಿ ಸೇತುವೆ ಸಹಿತ ಬಾಂದಾರ ನಿರ್ಮಿಸುವುದರಿಂದ ನೀರಿನ ಶೇಖರಣೆಯಾಗಿ ಸುತ್ತಮುತ್ತಲಿನ ಪ್ರದೇಶಕ್ಕೆ ಪರೋಕ್ಷ |

| | | |
|---|---|---|
| | | ನೀರಾವರಿ ಸೌಲಭ್ಯ ಕಲ್ಪಸುವುದು, ಅಂತರ್ಜಲ ಮಟ್ಟವನ್ನು ಹೆಚ್ಚುಸುವ ಕಾಮಗಾರಿಯಾಗಿದ್ದು, ಈ ಯೋಜನೆಯಿಂದ ಅಂತರ್ಜಲ ಅಭಿವೃದ್ಧಿಗೆ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ಬಹಳ ಉಪಯೋಗವಾಗುವುದರಿಂದ ಬಳ್ಳಾರಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಅನುದಾನದಿಂದ ರೂ.17.50 ಕೋಟಿ ಅನುದಾನ ಹಾಗೂ ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಉಳಿದ ಮೊತ್ತವನ್ನು ಭರಿಸುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಮರು ಸಲ್ಲಿಸಲಾಗಿದೆ. |

**ಕಡತ ಸಂಖ್ಯೆ: MID 56 LAQ 2021**

(ಜೆ.ಸಿ.ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು

# ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 432
2. ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
3. ಉತ್ತರಿಸುವ ದಿನಾಂಕ : 02-02-2021
4. ಉತ್ತರಿಸುವವರು : ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿರುವ ರಾಜಕಾಲುವೆಗಳ ಖಾಯಂ ಸುವ್ಯವಸ್ಥೆಗಾಗಿ ಹಾಗೂ ನಿರ್ವಹಣೆಗಾಗಿ ಖಾಯಂ ಸುವ್ಯವಸ್ಥೆಗಳನ್ನು ಮಾಡಲಾಗಿದೆಯೇ; ರಾಜಕಾಲುವೆಗಳ ಕುರಿತು ಸುವ್ಯವಸ್ಥಿತ ವಿಧಿವಿಧಾನಗಳು ಯಾವುವು; | ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿ 842 ಕಿ.ಮೀ ಉದ್ದದ ರಾಜಕಾಲುವೆಗಳಿದ್ದು, ಇವುಗಳಲ್ಲಿ 440 ಕಿ.ಮೀ ಉದ್ದದ ರಾಜಕಾಲುವೆಗಳಿಗೆ ತಡೆಗೋಡೆ ಇರುತ್ತದೆ. ಈ ತಡೆಗೋಡೆ ಸಹಿತ ರಾಜಕಾಲುವೆಗಳನ್ನು ವಾರ್ಷಿಕ ನಿರ್ವಹಣಾ ಗುತ್ತಿಗೆ ಕರಾರಿನಂತೆ ರಾಜಕಾಲುವೆಗಳನ್ನು ಖಾಯಂ ಆಗಿ ಸುವ್ಯವಸ್ಥಿತವಾಗಿ ನಿರ್ವಹಣೆ ಮಾಡಲಾಗುತ್ತಿರುತ್ತದೆ.<br>ಉಳಿದ 402 ಕಿ.ಮೀ ಉದ್ದದ ರಾಜಕಾಲುವೆಗಳು ಮಣ್ಣಿನ ಕಾಲುವೆ/ಕಚ್ಚಾ ಕಾಲುವೆಗಳಾಗಿದ್ದು, ಸದರಿ ಕಾಲುವೆಗಳಲ್ಲಿ ತುಂಬಿಕೊಳ್ಳುವ ಹೂಳನ್ನು ಮತ್ತು ಗಿಡಗಂಟಿಗಳನ್ನು ತೆಗೆಯುವ ಕಾರ್ಯವನ್ನು ಸುವ್ಯವಸ್ಥಿತವಾಗಿ ಮಾಡಲಾಗುತ್ತಿರುತ್ತದೆ. |
| ಆ | ಮಹಾನಗರ ವ್ಯಾಪ್ತಿಯಲ್ಲಿ ಬರುವ ರಾಜಕಾಲುವೆಗಳ ಅಭಿವೃದ್ಧಿಗಾಗಿ / ನಿರ್ವಹಣೆ ಗಾಗಿ ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಿರುವ ಮೊತ್ತ ಎಷ್ಟು; | ಮಹಾನಗರ ವ್ಯಾಪ್ತಿಯಲ್ಲಿ ಬರುವ ರಾಜಕಾಲುವೆಗಳ ಅಭಿವೃದ್ಧಿಗಾಗಿ 2016-17, 2017-18, 2018-19ನೇ ಸಾಲಿನಲ್ಲಿ ರೂ.1217.00 ಕೋಟಿಗಳನ್ನು ವೆಚ್ಚ ಮಾಡಲಾಗಿದ್ದು, ಈ ವೆಚ್ಚದಲ್ಲಿ 212 ಕಿ.ಮೀ ಉದ್ದದ ರಾಜಕಾಲುವೆಗಳನ್ನು ನಿರ್ಮಿಸಲಾಗಿರುತ್ತದೆ. 2019-20 ಮತ್ತು 2020-21ನೇ ಸಾಲಿನಲ್ಲಿ ರೂ.953.00 ಕೋಟಿಗಳನ್ನು ಸರ್ಕಾರವು ಬಿಡುಗಡೆ ಮಾಡಿದ್ದು, ಈ ಮೊತ್ತದಲ್ಲಿ ಇದುವರೆವಿಗೂ ರೂ.129.00 ಕೋಟಿಗಳನ್ನು ವೆಚ್ಚ ಮಾಡಲಾಗಿರುತ್ತದೆ.<br>ರಾಜಕಾಲುವೆಗಳ ನಿರ್ವಹಣೆಗೆ 2018-19ರಲ್ಲಿ ರೂ.38.00 ಕೋಟಿಗಳನ್ನು, 2019-20ರಲ್ಲಿ ರೂ.36.00 ಕೋಟಿಗಳನ್ನು ಮತ್ತು 2020-21ನೇ ಸಾಲಿನಲ್ಲಿ ಇದುವರೆವಿಗೂ ರೂ.10.00 ಕೋಟಿಗಳನ್ನು ವೆಚ್ಚ ಮಾಡಲಾಗಿರುತ್ತದೆ. |
| ಇ | ರಾಜಕಾಲುವೆ ಹಾಗೂ ಅವುಗಳ ಮೀಸಲು ಪ್ರದೇಶದ ಒತ್ತುವರಿಗಳನ್ನು ತೆರವುಗೊಳಿಸುವ ಕ್ರಮಗಳ ಕುರಿತಾದ ವಿವರಗಳೇನು; ಒತ್ತುವರಿ ಪ್ರಕರಣಗಳು ಎಷ್ಟು; ತೆರವುಗೊಳಿಸಿರುವ | ಜನವರಿ-2021ಕ್ಕೆ ಅನ್ವಯಿಸುವಂತೆ ರಾಜಕಾಲುವೆಗಳ ಒತ್ತುವರಿ ತೆರವುಗೊಳಿಸಿದ ವಿವರ ಕೆಳಕಂಡಂತಿದೆ:<br>Encroachments identified : 2626<br>Encroachment removed/resolved : 1947<br>Encroachments to be removed : 679 |

48



| | | |
|---|---|---|
| | ಪ್ರಕರಣಗಳೆಷ್ಟು; ಪರಿಪೂರ್ಣ ಒತ್ತುವರಿ ತೆರವು ಕ್ರಮಗಳನ್ನು ನಿಗದಿತ ಕಾಲಾವಧಿಯಲ್ಲಿ ಕೈಗೊಳ್ಳಲು ಸರ್ಕಾರದ ಕ್ರಮಗಳೇನು; | ಸದರಿ ರಾಜಕಾಲುವೆಗಳ ಮೇಲೆ ಇರುವ ಒತ್ತುವರಿಗಳನ್ನು ತೆರವುಗೊಳಿಸಲು ಕರ್ನಾಟಕ ಸರ್ಕಾರದ ಭೂ-ದಾಖಲೆಗಳ ಜಂಟಿ ನಿರ್ದೇಶಕರು, ಭೂ ಮಾಪನ ಇಲಾಖೆ ರವರೊಂದಿಗೆ ಸಮನ್ವಯ ಸಾಧಿಸಲಾಗಿದ್ದು, ಕಂದಾಯ ಇಲಾಖೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಜಂಟಿಯಾಗಿ ಕಾರ್ಯಚರಣೆ ನಡೆಸಲಾಗುತ್ತಿದೆ.<br><br>ರಾಜಕಾಲುವೆಗಳ ಒತ್ತುವರಿ ತೆರವು ಮಾಡುವ ಬಗ್ಗೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾದ ರಿಟ್ ಅರ್ಜಿ ಸಂಖ್ಯೆ: 38401/2014 ಮತ್ತು ಇತರೆ ಪ್ರಕರಣ ಗಳನ್ನು ಮಾನ್ಯ ಉಚ್ಚ ನ್ಯಾಯಾಲಯವು ಕಾಲಕಾಲಕ್ಕೆ ಪರಿಶೀಲಿಸುತ್ತಿದ್ದು ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಸಮನ್ವಯ ಸಮಿತಿ ಸಭೆಯಲ್ಲಿಯೂ ಕೂಡ ಈ ಬಗ್ಗೆ ಚರ್ಚಿಸಿ ಅದರಂತೆ ಕ್ರಮ ವಹಿಸಲಾಗುತ್ತಿದೆ.<br><br>ಸದರಿ ಒತ್ತುವರಿಗಳನ್ನು ನ್ಯಾಯಾಲಯದ ಆದೇಶ, ತಡೆಯಾಜ್ಞೆಗಳು ತಕರಾರು ಅರ್ಜಿಗಳ ಇತ್ಯರ್ಥಕ್ಕೆ ಅನುಗುಣವಾಗಿ ಒತ್ತುವರಿ ತೆರವುಗೊಳಿಸಲಾಗಿದ್ದು, ತಿಂಗಳಿಗೆ ಕನಿಷ್ಠ 50 ಒತ್ತುವರಿಗಳನ್ನು ತೆರವುಗೊಳಿಸುವ ಗುರಿ ಹಾಕಿಕೊಂಡು ಕ್ರಮ ವಹಿಸಲಾಗುತ್ತಿದೆ. |
| ಈ | ರಾಜಕಾಲುವೆಗಳಲ್ಲಿನ ಹೂಳೆತ್ತುವ ಕೆಲಸ-ಕಾರ್ಯಗಳಿಗೆ ಕಳೆದ ಮೂರು ವರ್ಷಗಳಲ್ಲಿ ಸಂದಾಯ ಮಾಡಿದ ಮೊತ್ತ ಎಷ್ಟು; ವೈಜ್ಞಾನಿಕ ರೀತ್ಯಾ ಹೂಳೆತ್ತುವ ಮತ್ತು ರಾಜಕಾಲುವೆಗಳನ್ನು ಸುವ್ಯವಸ್ಥಿತವಾಗಿರಿಸುವ ಕುರಿತು ಸರ್ಕಾರದ ನಿರ್ಣಾಯಕ ಕ್ರಮಗಳೇನು? | ರಾಜಕಾಲುವೆಗಳ ನಿರ್ವಹಣೆಗೆ 2018-19ರಲ್ಲಿ ರೂ.38.00 ಕೋಟಿಗಳನ್ನು 2019-20ರಲ್ಲಿ ರೂ.36.00ಕೋಟಿಗಳನ್ನು ಮತ್ತು 2020-21ನೇ ಸಾಲಿನಲ್ಲಿ ಈವರೆವಿಗೂ ರೂ.10.00 ಕೋಟಿಗಳನ್ನು ವೆಚ್ಚ ಮಾಡಲಾಗಿರುತ್ತದೆ.<br><br>ಪ್ರಸ್ತುತ ಸದರಿ ರಾಜಕಾಲುವೆಗಳಲ್ಲಿ ಶೇಖರಣೆಗೊಳ್ಳುವ ಹೂಳನ್ನು ವೈಜ್ಞಾನಿಕ ರೀತಿಯಲ್ಲಿ ತೆಗೆಯಲು "ರಾಜಕಾಲುವೆಗಳ ವಾರ್ಷಿಕ ನಿರ್ವಹಣಾ ಯೋಜನೆ" ಅಡಿಯಲ್ಲಿ ಮೆ॥ ಯೋಗ & ಕಂ., ಎಂಬ ಸಂಸ್ಥೆಗೆ ಗುತ್ತಿಗೆ ನೀಡಿದ್ದು, ಸದರಿ ಸಂಸ್ಥೆಗೆ ವೈಜ್ಞಾನಿಕವಾಗಿ ಹೂಳೆತ್ತಲು "Robotic Excavators" ಗಳನ್ನು ಬಳಸುವ ಷರತ್ತನ್ನು ವಿಧಿಸಲಾಗಿದ್ದು, ಪ್ರಸ್ತುತ 04 "Robotic Excavators" ಗಳಿಂದ ಬೆಂಗಳೂರು ನಗರದ ರಾಜಕಾಲುವೆಗಳ ಹೂಳನ್ನು ತೆಗೆದು ವ್ಯವಸ್ಥಿತವಾಗಿ ನಿರ್ವಹಣೆ ಮಾಡಲಾಗುತ್ತಿದೆ. |

**ಸಂಖ್ಯೆ: ನಅಇ 11 ಎಂಎನ್‌ವೈ 2021 (ಇ)**

(ಬಿ.ಎಸ್. ಯಡಿಯೂರಪ್ಪ.)
ಮುಖ್ಯಮಂತ್ರಿ

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 444 |
| ಸದಸ್ಯರ ಹೆಸರು | : | ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಗೆ ಹಾಗೂ ಇದರಡಿಯಲ್ಲಿ ಬರುವ ನಿಗಮಗಳಿಗೆ 2020-21 ನೇ ಸಾಲಿನಲ್ಲಿ ನಿಗದಿಪಡಿಸಿರುವ ಅನುದಾನ ಎಷ್ಟು; (ನಿಗಮವಾರು ಲೆಕ್ಕ ಶೀರ್ಷಿಕೆವಾರು ವಿವರ ನೀಡುವುದು) | 2020-21 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಜಲ ಸಂಪನ್ಮೂಲ ಇಲಾಖೆಯ (ಭಾರಿ ಮತ್ತು ಮಧ್ಯಮ ನೀರಾವರಿ) ವ್ಯಾಪ್ತಿಯಲ್ಲಿನ ನಿಗಮಗಳಿಗೆ ಲೆಕ್ಕ ಶೀರ್ಷಿಕೆವಾರು ಹಂಚಿಕೆಯಾದ ಹಾಗೂ ಜನವರಿ-2021 ರ ಅಂತ್ಯಕ್ಕೆ ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ. |
| ಆ. | ಈ ಅನುದಾನದಲ್ಲಿ ಯಾವ ಯಾವ ಮತಕ್ಷೇತ್ರಕ್ಕೆ ಯಾವ ಯಾವ ಲೆಕ್ಕ ಶೀರ್ಷಿಕೆವಾರು ಎಷ್ಟೆಷ್ಟು ಅನುದಾನ ನೀಡಲಾಗಿದೆ; (ಮತಕ್ಷೇತ್ರವಾರು ವಿವರ ನೀಡುವುದು) | ಆಯವ್ಯಯದಲ್ಲಿ ಇಲಾಖೆಗೆ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ನಿಗಮವಾರು ಹಂಚಿಕೆಯಾದ ಅನುದಾನವನ್ನು ನಿಗಮಗಳಲ್ಲಿ ವಲಯವಾರು/ಯೋಜನಾವಾರು ಹಂಚಿಕೆ ಮಾಡಲಾಗುತ್ತದೆ. |
| ಇ. | ಪಿರಿಯಾಪಟ್ಟಣ ಮತಕ್ಷೇತ್ರಕ್ಕೆ 2020-21ನೇ ಸಾಲಿನಲ್ಲಿ ಯಾವ ಲೆಕ್ಕ ಶೀರ್ಷಿಕೆವಾರು ಅನುದಾನ ನೀಡಲಾಗಿದೆ (ವಿವರ ನೀಡುವುದು) | ಕಾವೇರಿ ನೀರಾವರಿ ನಿಗಮ ನಿಯಮಿತ ವ್ಯಾಪ್ತಿಯಲ್ಲಿ ಪಿರಿಯಾಪಟ್ಟಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ 2020-21 ನೇ ಸಾಲಿನಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳಿಗೆ ವಿವಿಧ ಲೆಕ್ಕ ಶೀರ್ಷಿಕೆವಾರು ಮಂಜೂರಾದ ಅನುದಾನದ ವಿವರಗಳು ಕೆಳಕಂಡಂತಿವೆ. |
| ಈ. | ಸದರಿ ಮತಕ್ಷೇತ್ರಕ್ಕೆ ಅನುದಾನ ನೀಡಲು ಸರ್ಕಾರಕ್ಕಿರುವ ತೊಂದರೆಯೇನು? | (ರೂ. ಕೋಟಿಗಳಲ್ಲಿ) (see table below) |

(ರೂ. ಕೋಟಿಗಳಲ್ಲಿ)

| ಲೆಕ್ಕ ಶೀರ್ಷಿಕೆ | 2020-21 ನೇ ಸಾಲಿನಲ್ಲಿ ಹಂಚಿಕೆಯಾಗಿರುವ ಅನುದಾನ |
|---|---|
| 4701 | 15.13 |
| 2701 | 8.62 |
| ಎಸ್.ಸಿ.ಪಿ | 1.19 |
| ಟಿ.ಎಸ್.ಪಿ | 1.91 |

ಜಸಂಇ 05 ಎಂಎಲ್ಎ 2021

(ರಮೇಶ್ ಲ.ಜಾರಕಿಹೊಳಿ),
ಜಲಸಂಪನ್ಮೂಲ ಸಚಿವರು

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.444 ಕ್ಕೆ

ಅನುಬಂಧ

**2020-21 ನೇ ಸಾಲಿನಲ್ಲಿ ಜಲ ಸಂಪನ್ಮೂಲ ಇಲಾಖೆಯ ಪರಿಷ್ಕೃತ ಆಯವ್ಯಯದಲ್ಲಿ ನಿಗಮಗಳಿಗೆ ಲೆಕ್ಕ ಶೀರ್ಷಿಕೆವಾರು ಹಂಚಿಕೆಯಾದ ಹಾಗೂ ಜನವರಿ-2021 ರ ಅಂತ್ಯಕ್ಕೆ ಬಿಡುಗಡೆಯಾದ ಅನುದಾನದ ವಿವರಗಳು**

(ರೂ. ಲಕ್ಷಗಳಲ್ಲಿ)

| ವಿವರಗಳು | | ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ | | ಕಾವೇರಿ ನೀರಾವರಿ ನಿಗಮ ನಿಯಮಿತ | | ಕರ್ನಾಟಕ ನೀರಾವರಿ ನಿಗಮ ನಿಯಮಿತ | | ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ | |
|---|---|---|---|---|---|---|---|---|---|
| | | 2020-21 ನೇ ಸಾಲಿನ ಪರಿಷ್ಕೃತ ಆಯವ್ಯಯ ಅನುದಾನ | ಜನವರಿ-2021 ರ ಅಂತ್ಯಕ್ಕೆ ಬಿಡುಗಡೆಯಾದ ಅನುದಾನ | 2020-21 ನೇ ಸಾಲಿನ ಪರಿಷ್ಕೃತ ಆಯವ್ಯಯ ಅನುದಾನ | ಜನವರಿ-2021 ರ ಅಂತ್ಯಕ್ಕೆ ಬಿಡುಗಡೆಯಾದ ಅನುದಾನ | 2020-21 ನೇ ಸಾಲಿನ ಪರಿಷ್ಕೃತ ಆಯವ್ಯಯ ಅನುದಾನ | ಜನವರಿ-2021 ರ ಅಂತ್ಯಕ್ಕೆ ಬಿಡುಗಡೆಯಾದ ಅನುದಾನ | 2020-21 ನೇ ಸಾಲಿನ ಪರಿಷ್ಕೃತ ಆಯವ್ಯಯ ಅನುದಾನ | ಜನವರಿ-2021 ರ ಅಂತ್ಯಕ್ಕೆ ಬಿಡುಗಡೆಯಾದ ಅನುದಾನ |
| **AIBP** | | 18028.70 | 18028.70 | 0.00 | - | 6000.00 | 2000.00 | - | - |
| **CAPITAL EXPENSES** | | 77672.70 | 57072.72 | 123449.20 | 77155.75 | 169488.90 | 150139.28 | 102419.80 | 92144.04 |
| **KBJNL-Land Acquisition Charges & R&R** | | 73514.00 | 24504.68 | - | - | - | - | - | - |
| **SDP** | | 17117.80 | 11411.86 | 10117.10 | 6323.18 | 42963.90 | 28642.60 | 9178.40 | 4589.20 |
| **SCP** | **AIBP** | 2100.00 | 1575.00 | - | - | 1750.00 | 1312.50 | - | - |
| | **Capital** | 17500.00 | 13125.00 | 24500.00 | 12250.00 | 31330.60 | 10443.00 | 21420.00 | 7140.00 |
| | **LAQ** | 28774.90 | 21581.18 | - | - | - | - | - | - |
| | **Unspent** | - | - | - | - | 1941.00 | 970.50 | - | - |
| **TSP** | **AIBP** | 1400.00 | 1050.00 | - | - | 1050.00 | 787.50 | - | - |
| | **Capital** | 12356.40 | 9267.30 | 17150.00 | 8575.00 | 18980.50 | 6326.00 | 12460.00 | 4153.00 |
| | **LAQ** | 9711.10 | 7283.33 | - | - | - | - | - | - |
| | **Unspent** | - | - | - | - | 1164.00 | 582.00 | - | - |
| **NABARD** | | 135.80 | 0.00 | 70.00 | - | 34108.00 | 34108.00 | 205.80 | - |
| **DRIP** | | 240.00 | 0.00 | 2749.60 | 62.00 | 280.00 | 0.00 | - | - |
| **KISWRMIP & EAP** | | - | - | - | - | 12600.00 | 6300.00 | - | - |
| **Maintenance** | | 5368.00 | 4025.99 | 5351.00 | 3344.37 | 11667.00 | 7777.50 | 146.00 | - |
| **DEBT SERVICE** | | 75880.00 | 52635.40 | 24777.00 | 18614.00 | 31959.00 | 20407.64 | 18959.00 | 15781.14 |
| **DEBT SERVICE** | | 129754.00 | 111086.50 | 15000.00 | 10000.00 | 65915.00 | 47670.00 | 35857.00 | 15750.00 |
| **Guarantee Commission** | | 8118.00 | 0.00 | 2750.00 | 0.00 | 3722.00 | 0.00 | 2106.00 | 0.00 |
| **IEBR** | | 50000.00 | 50000.00 | 25000.00 | 25000.00 | 65000.00 | 65000.00 | 25000.00 | 25000.00 |
| **TOTAL** | | **527671.40** | **382647.66** | **250913.90** | **161324.30** | **499919.90** | **382466.52** | **227752.00** | **164557.38** |

# ಕರ್ನಾಟಕ ವಿಧಾನ ಸಭೆ

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 455 |
| 2 | ಸದಸ್ಯರ ಹೆಸರು | : | ಶ್ರೀ ಹೆಚ್.ಪಿ. ಮಂಜುನಾಥ್ |
| 3 | ಉತ್ತರಿಸಬೇಕಾದ ದಿನಾಂಕ | : | 02.02.2021 |
| 4 | ಉತ್ತರಿಸುವವರು | : | ಸಣ್ಣ ನೀರಾವರಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಹುಣಸೂರು ವಿಧಾನಸಭಾ ಕ್ಷೇತ್ರಗಳಲ್ಲಿರುವ ಒಟ್ಟು ಕೆರೆಗಳು ಎಷ್ಟು; ಈ ಕೆರೆಗಳ ಅಕ್ಕಪಕ್ಕದಲ್ಲಿರುವ ರಸ್ತೆಗಳು ಸಂಚಾರಕ್ಕೆ ಸೂಕ್ತವಾಗಿಲ್ಲದೆ ಗುಂಡಿಗಳಿಂದ ಕೂಡಿದ್ದಲ್ಲಿ ಅಪಘಾತಗಳು ಹೆಚ್ಚಾಗಿ ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; (ವಿವರ ನೀಡುವುದು) | ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನಲ್ಲಿ ಈ ವ್ಯಾಪ್ತಿಗೆ ಏಳು ಕೆರೆಗಳು ಬರುತ್ತವೆ. ಮೂರು ಕೆರೆಗಳ ಅಕ್ಕಪಕ್ಕದಲ್ಲಿರುವ ರಸ್ತೆಗಳಲ್ಲಿ ಕಳೆದ ಸಾಲಿನ ಮಳೆಯಿಂದ ಅಲ್ಪ ಪ್ರಮಾಣದ ಗುಂಡಿಗಳಾಗಿದ್ದು, ಯಾವುದೇ ಅಪಘಾತಗಳು ಸಂಭವಿಸಿರುವುದಿಲ್ಲ. ಮುಂದಿನ ಸಾಲಿನಲ್ಲಿ ಒದಗಿಸುವ ಅನುದಾನದಲ್ಲಿ ಸದರಿ ರಸ್ತೆಗಳನ್ನು ಅಭಿವೃದ್ದಿಪಡಿಸಲಾಗುವುದು. |
| ಆ | ಸದರಿ ಕ್ಷೇತ್ರದ ಕೆರೆಗಳಲ್ಲಿ ಎಷ್ಟು ಕೆರೆಗಳಿಗೆ ತಡೆಗೋಡೆ ನಿರ್ಮಾಣ ಕಂಬಿಗಳ ನಿರ್ಮಾಣ ಮಾಡಲಾಗಿದೆ (ವಿವರ ನೀಡುವುದು) | ಯಾವುದು ಇರುವುದಿಲ್ಲ. |
| ಇ | ಹುಣಸೂರು ವಿಧಾನಸಭಾ ವ್ಯಾಪ್ತಿಯಲ್ಲಿ ಕೆರೆಗಳ ಒತ್ತವರಿಯಾಗಿರುವುದು ನಿಜವೇ; ಹಾಗಿದ್ದಲ್ಲಿ ಇದುವರೆವಿಗೆ ಎಷ್ಟು ಕೆರೆಗಳನ್ನು ಒತ್ತವರಿಯಿಂದ ತೆರವುಗೊಳಿಸಲಾಗಿದೆ; (ವಿವರ ನೀಡುವುದು) | ಹುಣಸೂರು ವಿಧಾನಸಭಾ ವ್ಯಾಪ್ತಿಯಲ್ಲಿ ವ್ಯಾಪ್ತಿಯಲ್ಲಿ ಒಟ್ಟು ಏಳು ಕೆರೆಗಳು ಬರುತ್ತವೆ. ಅದರಲ್ಲಿ ನಾಲ್ಕು ಒತ್ತುವರಿಯಾಗಿದ್ದು, ನಾಲ್ಕು ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ. |
| ಈ | ಒತ್ತುವರಿ ಮಾಡಿರುವವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು; ಎಷ್ಟು ಜನರ ವಿರುದ್ಧ ಪ್ರಕರಣಗಲು ದಾಖಲಾಗಿವೆ (ಗ್ರಾಮಗಳವಾರು ವಿವರ ನೀಡುವುದು) | ಒತ್ತವರಿಯನ್ನು ತೆರವುಗೊಳಿಸಲಾಗಿದೆ. ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ. |

**ಕಡತ ಸಂಖ್ಯೆ: MID 46 LAQ 2021**

(ಜೆ.ಸಿ.ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು.

ವಿಧಾನಸಭಾ ಸದಸ್ಯರಾದ ಮಾನ್ಯ ಶ್ರೀ ಹೆಚ್.ಪಿ. ಮಂಜುನಾಥ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 455ಕ್ಕೆ ಅನುಬಂಧ

ಮೈಸೂರು ಜಿಲ್ಲಾ ವ್ಯಾಪ್ತಿಯ ಸಣ್ಣ ನೀರಾವರಿ ಇಲಾಖಾ ಹುಣಸೂರು ವ್ಯಾಪ್ತಿಯ ಕೆರೆಗಳ ಒತ್ತುವರಿ ಗುರುತಿಸಿ ಒತ್ತುವರಿ ತೆರವುಗೊಳಿಸಿರುವ ವಿವರ

| ಕ್ರ.ಸಂ. | ತಾಲ್ಲೂಕು | ಕೆರೆಯ ಹೆಸರು | ಕೆರೆಯ ಸ.ನಂ. | ಕೆರೆಯ ವಿಸ್ತೀರ್ಣ | | ಸುಪರ್ದಿಯಲ್ಲಿರುವ ಕೆರೆ | ಸರ್ವೆಯಾಗಿದೆಯೇ ಅಥವಾ ಇಲ್ಲವೇ | ಒತ್ತುವರಿ ಗುರುತಿಸಿರುವುದು | | ಒತ್ತುವರಿ ತೆರವುಮಾಡಿರುವುದು | | ಷರಾ |
|---|---|---|---|---|---|---|---|---|---|---|---|---|
| | | | Sy.No. | ಎಕರೆ | ಗುಂಟೆ | | | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 1 | ಹುಣಸೂರು | ಕಡೆಮನುಗನಹಳ್ಳಿ ಕೆರೆ | 33,34, | 55.00 | 36.00 | ಸ.ನೀ | ಹೌದು | – | – | – | – | |
| 2 | ಹುಣಸೂರು | ಮುದಗನೂರು ಕೆರೆ | 49 | 65.00 | 17.00 | ಸ.ನೀ | ಹೌದು | – | ಅರಣ್ಯ ಇಲಾಖೆ | – | ಅರಣ್ಯ ಇಲಾಖೆ | |
| 3 | ಹುಣಸೂರು | ಕಚುವಿನಹಳ್ಳಿ ಕೆರೆ | 22, 19, 12 | 129.00 | 14.00 | ಸ.ನೀ | ಹೌದು | – | 3.07 | – | 3.07 | |
| 4 | ಹುಣಸೂರು | ಬಿಳಿಕೆರೆ ಕೆರೆ | 90, 1 | 92.00 | 10.00 | ಸ.ನೀ | ಹೌದು | – | 42.11 | – | 42.11 | |
| 5 | ಹುಣಸೂರು | ಹಳೇಬೀಡು ಕೆರೆ | 140, 52 | 74.00 | 10.00 | ಸ.ನೀ | ಹೌದು | – | 6.00 | – | 6.00 | |
| 6 | ಹುಣಸೂರು | ಬಿಲ್ಲೇನಹೊಸಹಳ್ಳಿ ಕೆರೆ | 25 | 25.00 | 30.00 | ಸ.ನೀ | ಹೌದು | – | ಅರಣ್ಯ ಇಲಾಖೆ | – | ಅರಣ್ಯ ಇಲಾಖೆ | |
| 7 | ಹುಣಸೂರು | ಹೆಮ್ಮಿಗೆ ಕೆರೆ | 116 | 20.00 | 36.00 | ಸ.ನೀ | ಹೌದು | – | 37.00 | – | 37.00 | |

# ಕರ್ನಾಟಕ ವಿಧಾನಸಭೆ

| | | | |
|---|---|---|---|
| 1] | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 458 |
| 2] | ಮಾನ್ಯ ಸದಸ್ಯರ ಹೆಸರು | : | ಶ್ರೀ ಖಾದರ್ ಯು.ಟಿ. (ಮಂಗಳೂರು) |
| 3] | ಉತ್ತರಿಸುವ ದಿನಾಂಕ | : | 02.02.2021 |
| 4] | ಉತ್ತರಿಸುವ ಸಚಿವರು | : | ಗೃಹ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿನ ಪೊಲೀಸ್‌ರ ಕಲ್ಯಾಣಕ್ಕಾಗಿ ಸರ್ಕಾರ ಹಮ್ಮಿಕೊಂಡಿರುವ ಕಲ್ಯಾಣ ಕಾರ್ಯಕ್ರಮಗಳೇನು; (ವಿವರಗಳನ್ನು ಒದಗಿಸುವುದು) | ಪೊಲೀಸ್ ಇಲಾಖೆಯ ಸಿಬ್ಬಂದಿಗಳಿಗೆ ಹಮ್ಮಿಕೊಂಡಿರುವ ಕಲ್ಯಾಣ ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ:<br><br>**ಆರೋಗ್ಯ ಭಾಗ್ಯ ಯೋಜನೆ:** ಆರೋಗ್ಯ ಭಾಗ್ಯ ಯೋಜನೆಯಡಿ ಕರ್ನಾಟಕ ಸರ್ಕಾರಿ (ಹಾಜರಾತಿ ನಿಯಮ) 1963 ನಿಯಮ ಪ್ರಕಾರ ಮಾನ್ಯತೆ ಹೊಂದಿರುವ ಆಸ್ಪತ್ರೆಗಳನ್ನು ಆರೋಗ್ಯ ಭಾಗ್ಯ ಯೋಜನೆಗೆ ಸೇರಿಸಿ ಈ ಯೋಜನೆಯಡಿ ಪೊಲೀಸ್ ಅಧಿಕಾರಿ/ಸಿಬ್ಬಂದಿ ಹಾಗೂ ಪತಿ/ಪತ್ನಿ, ಮಕ್ಕಳು ಹಾಗೂ ಅವರ ಅವಲಂಬಿತ ತಂದೆ ತಾಯಿಯವರಿಗೆ ಚಿಕಿತ್ಸೆ ಸೌಲಭ್ಯ ನೀಡಲಾಗುತ್ತಿದೆ.<br><br>**ಕೇಂದ್ರ ಪೊಲೀಸ್ ಕಲ್ಯಾಣ ನಿಧಿ:** ಪೊಲೀಸ್ ಇಲಾಖೆಯಲ್ಲಿನ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳ ಹಾಗೂ ಅವರ ಕುಟುಂಬದವರ ಕಲ್ಯಾಣಕ್ಕಾಗಿ ಪ್ರತಿ ವರ್ಷ ಅನುದಾನ ಬಿಡುಗಡೆ ಮಾಡುತ್ತಿದ್ದು, ಈ ಅನುದಾನದಲ್ಲಿ ಪೊಲೀಸ್ ಸಿಬ್ಬಂದಿ/ಕುಟುಂಬದವರಿಗೆ ಅನುಕೂಲವಾಗುವ ರೀತಿಯಲ್ಲಿ ಪ್ರತಿ ಘಟಕದಲ್ಲಿಯೂ ಪೊಲೀಸ್ ಸಮುದಾಯ ಭವನ ನಿರ್ಮಾಣ, ಪೊಲೀಸ್ ಕ್ಯಾಂಟೀನ್ ಪ್ರಾರಂಭಿಸಲು ಅನುದಾನ, ಪೊಲೀಸ್ ಪಬ್ಲಿಕ್ ಸ್ಕೂಲ್/ವಸತಿ ಶಾಲೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಧನ ಹೀಗೆ ಮತ್ತಿತರ ಕಲ್ಯಾಣ ಕಾರ್ಯಕ್ರಮಗಳಿಗೆ ಸದರಿ ಅನುದಾನವನ್ನು ಬಳಸಿಕೊಳ್ಳಲಾಗುತ್ತಿದೆ.<br><br>**ಉಚಿತ ಪಡಿತರ:** ಪೊಲೀಸ್ ಸಿಬ್ಬಂದಿಗಳಿಗಾಗಿ ಉಚಿತ ಪಡಿತರ ಬದಲಾಗಿ ಪಿಎಸ್‌ಐ ಮತ್ತು ಕೆಳಹಂತದ ಸಿಬ್ಬಂದಿಗಳಿಗೆ ಪ್ರತಿ ತಿಂಗಳು ಮಾಸಿಕ ಭತ್ಯೆ ರೂ.400/- ಗಳನ್ನು ನೀಡಲಾಗುತ್ತಿದೆ.<br><br>**ಸಮಾಲೋಚಕರು: (Well Being Officecers);** ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಮಾನಸಿಕ ಆಘಾತಕಾರಿ ಘಟನೆಗಳಿಗೆ ಮತ್ತು |

<table>
<tr><td></td><td></td><td>ದೈನಂದಿನ ಒತ್ತಡಗಳಿಗೆ ಗುರಿಯಾಗುವುದರಿಂದ ಅವರು ಒಮ್ಮೊಮ್ಮೆ ಆತ್ಮಹತ್ಯೆಯಂತಹ ಯೋಚನೆಗೆ ಒಳಗಾಗದೇ ಇರಲು ಮತ್ತು ಅವರ ಆತ್ಮಸ್ಥೈರ್ಯ ಹೆಚ್ಚಿಸುವ ನಿಟ್ಟಿನಲ್ಲಿ ಮನೋವೈಜ್ಞಾನಿಕ ಸಲಹೆ ನೀಡಲು ಇಲಾಖೆಯಲ್ಲಿ 50 ಜನ ಸಮಾಲೋಚಕರನ್ನು ನೇಮಿಸಿಕೊಂಡಿದ್ದು, ಪ್ರಸ್ತುತ 44 ಜನ ಸಮಾಲೋಚಕರು ಜಿಲ್ಲೆ, ನಗರ ಮತ್ತು ಕೆಎಸ್‌ಆರ್‌ಪಿ ಪಡೆಗಳಲ್ಲಿ ಕರ್ತವ್ಯದಲ್ಲಿರುತ್ತಾರೆ.<br><br>ಪೊಲೀಸ್ ಸಿಬ್ಬಂದಿಗಳ ವಾರ್ಷಿಕ ಆರೋಗ್ಯ ತಪಾಸಣೆ: ಪ್ರತಿಯೊಬ್ಬ ಪೊಲೀಸ್ ಸಿಬ್ಬಂದಿಗೂ ವಾರ್ಷಿಕ ವೈದ್ಯಕೀಯ ತಪಾಸಣೆಗೆ ರೂ.1,000/- ಗಳನ್ನು ನೀಡಲಾಗುತ್ತಿದೆ.</td></tr>
<tr><td>ಆ)</td><td>ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್‌ರ ಸಂಖ್ಯೆ ಎಷ್ಟು; ಈ ಪೈಕಿ ಪುರುಷ ಮತ್ತು ಮಹಿಳಾ ಸಿಬ್ಬಂದಿಗಳೆಷ್ಟು;</td><td>ದಿನಾಂಕ 31.12.2020ರ ಅಂತ್ಯಕ್ಕೆ ರಾಜ್ಯದ ಪೊಲೀಸ್ ಇಲಾಖೆಯ ವಿವಿಧ ವೃಂದದಲ್ಲಿ ಒಟ್ಟು 88,369 ಅಧಿಕಾರಿ/ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>ಕರ್ತವ್ಯ ನಿರ್ವಹಿಸುತ್ತಿರುವ ಪುರುಷ ಮತ್ತು ಮಹಿಳಾ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ವಿವರ ಕೆಳಕಂಡಂತಿದೆ.<br><br>
<table>
<tr><th rowspan="2">ವೃಂದ</th><th colspan="2">ಹಾಲಿ ಬಲ</th></tr>
<tr><th>ಪುರುಷ</th><th>ಮಹಿಳೆ</th></tr>
<tr><td>ಅಧಿಕಾರಿ ಮತ್ತು ಸಿಬ್ಬಂದಿ</td><td>80409</td><td>7960</td></tr>
</table>
</td></tr>
<tr><td>ಇ)</td><td>ಮಂಗಳೂರಿನ ಉಳ್ಳಾಲದಲ್ಲಿ ನೂತನವಾಗಿ ಪೊಲೀಸ್ ಠಾಣೆ ನಿರ್ಮಾಣ ಮಾಡಲಾಗುವುದೇ? (ವಿವರ ಒದಗಿಸುವುದು)</td><td>ಯಾವುದೇ ಪ್ರಸ್ತಾವನೆ ಇರುವುದಿಲ್ಲ.</td></tr>
</table>

**ಹೆಚ್‌ಡಿ 14 ಇಎಫ್‌ಎಸ್ 2021**

[ಬಸವರಾಜ ಬೊಮ್ಮಾಯಿ]
ಗೃಹ, ಕಾನೂನು ಮತ್ತು ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು

## ಕರ್ನಾಟಕ ವಿಧಾನ ಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 487 |
| ಸದಸ್ಯರ ಹೆಸರು | : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ) |
| ಉತ್ತರಿಸುವ ದಿನಾಂಕ | : 02.02.2021 |
| ಉತ್ತರಿಸುವ ಸಚಿವರು | : ಜಲಸಂಪನ್ಮೂಲ ಸಚಿವರು |

<table>
<tr><th>ಕ್ರ ಸಂ:</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೈಲಹೊಂಗಲ ಮತಕ್ಷೇತ್ರಕ್ಕೆ 2018-19ನೇ ಸಾಲಿನ ಆಯವ್ಯಯದಲ್ಲಿ ಜಲಸಂಪನ್ಮೂಲ ಇಲಾಖೆಗೆ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ;</td><td>ಕರ್ನಾಟಕ ನೀರಾವರಿ ನಿಗಮದಿಂದ ಬೈಲಹೊಂಗಲ ಮತಕ್ಷೇತ್ರಕ್ಕೆ 2018-19ನೇ ಸಾಲಿಗೆ ಮಂಜೂರು ಮಾಡಲಾದ ಅನುದಾನದ ವಿವರ ಕೆಳಗಿನಂತಿದೆ.<br>(ರೂ.ಲಕ್ಷಗಳಲ್ಲಿ)<table><tr><td>4701 ಎಂ &ಎಂಐ</td><td>100.60</td></tr><tr><td>ಎಸ್.ಸಿ.ಪಿ</td><td>245.00</td></tr><tr><td>ಟಿ.ಎಸ್.ಪಿ</td><td>165.00</td></tr><tr><td>2701</td><td>140.00</td></tr><tr><td>ನಬಾರ್ಡ</td><td>73.00</td></tr><tr><td>ಒಟ್ಟು</td><td>618.60</td></tr></table></td></tr>
<tr><td>ಆ)</td><td>ಮಲಪ್ರಭಾ ಯೋಜನೆಯಲ್ಲಿ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನ ಕೆಲ ಹಳ್ಳಿಗಳು ಸಂಪೂರ್ಣವಾಗಿ ಮುಳುಗಡೆಯಾಗಿದ್ದು ನಿಜವಲ್ಲವೇ;</td><td rowspan="2">ಹೌದು<br><br>ಈ ಯೋಜನೆಯಲ್ಲಿ ಅಲ್ಲಿನ ರೈತರು ತಮ್ಮ ಜಮೀನು ಕಳೆದುಕೊಂಡಿರುವುದರಿಂದ ಆ ಭಾಗದ ರೈತರ ಅನುಕೂಲತೆಗಾಗಿ (1) ಏಣಗಿ-ಹಿಟ್ಟಣಗಿ, (2) ಬೂದಿಹಾಳ, (3) ಕೆಂಗಾನೂರ, (4) ಜಾಲಿಕೊಪ್ಪ, (5) ದೇವಾಲಪೂರ, (6) ಹೊಸೂರ-ವಕ್ಕುಂದ, (7) ಮಲ್ಲೂರ-ಮಾಟೋಳ್ಳಿ ಮತ್ತು (8) ಬಡ್ಲಿ-ಕತ್ರಾಳ ಏತ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ.</td></tr>
<tr><td>ಇ)</td><td>ಮಲಪ್ರಭಾ ಯೋಜನೆಯಲ್ಲಿ ಇಲ್ಲಿನ ರೈತರು ತಮ್ಮ ಜಮೀನು ಕಳೆದುಕೊಂಡಿರುವುದರಿಂದ ಈ ಭಾಗದ ರೈತರ ಅನುಕೂಲತೆಗಾಗಿ ಏತ ನೀರಾವರಿ ಯೋಜನೆ ಪ್ರಾರಂಭಿಸಿದ್ದು ನಿಜವಲ್ಲವೇ;</td></tr>
<tr><td>ಈ)</td><td>ಸದರಿ ನೀರಾವರಿ ಯೋಜನೆಯ ಪಂಪಿಂಗ್ ಮಶೀನರಿ ಹಾಗೂ ಜಾಕ್‌ವೆಲ್‌ಗಳು ಕಾರ್ಯ ಕ್ಷಮತೆಯನ್ನು ಕಳೆದುಕೊಂಡು ಕೆಟ್ಟು ಹೋಗಿದ್ದು ಇದರಿಂದ ಇಲ್ಲಿನ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">ಮಲಪ್ರಭಾ ಯೋಜನೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಏತ ನೀರಾವರಿ ಯೋಜನೆಗಳು ಸುಮಾರು 40 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಏತ ನೀರಾವರಿ ಯೋಜನೆಗಳ ಕಾರ್ಯ ಕ್ಷಮತೆಯು ಕಡಿಮೆಯಾಗಿರುತ್ತದೆ. ಸದರಿ ಏತ ನೀರಾವರಿ ಯೋಜನೆಗಳ ನವೀಕರಣಕ್ಕಾಗಿ ರೂ.145.00 ಕೋಟಿಗಳ ವಿವರವಾದ ಯೋಜನಾ ವರದಿಗೆ ಸಂಬಂಧಿಸಿದಂತೆ ಈ ಮೊದಲು ಆರ್ಥಿಕ ಇಲಾಖೆಯು ದಿನಾಂಕ:25/11/2019 ರಲ್ಲಿ ಪ್ರಸ್ತಾಪಿತ ಯೋಜನೆಯನ್ನು ಕೈಬಿಡಲು ತಿಳಿಸಿರುತ್ತದೆ.<br><br>ಮುಂದುವರೆದು, ದಿನಾಂಕ:28.01.2019ರ ಸರ್ಕಾರದ ಪತ್ರದಲ್ಲಿ ಸೂಚಿಸಿರುವಂತೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಬೈಲವಾಡ ಮತ್ತು ದೇವಲಾಪೂರ ಕೆರೆಗಳನ್ನು ಮಲಪ್ರಭಾ ನದಿಯಿಂದ ನೀರನ್ನೆತ್ತಿ ತುಂಬಿಸುವ ಹಾಗೂ ಕೆಂಗನೂರು,</td></tr>
<tr><td>ಉ)</td><td>ಹಾಗಿದ್ದಲ್ಲಿ 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದ ಪ್ರಕಾರ ಈ ಎಲ್ಲಾ ಏತ ನೀರಾವರಿ ಯೋಜನೆಗಳನ್ನು ಪ್ರಾರಂಭಿಸಿ ಆ ಭಾಗದ ರೈತರಿಗೆ ಅನುಕೂಲತೆಯನ್ನು ಮಾಡಿಕೊಡಲಾಗುವುದೇ?</td></tr>
</table>

| | | |
|---|---|---|
| | | ಜಾಲಿಕೊಪ್ಪ ಮತ್ತು ಬೂದಿಹಾಳ ಏತ ನೀರಾವರಿ ಯೋಜನೆಗಳನ್ನು ಪುನಃಶ್ಚೇತನಗೊಳಿಸುವ ಯೋಜನಾ ವರದಿಯನ್ನು ರೂ.80.00 ಕೋಟಿಗಳಿಗೆ ತಯಾರಿಸಲಾಗಿದ್ದು, ಈಗಾಗಲೇ ಪ್ರಸ್ತಾವನೆಗೆ ಕರ್ನಾಟಕ ನೀರಾವರಿ ನಿಗಮದ ದಿನಾಂಕ:01.10.2019 ರಂದು ಜರುಗಿದ ಅಂದಾಜು ಪರಿಶೀಲನಾ ಸಮಿತಿಯ ಸಭೆಯಲ್ಲಿ ಮಂಡಿಸಿದ್ದು, ಸಮಿತಿಯು ಯೋಜನೆಗೆ ನಿಗಮದ ನಿರ್ದೇಶಕರ ಮಂಡಳಿಯ ಅನುಮೋದನೆ ಪಡೆದು ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಲು ಶಿಫಾರಸ್ಸು ಮಾಡಿರುತ್ತದೆ. ಅದರನ್ವಯ ಸದರಿ ಯೋಜನೆಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲು ನಿಗಮದ ಹಂತದಲ್ಲಿ ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ: ಜಸಂಇ 9 ಡಬ್ಲ್ಯೂಬಿಎಂ 2021

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

# ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 490

ಸದಸ್ಯರ ಹೆಸರು : ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ)

ಉತ್ತರಿಸುವ ಸಚಿವರು : ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸಬೇಕಾದ ದಿನಾಂಕ : 02.02.2021.

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2020-21ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಸರ್ಕಾರ ಇಲ್ಲಿಯವರೆಗೆ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ; (ಸಂಪೂರ್ಣ ವಿವರ ಒದಗಿಸುವುದು) | 2020-21ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ರೂ.1131.86 ಕೋಟಿಗಳ ಅನುದಾನವನ್ನು ನಿಗದಿಪಡಿಸಿರುತ್ತದೆ. ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.<br><br>1. <u>ಸಾಮಾಜಿಕ ವಲಯ</u><br>a) ಶಾಲಾ ಪದವಿ ಕಾಲೇಜುಗಳಿಗೆ ಹೆಚ್ಚುವರಿ /ಕಾಲೇಜುಗಳಿಗೆ/ ಕಟ್ಟಡಗಳ ನಿರ್ಮಾಣ/ಕೋಣೆಗಳ, ಅಂಗನವಾಡಿ ನಿರ್ಮಾಣ<br>b) ಗ್ರಂಥಾಲಯಗಳ ನಿರ್ಮಾಣ,<br>c) ಎ.ಎನ್.ಎಂ ನಿರ್ಮಾಣ<br>d) ಪಿ.ಹೆಚ್.ಸಿ ನಿರ್ಮಾಣ<br>e) ಸಿ.ಹೆಚ್.ಸಿ ನಿರ್ಮಾಣ<br>f) ತಾಲೂಕಾ ಆಸ್ಪತ್ರೆ, ಜಿಲ್ಲಾ ಆಸ್ಪತ್ರೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು<br>g) ಕೌಶಲ್ಯ ತರಬೇತಿ ನೀಡುವುದು,<br>h) ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಮುಂತಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.<br><br>2. <u>ಸಾಮಾಜಿಕೇತರ ವಲಯದಲ್ಲಿ</u><br>a) ಸಿ.ಸಿ.ರಸ್ತೆ,<br>b) ರಸ್ತೆ ಡಾಂಬರೀಕರಣ<br>c) ಸೇತುವೆ & ಚರಂಡಿ ನಿರ್ಮಾಣ,<br>d) ಕುಡಿಯುವ ನೀರು ಸರಬರಾಜು,<br>e) ಕೆರೆಗಳ ನಿರ್ಮಾಣ<br>f) ಮುಂತಾದ ಅಭಿವೃದ್ಧಿಗಾಗಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುತ್ತಿದೆ. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಮೀಸಲಿಟ್ಟ **1500** ಕೋಟಿ ರೂಪಾಯಿ ಹಣದಲ್ಲಿ ಇಲ್ಲಿಯವರೆಗೆ ಯಾವುದೇ ಕಾಮಗಾರಿಗೆ ಅನುಮೋದನೆ ನೀಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2020-21ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ರೂ.1131.86 ಕೋಟಿಗಳ ಅನುದಾನದಲ್ಲಿ ರೂ.952.22 ಕೋಟಿಗಳ ಕ್ರಿಯಾಯೋಜನೆಗೆ ದಿನಾಂಕ: 18.12.2020ರಂದು ಅನುಮೋದನೆ ನೀಡಿಲಾಗಿದೆ. ಉಳಿದ ಅನುದಾನದ ಕ್ರಿಯಾಯೋಜನಗೆ ಅರ್ಥಿಕ ಇಲಾಖೆಯ ಅನುಮೋದನೆಗೆ ಸಲ್ಲಿಸಲಾಗಿದೆ. |
| ಇ) | ಆಯವ್ಯಯದಲ್ಲಿ ಘೋಷಿಸಲಾದ ಅನುದಾನಕ್ಕೆ ಅನುಗುಣವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಮುಂದಿನ ಮಾರ್ಚ್ ಒಳಗೆ ಅನುದಾನ ಖರ್ಚು ಮಾಡಲು ಕ್ರಮ ಕೈಗೊಳ್ಳುವುದೇ? | 2020-21ನೇ ಸಾಲಿನ ಆರ್ಥಿಕ ವರ್ಷದ ಅಂತ್ಯದವರೆಗೆ ಮುಂದುವರೆದ ಕಾಮಗಾರಿಗಳು ಹಾಗೂ ಹಿಂದಿನ ವರ್ಷದಲ್ಲಿ ಅನುಮೋದನೆಗೊಂಡು ಪ್ರಾರಂಭವಾಗದಿರುವ ಹೊಸ ಕಾಮಗಾರಿಗಳಿಗೆ ಪೂರ್ಣ ಅನುದಾನವನ್ನು ಬಿಡುಗಡೆಗೊಳಿಸಿ ಖರ್ಚುಮಾಡಲಾಗುವುದು. |

**ಪಿಡಿಎಸ್ 9 ಹೆಚ್‌ಕೆಡಿ 2021**

(ಕೆ.ಸಿ.ನಾರಾಯಣಗೌಡ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

# ಕರ್ನಾಟಕ ವಿಧಾನಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 496 |
| ಸದಸ್ಯರ ಹೆಸರು | : ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) |
| ಉತ್ತರಿಸಬೇಕಾದ ದಿನಾಂಕ | : 02.02.2021 |
| ಉತ್ತರಿಸುವ ಸಚಿವರು | : ಗೃಹ ಸಚಿವರು |

| ಕ್ರ.ಸ | ವಿಷಯ | ಉತ್ತರ |
|---|---|---|
| ಅ | ಬೆಂಗಳೂರು ಮಹಾನಗರದ ಕೆಂಪೇಗೌಡ ಬಸ್ ನಿಲ್ದಾಣ/ ಬಿಎಂಟಿಸಿ ಬಸ್ ನಿಲ್ದಾಣ/ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣ ಸಂಪರ್ಕಿಸುವ ಅಂಡರ್ ಪಾಸ್‌ನ ಮೂರು ದಿಕ್ಕುಗಳಲ್ಲಿ ಅನಧಿಕೃತ ಮಾರಾಟಗಾರರು, ಮಂಗಳಮುಖಿಯರು ಅನೈತಿಕ ಚಟುವಟಿಕೆಗಳಲ್ಲಿ ತೊಡಗಿರುವುದರಿಂದ ಅಂಡರ್ ಪಾಸ್‌ನಲ್ಲಿ ಸಂಚರಿಸುವವರಿಗೆ ದಿನ ನಿತ್ಯ ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ | ಬಂದಿದ್ದಲ್ಲಿ, ಅವ್ಯಾಹತವಾಗಿ ನಡೆಯುತ್ತಿರುವ ಅನೈತಿಕ ಚಟುವಟಿಕೆಗಳ ತೊಂದರೆಗಳಿಂದ ಸದರಿ ಪ್ರದೇಶವನ್ನು ಖಾಯಂ ಆಗಿ ಮುಕ್ತಗೊಳಿಸಲು ಸಾಧ್ಯವಿಲ್ಲವೇ; | ಚಿಕ್ಕಪೇಟೆ ಉಪ ವಿಭಾಗದ ಉಪ್ಪಾರಪೇಟೆ ಮತ್ತು ಕಾಟನ್‌ಪೇಟೆ ಪೊಲೀಸ್ ಠಾಣಾ ಸರಹದ್ದಿನಲ್ಲಿರುವ ರೈಲು ನಿಲ್ದಾಣದಿಂದ ಬರುವ ಅಂಡರ್ ಪಾಸ್, ಕೆಂಪೇಗೌಡ ಬಸ್ ನಿಲ್ದಾಣ ಮತ್ತು ಬಿ.ಎಂ.ಟಿ.ಸಿ ಬಸ್ ನಿಲ್ದಾಣದ ಮೂರು ಅಂಡರ್ ಪಾಸ್‌ಗಳಲ್ಲಿ ಪ್ರತಿನಿತ್ಯ ಅಧಿಕಾರಿ/ಸಿಬ್ಬಂದಿಗಳನ್ನು ನೇಮಕ ಮಾಡುತ್ತಿದ್ದು, ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಹಾಗೂ ಅನೈತಿಕ ಚಟುವಟಿಕೆಗಳು ನಡೆಯದಂತೆ ಎಚ್ಚರವಹಿಸಲಾಗಿದೆ. |
| ಇ | ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಿದೆ (ವಿವರಗಳನ್ನು ನೀಡುವುದು)? | ಚಿಕ್ಕಪೇಟೆ ಉಪ ವಿಭಾಗದ ಉಪ್ಪಾರಪೇಟೆ ಮತ್ತು ಕಾಟನ್‌ಪೇಟೆ ಪೊಲೀಸ್ ಠಾಣಾ ಸರಹದ್ದಿನಲ್ಲಿರುವ ರೈಲು ನಿಲ್ದಾಣದಿಂದ ಬರುವ ಅಂಡರ್ ಪಾಸ್, ಕೆಂಪೇಗೌಡ ಬಸ್ ನಿಲ್ದಾಣ ಮತ್ತು ಬಿ.ಎಂ.ಟಿ.ಸಿ ಬಸ್ ನಿಲ್ದಾಣದ ಮೂರು ಅಂಡರ್ ಪಾಸ್‌ಗಳಲ್ಲಿ ಸಾರ್ವಜನಿಕರಿಗೆ ತೊಂದರೆ ಉಂಟು ಮಾಡುವ ಮಂಗಳಮುಖಿಯರಿಗೆ ಪ್ರತಿ ದಿನ ಕೆ.ಪಿ ಆಕ್ಟ್ ಅಡಿಯಲ್ಲಿ ಲಘು ಪ್ರಕರಣಗಳನ್ನು ದಾಖಲಿಸುತ್ತಿದ್ದು, ಸಾರ್ವಜನಿಕರಿಗೆ ತೊಂದರೆ ಕೊಟ್ಟಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.<br><br>1. ಕೆಂಪೇಗೌಡ ಬಸ್ ನಿಲ್ದಾಣದ ಪ್ರದೇಶದಲ್ಲಿ ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಉಪ್ಪಾರಪೇಟೆ ಹೊರ ಠಾಣೆಯನ್ನು ತೆರೆದು ಇಲ್ಲಿಗೆ ಒಬ್ಬರು ಪಿ.ಎಸ್.ಐ, ಒಂದು ಚೀತಾ ವಾಹನ ಹಾಗೂ ಒಂದು ಪಿಂಕ್ ಹೊಯ್ಸಳ-239 ವಾಹನವನ್ನು ನಿಯೋಜನೆ ಮಾಡಿದ್ದು, ಪ್ರತಿ ದಿನ ಹಗಲು ಮತ್ತು ರಾತ್ರಿ 24 ಗಂಟೆಗಳು ಲಭ್ಯವಿರುವಂತೆ ಸಿಬ್ಬಂದಿಯವರನ್ನು ನೇಮಕ ಮಾಡಿ ಪ್ರಮುಖ ಆಯಕಟ್ಟಿನ ಸ್ಥಳಗಳಲ್ಲಿ ಹೆಚ್ಚು ಗಸ್ತು ಕರ್ತವ್ಯ ನಿರ್ವಹಿಸಲಾಗುತ್ತಿದೆ. |

2. ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ಸಮಯದಲ್ಲಿ ಅಂಡರ್‌ಪಾಸ್‌ನಲ್ಲಿ ಹೆಚ್ಚು ಜನರು ಸಂಚರಿಸುವುದರಿಂದ ಅಪರಾಧ ವಿಭಾಗದ ಸಿಬ್ಬಂದಿಯವರನ್ನು ಸಾದಾ (ಮಫ್ತಿ) ಉಡುಪಿನಲ್ಲಿ ನಿಯೋಜನೆ ಮಾಡಿ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಕ್ರಮ ಕೈಗೊಂಡಿರುತ್ತದೆ.

3. ಬಸ್ ನಿಲ್ದಾಣದಲ್ಲಿ ಮಹಿಳೆಯರ ಸುರಕ್ಷತೆಗಾಗಿ ಪಿಂಕ್ ಹೊಯ್ಸಳ ವಾಹನಕ್ಕೆ ಹಗಲು ಮತ್ತು ರಾತ್ರಿ ಮಹಿಳಾ ಸಿಬ್ಬಂದಿಯವರನ್ನು ನಿಯೋಜಿಸಿ ಗಸ್ತು ಕರ್ತವ್ಯ ನಿರ್ವಹಿಸಲಾಗುತ್ತಿದೆ.

4. ಮೆಜೆಸ್ಟಿಕ್ ಪ್ರದೇಶದ ಅಂಡರ್‌ಪಾಸ್‌ನಲ್ಲಿ ಕತ್ತಲು ಪ್ರದೇಶಗಳಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಲು ಹಾಗೂ ದುರಸ್ತಿಗೆ ಬಂದಿರುವ ವಿದ್ಯುತ್ ದೀಪಗಳನ್ನು ಸರಿಪಡಿಸಲು ಸಂಬಂಧಪಟ್ಟ ಬೆಸ್ಕಾಂ ಕಛೇರಿಗಳಿಗೆ ಮನವಿ ಸಲ್ಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

5. ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಮತ್ತು ಅಂಡರ್‌ಪಾಸ್‌ನಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮರಾಗಳು ಸುಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳುವಂತೆ ಹಾಗೂ ಹೆಚ್ಚಿನ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲು ಬಿ.ಎಂ.ಟಿ.ಸಿ/ ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳನ್ನು ಕೋರಿ ಕ್ರಮ ಕೈಗೊಂಡಿರುತ್ತದೆ.

6. ಬಸ್ ನಿಲ್ದಾಣ ಮತ್ತು ಅಂಡರ್‌ಪಾಸ್‌ಗಳಲ್ಲಿ ನಡೆಯುವ ಅಪರಾಧ ಪ್ರಕರಣಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಸಂಬಂಧ ಕರಪತ್ರ (ಪಾಂಪ್ಲೆಟ್ಸ್)ಗಳನ್ನು ಮಾಡಿಸಿ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರಿಗೆ ಹಂಚಿ, ಎಚ್ಚರಿಕೆಯಿಂದ ಇರಲು ಸಾರ್ವಜನಿಕರಿಗೆ ಮಾಹಿತಿ ನೀಡಲಾಗುತ್ತಿದೆ.

7. ಹೊಯ್ಸಳ ವಾಹನಗಳಲ್ಲಿ ಅಳವಡಿಸಿರುವ ಪಬ್ಲಿಕ್ ಅನೌನ್ಸ್‌ಮೆಂಟ್ ಸಿಸ್ಟಂ ಮೂಲಕ ಸಾರ್ವಜನಿಕರು ಬಸ್ ನಿಲ್ದಾಣ ಮತ್ತು ಅಂಡರ್‌ಪಾಸ್‌ಗಳಲ್ಲಿ ಮಂಗಳಮುಖಿಯರು ಮತ್ತು ಬೀದಿ ಬದಿ ವ್ಯಾಪಾರಿಗಳಿಂದ ತೊಂದರೆಯಾದಲ್ಲಿ ಕೂಡಲೇ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ತಿಳುವಳಿಕೆ ನೀಡಲಾಗುತ್ತಿದೆ.

8. ಮೆಜೆಸ್ಟಿಕ್‌ನ ಅಂಡರ್ ಪಾಸ್‌ಗಳು ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ದಿನದ 24 ಗಂಟೆಗಳೂ ಲಭ್ಯವಿರುವಂತೆ ಸಿಬ್ಬಂದಿಯವರನ್ನು ಗಸ್ತಿಗೆ ನೇಮಕ ಮಾಡಿ ಕ್ರಮ ಕೈಗೊಳ್ಳಲಾಗುತ್ತಿದೆ.

9. ಮೆಜೆಸ್ಟಿಕ್‌ನ ಅಂಡರ್ ಪಾಸ್‌ಗಳಲ್ಲಿ ಬಿಬಿಎಂಪಿ ಯಿಂದ ಅನುಮತಿ ಪಡೆದು ಅಂಗಡಿಗಳನ್ನು ಹಾಕಿದ್ದು, ಬಿಬಿಎಂಪಿ ವ್ಯಾಪ್ತಿಗೊಳಪಟ್ಟಿರುತ್ತದೆ. ಅಂಗಡಿಗಳನ್ನು ತೆರವುಗೊಳಿಸಲು ಬಿಬಿಎಂಪಿ ಅಧಿಕಾರಿಗಳು ಬಂದಲ್ಲಿ ಅವರಿಗೆ ಸಂಪೂರ್ಣ ಪೊಲೀಸ್ ಭದ್ರತೆ ಒದಗಿಸಲಾಗುವುದು.

**ಹೆಚ್‌ಡಿ 66 ಎಸ್‌ಎಸ್‌ಟಿ 2021**

**(ಬಸವರಾಜ ಬೊಮ್ಮಾಯಿ)**

**ಗೃಹ ಸಚಿವರು**

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 497
2. ಸದಸ್ಯರ ಹೆಸರು : ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ)
3. ಉತ್ತರಿಸುವ ದಿನಾಂಕ : 02-02-2021
4. ಉತ್ತರಿಸುವವರು : ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ವಿಷನ್-2022ರಡಿ ಬೆಂಗಳೂರು ಮಹಾನಗರದಲ್ಲಿನ ವಾಹನ ಸಂಚಾರದ ದಟ್ಟಣೆಯ ಸಮಸ್ಯೆ ನೀಗಿಸುವ ಸಂಬಂಧ ಎಷ್ಟು ಕಾರಿಡಾರ್ ರಸ್ತೆಗಳ ಉನ್ನತೀಕರಣ ಹಾಗೂ ನಿರ್ವಹಣೆಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸರ್ಕಾರ ನಿರ್ಧರಿಸಿದೆ; | ಮಿಷನ್-2022 ರಡಿ ಬೆಂಗಳೂರು ಮಹಾನಗರದಲ್ಲಿನ ಒಟ್ಟು 12 ಹೈಡೆನ್ಸಿಟಿ ಕಾರಿಡಾರ್ ರಸ್ತೆಗಳ ಉನ್ನತೀಕರಣ ಹಾಗೂ ನಿರ್ವಹಣೆ ಕಾಮಗಾರಿಗಳನ್ನು ಕೆ.ಆರ್.ಡಿ.ಸಿ.ಎಲ್ ಸಂಸ್ಥೆ ಮುಖಾಂತರ ಕೈಗೆತ್ತಿಕೊಳ್ಳಲಾಗುತ್ತಿದೆ. |
| ಆ. | ಹಾಗಿದ್ದಲ್ಲಿ, ಪ್ರಸ್ತುತ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಯಾವುವು; | 12 ಹೈಡೆನ್ಸಿಟಿ ಕಾರಿಡಾರ್ ರಸ್ತೆಗಳ ವಿವರಗಳು ಈ ಕೆಳಕಂಡಂತಿವೆ. |

| ಹೆಚ್.ಡಿ.ಸಿ. ಸಂ | ರಸ್ತೆ | ಉದ್ದ (ಕಿ.ಮೀ) |
|---|---|---|
| ಹೆಚ್.ಡಿ.ಸಿ.-1 | ಬಳ್ಳಾರಿ ರಸ್ತೆ | 7.45 |
| ಹೆಚ್.ಡಿ.ಸಿ.-2 | ಹಳೇ ಮದ್ರಾಸ್ ರಸ್ತೆ | 18.50 |
| ಹೆಚ್.ಡಿ.ಸಿ.-3 | ಏರ್‌ಪೋರ್ಟ್ ರಸ್ತೆ | 17.15 |
| ಹೆಚ್.ಡಿ.ಸಿ.-4 | ಸರ್ಜಾಪುರ ರಸ್ತೆ | 8.75 |
| ಹೆಚ್.ಡಿ.ಸಿ.-5 | ಹೊಸೂರು ರಸ್ತೆ | 6.45 |
| ಹೆಚ್.ಡಿ.ಸಿ.-6 | ಬನ್ನೇರುಘಟ್ಟ ರಸ್ತೆ | 16.50 |
| ಹೆಚ್.ಡಿ.ಸಿ.-7 | ಕನಕಪುರ ರಸ್ತೆ | 14.50 |
| ಹೆಚ್.ಡಿ.ಸಿ.-8 | ಮೈಸೂರು ರಸ್ತೆ | 15.40 |
| ಹೆಚ್.ಡಿ.ಸಿ.-9 | ಮಾಗಡಿ ರಸ್ತೆ | 12.00 |
| ಹೆಚ್.ಡಿ.ಸಿ.-10 | ತುಮಕೂರು ರಸ್ತೆ | 7.90 |
| ಹೆಚ್.ಡಿ.ಸಿ.-11 | ವೆಸ್ಟ್ ಆಫ್ ಕಾರ್ಡ್ ರಸ್ತೆ | 8.40 |
| ಹೆಚ್.ಡಿ.ಸಿ.-12 | ಹೊರ ವರ್ತುಲ ರಸ್ತೆ | |
| | (a) ಮೈಸೂರು ರಸ್ತೆಯಿಂದ ಗೊರಗುಂಟೆಪಾಳ್ಯದವರೆಗೆ | 10.90 |
| | (b) ಗೊರಗುಂಟೆ ಪಾಳ್ಯದಿಂದ ಹಳೇ ಮದ್ರಾಸ್ ರಸ್ತೆ ವರೆಗೆ | 18.60 |
| | (c) ಕೆ.ಆರ್ ಪುರಂನಿಂದ ಹಳೇ ಏರ್‌ಪೋರ್ಟ್ ರಸ್ತೆ ವರೆಗೆ | 16.50 |
| | (d) ಸಿಲ್ಕ್ ಬೋರ್ಡ್‌ನಿಂದ ಮೈಸೂರು ರಸ್ತೆ ವರೆಗೆ | 12.00 |
| | ಒಟ್ಟು | 191.00 |

51



| | | |
|---|---|---|
| ಇ. | ಸದರಿ ಕಾರಿಡಾರ್‌ಗಳ ಕಾಮಗಾರಿಗಳಿಗಾಗಿ ಯಾವಾಗ ಟೆಂಡರ್ ಪ್ರಕ್ರಿಯೆ ನಡೆಸಲಾಯಿತು ಹಾಗೂ ಪ್ರಸ್ತುತ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಏಜೆನ್ಸಿಗಳು ಯಾವುವು? (ವಿವರಗಳನ್ನು ನೀಡುವುದು) | ಸದರಿ ಕಾರಿಡಾರ್‌ಗಳ ಕಾಮಗಾರಿಗಳಿಗಾಗಿ ದಿನಾಂಕ: 08–01–2021 ರಂದು ಟೆಂಡರ್‌ಗಳನ್ನು ಅಹ್ವಾನಿಸಲಾಗಿರುತ್ತದೆ. ಪ್ರಸ್ತುತ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ದಿನಾಂಕ: 08–02–2021 ರಂದು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. |

**ಸಂಖ್ಯೆ: ನಅಇ 12 ಎಂಎಸ್‌ವೈ 2021 (ಇ)**

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 504 |
| ಸದಸ್ಯರ ಹೆಸರು | : | ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರವು ಯಾವ ಯಾವ ಮೂಲಗಳಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ಖರೀದಿಸುತ್ತಿದೆ; (ವಿವರವನ್ನು ನೀಡುವುದು) | ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ವಿವಿಧ ಮೂಲಗಳಿಂದ ಲಭ್ಯವಾದ ವಿದ್ಯುತ್ ಪ್ರಮಾಣದ ವಿವರಗಳು ಈ ಕೆಳಕಂಡಂತಿದೆ: (see table below) |

| ವಿದ್ಯುತ್‌ನ ಮೂಲ | ಲಭ್ಯವಾದ ವಿದ್ಯುತ್ತಿನ ಪ್ರಮಾಣ (ದಿನಾಂಕ: 01.04.2020 ರಿಂದ 31.12.2020 ರವರೆಗೆ) (ದಶಲಕ್ಷ ಯೂನಿಟ್ ಗಳಲ್ಲಿ) (ತಾತ್ಕಾಲಿಕ) |
|---|---|
| ಜಲ ವಿದ್ಯುತ್ | 9765.97 |
| ಶಾಖೋತ್ಪನ್ನ | 5006.21 |
| ಕೇಂದ್ರ ಸರ್ಕಾರ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಘಟಕಗಳಿಂದ ರಾಜ್ಯದ ಪಾಲು | 6344.18 |
| ಅಸಂಪ್ರದಾಯಿಕ ಮೂಲಗಳಿಂದ | 26062.55 |
| ಬೃಹತ್ ಐ.ಪಿ.ಪಿ. | 1541.71 |
| ಜಿಂದಾಲ್ | 198.36 |
| ಒಟ್ಟು | **48918.98** |

| | ಪ್ರಶ್ನೆ | ಉತ್ತರ |
|---|---|---|
| ಆ) | ಬಿಟಿಪಿಎಸ್, ವೈಟಿಪಿಎಸ್ ಮತ್ತು ಆರ್‌ಟಿಪಿಎಸ್‌ಗಳಲ್ಲಿ ಒಂದು ಯೂನಿಟ್ ವಿದ್ಯುತ್ ಖರೀದಿಗೆ ಪ್ರಸ್ತುತ ಸರ್ಕಾರ ಎಷ್ಟು ಹಣವನ್ನು ಪಾವತಿಸುತ್ತಿದೆ; (ಸಂಪೂರ್ಣ ವಿವರವನ್ನು ನೀಡುವುದು) | ಡಿಸೆಂಬರ್–2020ಕ್ಕೆ ಬಿಟಿಪಿಎಸ್, ವೈಟಿಪಿಎಸ್ ಮತ್ತು ಆರ್‌ಟಿಪಿಎಸ್‌ಗಳಿಂದ ಖರೀದಿಸಿದ ಪ್ರತಿ ಯೂನಿಟ್ ವಿದ್ಯುತ್‌ಗೆ ಪಾವತಿಸಿದ ದರದ ವಿವರಗಳು ಕೆಳಕಂಡಂತಿವೆ: (ರೂ.ಗಳಲ್ಲಿ) |

| ವಿದ್ಯುತ್ ಸರಬರಾಜು ಕಂಪನಿ | ಆರ್‌ಟಿಪಿಎಸ್ |
|---|---|
| ಆರ್.ಟಿ.ಪಿ.ಸಿ.ಎಸ್ 1 ರಿಂದ 7 | 3.80 |
| ಆರ್.ಟಿ.ಪಿ.ಸಿ.ಎಸ್ 8 | 4.89 |
| ಬಿ.ಟಿ.ಪಿ.ಎಸ್ 1 | 3.87 |
| ಬಿ.ಟಿ.ಪಿ.ಎಸ್ 2 | 4.03 |
| ಬಿ.ಟಿ.ಪಿ.ಎಸ್ 3 | 4.77 |
| ವೈ.ಟಿ.ಪಿ.ಎಸ್ | 4.80 |

ಇ) ಎನ್‌ಟಿಪಿಸಿ ಯಿಂದ ಪ್ರಸ್ತುತ ಖರೀದಿಸುತ್ತಿರುವ ಒಂದು ಯೂನಿಟ್ ವಿದ್ಯುತ್‌ಗೆ ಎಷ್ಟು ಹಣವನ್ನು (ಸರಬರಾಜು ವೆಚ್ಚ ಸೇರಿಸಿ) ಪಾವತಿಸಲಾಗುತ್ತಿದೆ? (ಸಂಪೂರ್ಣ ವಿವರವನ್ನು ನೀಡುವುದು)

ಎನ್‌ಟಿಪಿಸಿ. ಘಟಕಗಳಿಂದ ಖರೀದಿಸುತ್ತಿರುವ ವಿದ್ಯುತ್‌ಗೆ ಪಾವತಿಸುತ್ತಿರುವ ದರದ ವಿವರಗಳು ಕೆಳಕಂಡಂತಿವೆ:

| ಕ್ರ ಸಂ | ಘಟಕ | ನಿಗದಿತ ಶುಲ್ಕ ರೂ/ ಯೂನಿಟ್ | ವಿದ್ಯುತ್ ಶುಲ್ಕ ರೂ/ ಯೂನಿಟ್ | ಪ್ರಸರಣ ನಷ್ಟ ರೂ/ ಯೂನಿಟ್ | ಪ್ರಸರಣ ವೆಚ್ಚ ರೂ/ ಯುನಿಟ್ | ಒಟ್ಟು ದರ ರೂ/ ಯುನಿಟ್ |
|---|---|---|---|---|---|---|
| 1 | ಎನ್ ಟಿ ಪಿ ಸಿ ತಾಲ್ಚರ್ | 0.75 | 2.111 | 0.096 | 1.25 | 4.207 |
| 2 | ಎನ್ ಟಿ ಪಿ ಸಿ ಸ್ಟೇಜ್-3 | 0.73 | 2.464 | 0.107 | 1.25 | 4.551 |
| 3 | ಎನ್ ಟಿ ಪಿ ಸಿ ಸ್ಟೇಜ್1 &2 | 0.77 | 2.498 | 0.11 | 1.25 | 4.628 |
| 4 | ಎನ್ ಟಿ ಪಿ ಸಿ ಕೂಡ್ಗಿ | 1.668 | 3.23 | 0.165 | 1.25 | 6.313 |
| 5 | ಎನ್ ಟಿ ಪಿ ಸಿ ತಾಲ್ಚರ್ | 1.52 | 3.117 | 0.156 | 1.25 | 6.043 |

**ಸಂಖ್ಯೆ: ಎನರ್ಜಿ 18 ಪಿಪಿಎಂ 2021**

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 506 |
| ಸದಸ್ಯರ ಹೆಸರು | : | ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ಚನ್ನರಾಯಪಟ್ಟಣ ತಾಲ್ಲೂಕಿನ ವ್ಯಾಪ್ತಿಯಲ್ಲಿ ವಿದ್ಯುತ್ ಪರಿವರ್ತಕ ದುರಸ್ತಿ ಕೇಂದ್ರಕ್ಕೆ ಬೆಂಕಿ ಬಿದ್ದು ಸಂಪೂರ್ಣ ಸುಟ್ಟುಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವ್ಯಾಪ್ತಿಯಲ್ಲಿರುವ ಚನ್ನರಾಯಪಟ್ಟಣ ವಿಭಾಗಕ್ಕೆ ಸಂಬಂಧಿಸಿದ ವಿಫಲವಾದ ಪರಿವರ್ತಕಗಳನ್ನು ಮೆ॥ ಅನ್ನಪೂರ್ಣೇಶ್ವರಿ ಇಂಡಸ್ಟ್ರೀಸ್ ರವರು ದುರಸ್ತಿಗೊಳಿಸುತ್ತಿದ್ದು, ಸದರಿಯವರ ದುರಸ್ಥಿ ಕೇಂದ್ರದ ಆವರಣದಲ್ಲಿ ದಿನಾಂಕ:26.05.2020ರ ಬೆಳಿಗ್ಗೆ ಸುಮಾರು 1.30 ರಿಂದ 2.00 ಗಂಟೆಯ ಸಮಯಕ್ಕೆ ಬೆಂಕಿ ಅನಾಹುತ ಸಂಭವಿಸಿರುತ್ತದೆ. ಈ ಸಂದರ್ಭದಲ್ಲಿ ಸದರಿಯವರಿಗೆ ದುರಸ್ತಿಗಾಗಿ ನೀಡಲಾಗಿದ್ದ ಒಟ್ಟು 42 ಸಂಖ್ಯೆ ಪರಿವರ್ತಕಗಳು ಸಂಪೂರ್ಣವಾಗಿ ಬೆಂಕಿಯಲ್ಲಿ ಸುಟ್ಟುಹೋಗಿದ್ದು ವಿವರಗಳು ಈ ಕೆಳಗಿನಂತಿರುತ್ತವೆ |

| ಪರಿವರ್ತಕಗಳ ಸಾಮರ್ಥ್ಯ (ಕೆ.ವಿ.ಎ) | ವಿಫಲವಾದ ಪರಿವರ್ತಕಗಳ ಸಂಖ್ಯೆ |
|---|---|
| 25 | 10 |
| 63 | 26 |
| 100 | 06 |
| ಒಟ್ಟು | 42 |

| | ಪ್ರಶ್ನೆ | ಉತ್ತರ |
|---|---|---|
| ಆ) | ಈ ತಾಲ್ಲೂಕಿನಲ್ಲಿ ಪರಿವರ್ತಕ ದುರಸ್ತಿ ಕೇಂದ್ರಕ್ಕೆ ಬೆಂಕಿ ಬಿದ್ದ ನಂತರ ವಿಭಾಗಕ್ಕೆ ಹೊಸ ಪರಿವರ್ತಕಗಳನ್ನು ನೀಡಲಾಗಿದೆಯೇ; ನೀಡಿದ್ದಲ್ಲಿ, ಅವುಗಳ ಸಂಖ್ಯಾವಾರು ವಿವರ ನೀಡುವುದು; | ಸದರಿ ಪರಿವರ್ತಕ ದುರಸ್ತಿ ಕೇಂದ್ರದ ಬೆಂಕಿ ಅನಾಹುತದ ನಂತರ ಚನ್ನರಾಯಪಟ್ಟಣ ವಿಭಾಗಕ್ಕೆ ಜನವರಿ–2021 ರ ಅಂತ್ಯಕ್ಕೆ ಒಟ್ಟು 113 ಸಂಖ್ಯೆ ಹೊಸ ಪರಿವರ್ತಕಗಳನ್ನು ಸರಬರಾಜು ಮಾಡಲಾಗಿದ್ದು ವಿವರಗಳು ಈ ಕೆಳಗಿನಂತಿವೆ: |

| ಪರಿವರ್ತಕಗಳ ಸಾಮರ್ಥ್ಯ (ಕೆ.ವಿ.ಎ) | ಸರಬರಾಜು ಮಾಡಲಾದ ಹೊಸ ಪರಿವರ್ತಕಗಳ ಸಂಖ್ಯೆ |
|---|---|
| 25 | 110 |
| 63 | 03 |
| ಒಟ್ಟು | 113 |

…2

| | | |
|---|---|---|
| ಇ) | ವಿದ್ಯುತ್ ಪರಿವರ್ತಕಗಳನ್ನು ಬದಲಾಯಿಸಲು/ಹೊಸ ಪರಿವರ್ತಕಗಳನ್ನು ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಚನ್ನರಾಯಪಟ್ಟಣ ವಿಭಾಗದಲ್ಲಿ 2020-21 ಸಾಲಿನ ಡಿಸೆಂಬರ್ ಅಂತ್ಯಕ್ಕೆ ಒಟ್ಟು 578 ಸಂಖ್ಯೆಯ ಪರಿವರ್ತಕಗಳು (15 ಕೆ.ವಿ.ಎ.ಯ 4 ಸಂಖ್ಯೆ, 25 ಕೆ.ವಿ.ಎ.ಯ 214 ಸಂಖ್ಯೆ, 63 ಕೆ.ವಿ.ಎ.ಯ 226 ಸಂಖ್ಯೆ ಮತ್ತು 100 ಕೆ.ವಿ.ಎ.ಯ 134 ಸಂಖ್ಯೆ) ವಿಫಲಗೊಂಡಿದ್ದು, ಎಲ್ಲಾ ಪರಿವರ್ತಕಗಳನ್ನು ಬದಲಾಯಿಸಲಾಗಿದೆ.<br><br>ವಿಫಲಗೊಂಡ ಪರಿವರ್ತಕಗಳನ್ನು ಶೀಘ್ರವಾಗಿ ಬದಲಾಯಿಸಲು ಸೂಕ್ತ ಕ್ರಮವನ್ನು ಚಾವಿಸನಿನಿಯಿಂದ ಕ್ರಮ ಕೈಗೊಂಡಿದ್ದು ಉಗ್ರಾಣದಲ್ಲಿ ಹೊಸ/ದುರಸ್ಥಿಗೊಂಡ ಪರಿವರ್ತಕಗಳನ್ನು ದಾಸ್ತಾನು ಇರಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ: |

| ಹೊಸ ಪರಿವರ್ತಕಗಳು | | | |
|---|---|---|---|
| 25 ಕೆ.ವಿ.ಎ | 63 ಕೆ.ವಿ.ಎ | 100 ಕೆ.ವಿ.ಎ | ಒಟ್ಟು |
| 6 | 1 | 2 | 9 |
| **ದುರಸ್ಥಿಗೊಂಡ ಪರಿವರ್ತಕಗಳು** | | | |
| 25 ಕೆ.ವಿ.ಎ | 63 ಕೆ.ವಿ.ಎ | 100 ಕೆ.ವಿ.ಎ | ಒಟ್ಟು |
| 47 | 60 | 16 | 123 |

**ಸಂಖ್ಯೆ: ಎನರ್ಜಿ 19 ಪಿಪಿಎಂ 2021**

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

## ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 518
ಸದಸ್ಯರ ಹೆಸರು : ಶ್ರೀ ಸತೀಶ್ ರೆಡ್ಡಿ.ಎಂ. (ಬೊಮ್ಮನಹಳ್ಳಿ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 02.02.2021
ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿರವರು

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಬನ್ನೇರುಘಟ್ಟ ರಸ್ತೆಯಲ್ಲಿರುವ ಅರಕೆರೆ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಿರುವುದು ನಿಜವೇ; ಹಾಗಿದ್ದಲ್ಲಿ, ಈ ಕೆರೆ ಅಭಿವೃದ್ಧಿಯ ಅಂದಾಜು ವೆಚ್ಚ ಎಷ್ಟು; ಈ ಪೈಕಿ ಬಿಡುಗಡೆಯಾಗಿರುವ ಮತ್ತು ಈವರೆಗೆ ಖರ್ಚು ಮಾಡಿರುವ ಹಣ ಎಷ್ಟು; | ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಬನ್ನೇರುಘಟ್ಟ ರಸ್ತೆಯಲ್ಲಿರುವ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಅರೆಕೆರೆ ಗ್ರಾಮದ ಸರ್ವೆ ನಂ.34 ರಲ್ಲಿನ ಅರಕೆರೆ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಸರ್ಕಾರದ ಆದೇಶ ಸಂಖ್ಯೆ.ನಅಇ/291/ಎಂ.ಎನ್.ವೈ/2010, ಬೆಂಗಳೂರು, ದಿನಾಂಕ:-06.08.2010 ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಲಾಗಿತ್ತು.<br><br>ಪ್ರಾಧಿಕಾರದ ಸುಪರ್ದಿಯಲ್ಲಿದ್ದ ಅವಧಿಯಲ್ಲಿ ಸದರಿ ಕೆರೆಯನ್ನು ಅಭಿವೃದ್ಧಿಪಡಿಸಲು ರೂ.603.01 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೊಂಡಿದ್ದು, ಶೇ.70 ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಿದ್ದ ಸಂದರ್ಭದಲ್ಲಿ ಸರ್ಕಾರದ ಆದೇಶ ಸಂಖ್ಯೆ.ನಅಇ/39/ಬೆಂಅಸೇ/2019, ಬೆಂಗಳೂರು, ದಿನಾಂಕ.11.12.2019 ರ ಆದೇಶದನ್ವಯ ಈ ಕೆರೆಯನ್ನು ದಿನಾಂಕ.15.02.2020 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ.<br><br>ಸದರಿ ಕಾಮಗಾರಿಯನ್ನು ಅಭಿವೃದ್ಧಿ ಪಡಿಸಲು ಗೊತ್ತುಪಡಿಸಲಾದ ಅಂದಾಜು ಮೊತ್ತದಲ್ಲಿ ಬಿಡುಗಡೆಗೊಂಡಿರುವ ಮೊತ್ತ ಹಾಗೂ ಖರ್ಚು ಮಾಡಿರುವ ಮೊತ್ತ ರೂ.408.00 ಲಕ್ಷಗಳು |
| ಆ | ಸದರಿ ಕಾಮಗಾರಿಯನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕಾಮಗಾರಿ ಸ್ಥಗಿತಗೊಳಿಸಿರುವುದಕ್ಕೆ ಕಾರಣಗಳೇನು? | ಹೌದು.<br><br>ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಅರೆಕೆರೆ ಗ್ರಾಮದ ಸರ್ವೆ ನಂ.34 ರಲ್ಲಿನ ಅರೆಕರೆ ಕೆರೆಯ ಪುನಶ್ಚೇತನ ಹಾಗೂ ಅಭಿವೃದ್ಧಿ ಕಾಮಗಾರಿಯನ್ನು ಒತ್ತುವರಿ ಮುಕ್ತ ಹಾಗೂ ಮಲಿನ ನೀರು ಹರಿಯದೇ ಇರುವ ಪ್ರದೇಶದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಶೇ.70 ರಷ್ಟು ಪೂರ್ಣಗೊಳಿಸಲಾಗಿರುತ್ತದೆ. ಸದರಿ ಕೆರೆ ಪ್ರದೇಶದ ಪೈಕಿ 08 ಎಕರೆ ಪ್ರದೇಶದ ಮೇಲೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ WP No.16280-82/2014 ರಲ್ಲಿ ದಿನಾಂಕ.2.11.2015 |

| | | |
|---|---|---|
| | | ರಂದು ಯಥಾಸ್ಥಿತಿಯನ್ನು ಕಾಪಾಡುವಂತೆ ಆದೇಶವಾಗಿದ್ದರ ಹಿನ್ನೆಲೆಯಲ್ಲಿ ಮತ್ತು ಕೆರೆ ಪ್ರದೇಶದಲ್ಲಿ ನಿರ್ಮಿಸಬೇಕಾಗಿರುವ ಒಳಹರಿವು, ವೆಟ್ ಲ್ಯಾಂಡ್, ರಿಂಗ್ ಬಂಡ್ ಕಾಮಗಾರಿಗಳು ದಾವೆ ಹೂಡಿರುವ ಪ್ರದೇಶದಲ್ಲಿ ಬರುತ್ತಿದ್ದರಿಂದ, ಸದರಿ ಕಾಮಗಾರಿಗಳನ್ನು ಮುಂದುವರೆಸಲು ಸಾಧ್ಯವಾಗಿರುವುದಿಲ್ಲ ಹಾಗೂ ಒಳಹರಿವಿನಿಂದ ಕೆರೆಗೆ ಹರಿದು ಬರುತ್ತಿದ್ದ ಮಲಿನ ನೀರನ್ನು ತಡೆಗಟ್ಟದೇ ಇರುವುದರಿಂದಲೂ ಸಹ ಕಾಮಗಾರಿ ಪ್ರಗತಿಯಲ್ಲಿ ಕುಂಠಿತವಾಗಿರುತ್ತದೆ.<br><br>ಈ ಮಧ್ಯೆ ಸರ್ಕಾರದ ಆದೇಶ ಸಂಖ್ಯೆ.ನಅಇ/39/ಬೆಂಅಸೇ/2019, ಬೆಂಗಳೂರು, ದಿನಾಂಕ.11.12.2019 ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸುಪರ್ಧಿಯಡಿಯಲ್ಲಿ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಕೆರೆಗಳನ್ನು ಬಿ.ಬಿ.ಎಂ.ಪಿ. ಸಂಸ್ಥೆಗೆ ಹಸ್ತಾಂತರಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಈ ಕೆರೆಯನ್ನು ಯಥಾಸ್ಥಿತಿಯಂತೆ ಬಿ.ಬಿ.ಎಂ.ಪಿ. ಗೆ ದಿನಾಂಕ.15.02.2020 ರಂದು ಮುಂದಿನ ನಿರ್ವಹಣೆಗಾಗಿ ಹಸ್ತಾಂತರಿಸಲಾಗಿದೆ. |

ಸಂಖ್ಯೆ: ನಅಇ 06 ಬೆಂಭೂಸ್ವಾ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

# ಕರ್ನಾಟಕ ವಿಧಾನ ಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 529

2] ಮಾನ್ಯ ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ (ಹೊಳೇನರಸೀಪುರ)

3] ಉತ್ತರಿಸುವ ದಿನಾಂಕ : 02/02/2021

4] ಉತ್ತರಿಸುವ ಸಚಿವರು : ಗೃಹ , ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಾಸನ ಜಿಲ್ಲೆ ಹೊಳೇನರಸೀಪುರ ಪಟ್ಟಣದಲ್ಲಿ ಹಾಸನ-ಮೈಸೂರು ರಸ್ತೆಯಲ್ಲಿರುವ ವೃತ್ತ ನಿರೀಕ್ಷಕರ ಕಛೇರಿ ಕಟ್ಟಡ ಮತ್ತು ಸಬ್ ಇನ್ಸ್‌ಪೆಕ್ಟರ್, ಗ್ರಾಮಾಂತರ ಪೊಲೀಸ್ ಠಾಣೆಯ ಕಟ್ಟಡಗಳು ಸುಮಾರು 75 ವರ್ಷಕ್ಕೂ ಹಳೆಯದಾಗಿದ್ದು, ತುಂಬಾ ಶಿಥಿಲಗೊಂಡಿರುವುದರಿಂದ, ಸದರಿ ಕಟ್ಟಡಗಳನ್ನು ನೆಲಸಮಗೊಳಿಸಲಾಗಿದ್ದು, ಕಳೆದ ಒಂದೂವರೆ ವರ್ಷಗಳಿಂದ ಹೊಳೇನರಸೀಪುರ ಪಟ್ಟಣದ ಲೋಕೋಪಯೋಗಿ ಇಲಾಖೆಯ ನಿರೀಕ್ಷಣ ಮಂದಿರದಲ್ಲಿ ಸದರಿ ಎರಡೂ ಕಛೇರಿಗಳು ಕಾರ್ಯನಿರ್ವಹಿಸುತ್ತಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು) | ಹೌದು, ಹಾಸನ ಜಿಲ್ಲೆಯ ಹೊಳೇನರಸೀಪುರ ಪಟ್ಟಣದಲ್ಲಿದ್ದ ಪೊಲೀಸ್ ವೃತ್ತ ನಿರೀಕ್ಷಕರ ಕಛೇರಿ ಮತ್ತು ಗ್ರಾಮಾಂತರ ಠಾಣೆ ಕಟ್ಟಡಗಳು ಶಿಥಿಲಗೊಂಡಿದ್ದರಿಂದ ಅವುಗಳನ್ನು ನೆಲಸಮಗೊಳಿಸಲಾಗಿರುತ್ತದೆ. ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಕಛೇರಿ ಮತ್ತು ಠಾಣೆಗೆ ಆಗಮಿಸಿ ಸಲ್ಲಿಸಲು ಅನುಕೂಲವಾಗುವ ಹಿನ್ನಲೆಯಲ್ಲಿ ಹೊಳೇನರಸೀಪುರ ಪಟ್ಟಣದ ಲೋಕೋಪಯೋಗಿ ಇಲಾಖೆಯ ನಿರೀಕ್ಷಣಾ ಮಂದಿರದಲ್ಲಿ ಈ ಎರಡೂ ಕಛೇರಿಗಳು ದಿ:12/2/2020 ರಿಂದ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದೆ. |

| | | |
|---|---|---|
| ಆ) | ಹೊಳೆನರಸೀಪುರ ಪಟ್ಟಣದಲ್ಲಿ ಲೋಕೋಪಯೋಗಿ ನಿರೀಕ್ಷಣ ಮಂದಿರದ ಆವರಣವು ತುಂಬಾ ಕಿರಿದಾಗಿದ್ದು, ಕಛೇರಿ ನಡೆಸಲು ಸಾಕಷ್ಟು ಸ್ಥಳಾವಕಾಶವಿಲ್ಲದಿರುವುದರಿಂದ ವೃತ್ತ ನಿರೀಕ್ಷಕರ ಕಛೇರಿ ಮತ್ತು ಸಬ್ ಇನ್ಸ್‌ಪೆಕ್ಟರ್, ಗ್ರಾಮಾಂತರ ಪೊಲೀಸ್ ಠಾಣೆಯ ಕಛೇರಿಗಳ ಕಾರ್ಯನಿರ್ವಹಣೆಗೆ ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಹಾಸನ-ಮೈಸೂರು ರಸ್ತೆಯಲ್ಲಿರುವ ವೃತ್ತ ನಿರೀಕ್ಷಕರ ಕಛೇರಿ ಕಟ್ಟಡ ಮತ್ತು ಸಬ್ ಇನ್ಸ್‌ಪೆಕ್ಟರ್, ಗ್ರಾಮಾಂತರ ಪೊಲೀಸ್ ಠಾಣೆಯ ಕಟ್ಟಡಗಳನ್ನು ನೆಲಸಮಗೊಳಿಸಿ ಸುಮಾರು ಒಂದೂವರೆ ವರ್ಷಗಳು ಕಳೆದರೂ ಸಹ ಹೊಳೆನರಸೀಪುರ ವೃತ್ತ ನಿರೀಕ್ಷಕರ ಕಛೇರಿ ಕಟ್ಟಡ ಮತ್ತು ಸಬ್‌ಇನ್ಸ್‌ಪೆಕ್ಟರ್, ಗ್ರಾಮಾಂತರ ಪೊಲೀಸ್ ಠಾಣೆಯ ಕಟ್ಟಡಗಳ ನಿರ್ಮಾಣ ಕಾಮಗಾರಿಗಳು ಪ್ರಾರಂಭವಾಗದಿರಲು ಕಾರಣಗಳೇನು; ಹೊಳೇನರಸೀಪುರ ವೃತ್ತ ನಿರೀಕ್ಷಕರ ಕಛೇರಿ ಕಟ್ಟಡ ಮತ್ತು ಸಬ್ ಇನ್ಸ್‌ಪೆಕ್ಟರ್, ಗ್ರಾಮಾಂತರ ಪೊಲೀಸ್ ಠಾಣೆಯ ಕಟ್ಟಡಗಳ ನಿರ್ಮಾಣ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | ಹೊಳೆನರಸೀಪುರ ವೃತ್ತ ನಿರೀಕ್ಷಕರ ಕಛೇರಿ ಕಟ್ಟಡ ಮತ್ತು ಸಬ್‌ಇನ್ಸ್‌ಪೆಕ್ಟರ್, ಗ್ರಾಮಾಂತರ ಪೊಲೀಸ್ ಠಾಣೆಯ ಕಟ್ಟಡಗಳನ್ನು ಅಗತ್ಯಕ್ಕನುಗುಣವಾಗಿ ಹಾಗೂ ಅನುದಾನದ ಲಭ್ಯತೆಯನುಸಾರ ನಿರ್ಮಾಣ ಮಾಡಲು ಕ್ರಮಕೈಗೊಳ್ಳಲಾಗುವುದು. |

**ಸಂಖ್ಯೆ: ಹೆಚ್‌ಡಿ 11 ಪಿಬಿಎಲ್ 2021**

**[ಬಸವರಾಜ ಬೊಮ್ಮಾಯಿ]**
ಗೃಹ , ಕಾನೂನು ಮತ್ತು ಸಂಸದೀಯ
ವ್ಯವಹಾರಗಳ ಸಚಿವರು

# ಕರ್ನಾಟಕ ವಿಧಾನ ಸಭೆ

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 549 |
| **ಸದಸ್ಯರ ಹೆಸರು** | : | ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗ) |
| **ಉತ್ತರಿಸುವ ಸಚಿವರು** | : | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |
| **ಉತ್ತರಿಸಬೇಕಾದ ದಿನಾಂಕ** | : | 02.02.2021. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2018-19 ಹಾಗೂ 2019-20ನೇ ಸಾಲಿನ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದ ಬಿಡುಗಡೆಗೆ ಬಾಕಿ ಇರುವ ಕಂತುಗಳನ್ನು ಇದುವರೆಗೂ ಬಿಡುಗಡೆ ಮಾಡದಿರಲು ಕಾರಣವೇನು; | ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನದಲ್ಲಿ ಬಿಡುಗಡೆಯಾಗಿರುವ ಅನುದಾನ ಹಾಗೂ ಆರಂಭಿಕ ಶಿಲ್ಕು ಸೇರಿ ಒಟ್ಟಾರೆ ಲಭ್ಯವಿರುವ ಅನುದಾನದಲ್ಲಿ ಶೇಕಡ 75 ರಷ್ಟು ವೆಚ್ಚ ಭರಿಸಿದ ನಂತರ ಉಳಿದ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುತ್ತದೆ.<br><br>2018-19ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ರೂ.830.67 ಕೋಟಿಗಳ ಅನುದಾನ ಫೆಬ್ರುವರಿ-2019ರ ಅಂತ್ಯದವರೆಗೆ ಇರುವ ಕಾರಣ ನಾಲ್ಕನೆಯ ಕಂತಿನ ಅನುದಾನ ರೂ.127.69 ಕೋಟಿಗಳನ್ನು ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ.<br><br>2019-20ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ರೂ.751.16 ಕೋಟಿಗಳ ಅನುದಾನ ಫೆಬ್ರುವರಿ-2020ರ ಅಂತ್ಯದವರೆಗೆ ಇರುವ ಕಾರಣ ಮೂರು ಮತ್ತು ನಾಲ್ಕನೆಯ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ. |
| ಆ) | ಜಿಲ್ಲಾಧಿಕಾರಿಗಳ ಪಿ.ಡಿ ಖಾತೆಯಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ಬಾಕಿ ಇರುವ ಅನುದಾನದ ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು) | 2019-20ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ಫೆಬ್ರುವರಿ-2020ರ ಅಂತ್ಯದವರೆಗೆ ರೂ.751.16 ಕೋಟಿಗಳ ಅನುದಾನವು ಬಾಕಿ ಇರುತ್ತದೆ. ಸದರಿ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಇ) | ಬಾಕಿ ಇರುವ ಅನುದಾನ ಯಾವ ಸಾಲಿಗೆ ಸಂಬಂಧಿಸಿದ್ದು; ಹಾಗೂ ಇದು ಬಾಕಿ ಉಳಿಸಿಕೊಂಡಿರಲು ಕಾರಣವೇನು; | 2018-19 ಹಾಗೂ 2019-20ನೇ ಸಾಲಿಗೆ ಸಂಬಂಧಿಸಿದ ಅನುದಾನ ಬಾಕಿ ಇರುತ್ತದೆ. ಮಾನ್ಯ ಶಾಸಕರು ನಿಗದಿತ ಕಾಲಾವಧಿಯಲ್ಲಿ ಕಾಮಗಾರಿಗಳ ಪಟ್ಟಿ ನೀಡದಿರುವುದು, ಅಭಿಯಂತರರುಗಳು ಅಂದಾಜು ತಯಾರಿಸಿ ತಾಂತ್ರಿಕ, ಆಡಳಿತಾತ್ಮಕ ಅನುಮೋದನೆ ಪಡೆಯಲು ವಿಳಂಬವಾಗಿರುವುದು. ಗುತ್ತಿಗೆದಾರರ ನೇಮಕದಲ್ಲಿ ವಿಳಂಬ, ಟೆಂಡರ್ ಪ್ರಕ್ರಿಯೆಯಲ್ಲಿ ವಿಳಂಬ, ಮುಂತಾದ ಕಾರಣಗಳಿಂದ ಕಾಮಗಾರಿಗಳು ಪೂರ್ಣವಾಗದೆ ಅನುದಾನ ಬಾಕಿ ಉಳಿದಿರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಈ) | ಈ ಪಿ.ಡಿ.ಖಾತೆಯಲ್ಲಿ ಬಾಕಿ ಇರುವ ಅನುದಾನವನ್ನು ಗಮನದಲ್ಲಿರಿಸಿಕೊಂಡು 2018-19 ಹಾಗೂ 2019-20ನೇ ಸಾಲಿನಲ್ಲಿ ಬಿಡುಗಡೆಗೆ ಬಾಕಿ ಇರುವ ಕಂತುಗಳನ್ನು ಬಿಡುಗಡೆಗೊಳಿಸದೆ ಸ್ಥಗಿತಗೊಳಿಸಿರುವುದಕ್ಕೆ ಕಾರಣವೇನು; | ಆರಂಭಿಕ ಶಿಲ್ಕು ಮತ್ತು ಬಿಡುಗಡೆಯಾದಅನುದಾನ ಸೇರಿ ಒಟ್ಟಾರೆ ಲಭ್ಯವಿರುವಅನುದಾನದಲ್ಲಿ ಶೇಕಡ 75 ರಷ್ಟು ವೆಚ್ಚವಾಗದ ಕಾರಣ ಉಳಿದ ಕಂತುಗಳ ಅನುದಾನವನ್ನು ಆರ್ಥಿಕ ಇಲಾಖೆ ಬಿಡುಗಡೆಗೊಳಿಸಿರುವುದಿಲ್ಲ. |
| ಉ) | ಈ ಕುರಿತು ಜಿಲ್ಲಾಧಿಕಾರಿಗಳಿಗೆ ನಿರ್ದೇಶನವನ್ನೇನಾದರೂ ನೀಡಲಾಗಿದೆಯೇ; (ನೀಡದ್ದಲ್ಲಿ ಪ್ರತಿಯನ್ನು ಒದಗಿಸುವುದು) | ಬಿಡುಗಡೆಯಾದ ಅನುದಾನವು ನಿಗಧಿತ ಕಾಲಾವಧಿಯಲ್ಲಿ ವೆಚ್ಚ ಮಾಡಲು ದಿನಾಂಕ:04.02.2020ರಂದು ಮಾನ್ಯ ಮುಖ್ಯಮಂತ್ರಿಯವರು ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ದಿನಾಂಕ:23.06.2020ರಂದು ಪತ್ರದ ಮೂಲಕ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). |

**ಸಂಖ್ಯೆ:ಪಿಡಿಎಸ್ 5 ಕೆಎಲ್ಎಸ್ 2021**

**(ಕೆ.ಸಿ.ನಾರಾಯಣಗೌಡ)**
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

## ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1025

ಸದಸ್ಯರ ಹೆಸರು : ಶ್ರೀ ಗುತ್ತೇದಾರ್ ಸುಭಾಷ್ ರುಕ್ಕಯ್ಯ

ಉತ್ತರಿಸುವ ದಿನಾಂಕ : 02.02.2021

ಉತ್ತರಿಸುವ ಸಚಿವರು : ಮುಖ್ಯ ಮಂತ್ರಿಗಳು

| ಕ್ರ.ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದ ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಲ್ಯಾಣ ಕರ್ನಾಟಕ ಪ್ರದೇಶದ ವ್ಯಾಪ್ತಿಯನೌಕರರಿಗೆ ಬಡ್ತಿ ನೀಡುವ ಸಮಯದಲ್ಲಿ ಕಲಂ 371ಜೆ ಪರಿಗಣಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದಯೇ: | ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013 ರನ್ವಯ ಕಲ್ಯಾಣ ಕರ್ನಾಟಕ ವೃಂದಗಳಲ್ಲಿ ಪರಿಗಣಿಸಲು ಇಚ್ಛಿಸಿದ ಅಧಿಕಾರಿ / ನೌಕರರುಗಳಿಗೆ ಕಡ್ಡಾಯವಾಗಿ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದವರಿಗಾಗಿ ಮೀಸಲಿರಿಸಿರುವ ಹುದ್ದೆಗಳಿಗೆ ಬಡ್ತಿ ನೀಡಲು ಪರಿಗಣಿಸಬೇಕಾಗುತ್ತದೆ. ಈ ಕುರಿತಂತೆ ಎಲ್ಲಾ ಇಲಾಖೆಗಳಿಗೆ ಸರ್ಕಾರದ ಸುತ್ತೋಲೆ ಮುಖೇನ ಸ್ಪಷ್ಟ ಸೂಚನೆ ನೀಡಿದ್ದು, ಅದರಂತೆ ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದಲ್ಲಿ ಗುರುತಿಸಿಕೊಂಡಿರುವ ಅಧಿಕಾರಿ ನೌಕರರಿಗೆ ಇಲಾಖೆಗಳಲ್ಲಿ ಮುಂಬಡ್ತಿ ನೀಡಲಾಗುತ್ತಿದೆ. ಆದಾಗಿಯೂ, ಕೆಲವು ಇಲಾಕೆಗಳಲ್ಲಿ ಬಡ್ತಿ ನೀಡುವ ಸಮಯದಲ್ಲಿ ಅನುಚ್ಛೇದ 371ಜೆ ಪರಿಗಣಿಸದೇ ಇರುವ ಬಗ್ಗೆ ಸಿಆಸುಇ ( ಹೈ-ಕ ವಿಶೇಷ ಕೋಶ)ದಲ್ಲಿ ಕೆಲವು ವೈಯಕ್ತಿಕ ಮನವಿಗಳು ಸ್ವೀಕೃತವಾಗಿದ್ದು, ಈ ರೀತಿ ಸ್ವೀಕೃತವಾದ ಮನವಿಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಕಳುಹಿಸಿ ಅರ್ಹತೆಯನುಸಾರ ಮುಂಬಡ್ತಿಗೆ ಪರಿಗಣಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ.<br><br>ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿನ ಸಭೆಯಲ್ಲಿ ಪ್ರತಿ ತಿಂಗಳೂ ಸಹ ಅನುಚ್ಛೇಧ 371(ಜೆ)ರ ಅನುಸಾರ ಹೊರಡಿಸಿರುವ ಆದೇಶಗಳನ್ವಯ ಅರ್ಹ |
| ಆ) | ಬಂದಿದ್ದಲ್ಲಿ, ಈ ಬಗ್ಗೆ ಯಾವ ಯಾವ ಕ್ರಮ ಕೈಗೊಳ್ಳಲಾಗುವುದು (ಸಂಪೂರ್ಣ ವಿವರ ನೀಡುವುದು) | |

| | | |
|---|---|---|
| | | ಅಧಿಕಾರಿ / ನೌಕರರಿಗೆ ಮುಂಬಡ್ತಿ ನೀಡುವುದರ ಇಲಾಖಾವಾರು ಪ್ರಗತಿ ಪರಿಶೀಲನೆ ನಡೆಸಲಾಗುತ್ತಿದೆ ಹಾಗೂ ನಿಯಮಾನುಸಾರ ನೀಡಬೇಕಾದ ಮುಂಬಡ್ತಿಗಳನ್ನು ಪ್ರಥಮಾದ್ಯತೆ ಮೇರೆಗೆ ನೀಡಲು ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ. |

ಸಂಖ್ಯೆ: ಸಿಆಸುಇ 23 ಹೈಕಕೋ 2021

(ಬಿ. ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

| | | |
|---|---|---|
| 1. | ಪ್ರಶ್ನೆ ಸಂಖ್ಯೆ | : 1026 |
| 2. | ಸದಸ್ಯರ ಹೆಸರು | : ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ |
| 3. | ಉತ್ತರಿಸಬೇಕಾದ ದಿನಾಂಕ | : 02-02-2021. |
| 4. | ಉತ್ತರಿಸುವ ಸಚಿವರು | : ಸಣ್ಣ ನೀರಾವರಿ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಕಲಬುರಗಿ ಜಿಲ್ಲೆ ಆಳಂದ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿರುವ ಕವಲಗಾ ಗ್ರಾಮ, ಕೋತನಹಿಪ್ಪರಗಾ ಮತ್ತು ವಳವಂಡವಾಡಿ ಗ್ರಾಮಗಳಲ್ಲಿ ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಹೊಸದಾಗಿ ಕೆರೆ ನಿರ್ಮಾಣ ಮಾಡಲು ಅನುದಾನ ಮಂಜೂರು ಮಾಡುವಂತೆ ಕೋರಿರುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ | ಬಂದಿದ್ದಲ್ಲಿ, ಯಾವಾಗ ಅನುದಾನ ಮಂಜೂರು ಮಾಡಿ, ಕಾಮಗಾರಿ ಗಳನ್ನು ಕೈಗೊಳ್ಳಲಾಗುವುದು? (ಸಂಪೂರ್ಣ ವಿವರ ನೀಡುವುದು) | 1.ಆಳಂದ ತಾಲ್ಲೂಕಿನ ಕವಲಗಾ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ನಿರ್ಮಾಣ ಕಾಮಗಾರಿಯ ರೂ. 1600.00 ಲಕ್ಷ ಮೊತ್ತದ ಅಂದಾಜು ಪಟ್ಟಿಯನ್ನು ದಿನಾಂಕ: 04-12-2019 ರಂದು ಜರುಗಿದ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯಲ್ಲಿ ಮಂಡಿಸಲಾಗಿದೆ. ಸದರಿ ಕಾಮಗಾರಿಯಿಂದ ಸುಮಾರು 225 ಹೆಕ್ಟರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಕಲ್ಪಿಸಬಹುದಾಗಿದೆ. ಅನುದಾನದ ಲಭ್ಯತೆ ಮೇರೆಗೆ ಕಾಮಗಾರಿಯನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.<br><br>2. ಆಳಂದ ತಾಲೂಕಿನ ಕೋತನಹಿಪ್ಪರಗಾ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ನಿರ್ಮಾಣ ಕಾಮಗಾರಿಗೆ 2010-11ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆ, ಎ.ಐ.ಬಿ.ಪಿ. ಅಡಿ ರೂ.660.00 ಲಕ್ಷ ಅಂದಾಜು ಮೊತ್ತದ ಕಾಮಗಾರಿಗೆ ಅನುಮೋದನೆ ನೀಡಲಾಗಿರುತ್ತದೆ. ಸದರಿ ಯೋಜನೆಯಡಿಯಲ್ಲಿ ಬರುವ ರೈತರು ಭೂ ಪರಿಹಾರ ಸಂದಾಯವಾಗುವವರೆಗೂ ಕೆಲಸ ಮಾಡಲು ತಡೆಯೊಡ್ಡಿರುತ್ತಾರೆ. ಸದರಿ ಕಾಮಗಾರಿಗೆ ಅವಶ್ಯಕವಾದ 148 ಎಕರೆ 05 ಗುಂಟೆ ಭೂಸ್ವಾಧೀನಕ್ಕಾಗಿ ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ ರೂ.409.60 ಲಕ್ಷ ಠೇವಣಿ ಮಾಡಲಾಗಿರುತ್ತದೆ. ಹಾಗೂ ಇದುವರೆಗೆ ಪ್ರತಿಶತ 98 ರಷ್ಟು ಭೂಮಾಲಿಕರಿಗೆ ಹಣ ಸಂದಾಯವಾಗಿರುತ್ತದೆ.<br><br>ಕೇಂದ್ರ ಪುರಸ್ಕೃತ ಯೋಜನೆಯು ಸ್ಥಗಿತಗೊಂಡಿರುವ ಕಾರಣ, ಸದರಿ ಗುತ್ತಿಗೆದಾರರ ಗುತ್ತಿಗೆಯನ್ನು ದಿನಾಂಕ:03-03-2016 ರಂದು ಸಮಾಪ್ತಿಗೊಳಿಸಲಾಗಿರುತ್ತದೆ. |

| | | |
|---|---|---|
| | | ಸದರಿ ಕಾಮಗಾರಿಯ ರೂ.1400.60 ಲಕ್ಷ ಮೊ ತ ಪರಿಷ್ಕೃತ ಅಂದಾಜು ಪಟ್ಟಿಯನ್ನು ದಿನಾಂಕ:04-12-2019 ರಂದು ನಡೆದ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಸಭೆಯಲ್ಲಿ ಮಂಡಿಸಲಾಗಿದೆ. ಪ್ರಸ್ತಾವನೆ ಪರಿಶೀಲನೆಯಲ್ಲಿದೆ.<br><br>3. ಆಳಂದ ತಾಲ್ಲೂಕಿನ ವಳವಂಡವಾಡಿ ಗ್ರಾಮದ ಹತ್ತಿರ ರೂ. 1000.00 ಲಕ್ಷ ಅಂದಾಜು ಮೊತ್ತದಲ್ಲಿ ಸಣ್ಣ ನೀರಾವರಿ ಕೆರೆ ನಿರ್ಮಾಣ ಕಾಮಗಾರಿಯ ಅಂದಾಜು ಪಟ್ಟಿಯನ್ನು ದಿನಾಂಕ:04.12.2019ರಂದು ಜರುಗಿದ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಸಭೆಯಲ್ಲಿ ಮಂಡಿಸಿ ತಿರುವಳಿಯನ್ನು ಪಡೆಯಲಾಗಿದೆ. ಸದರಿ ಕಾಮಗಾರಿಯಿಂದ ಸುಮಾರು 250 ಹೆಕ್ಟರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಕಲ್ಪಿಸಬಹುದಾಗಿದೆ.<br>ಅನುದಾನ ಲಭ್ಯತೆಯನ್ನಾಧರಿಸಿ ಕಾಮಗಾರಿಯನ್ನು ಕೈಗೊಳ್ಳುವ ಕುರಿತು ಪರಿಶೀಲಿಸಲಾಗುವುದು. |

**ಸಂಖ್ಯೆ: ಸನೀಇ 39 ವಿಸವಿ 2021.**

**(ಜೆ.ಸಿ.ಮಾಧುಸ್ವಾಮಿ,)**
ಸಣ್ಣ ನೀರಾವರಿ ಸಚಿವರು.

## ಕರ್ನಾಟಕ ವಿಧಾನ ಸಭೆ

| | | | |
|---|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 384 |
| 02. | ಸದಸ್ಯರ ಹೆಸರು | : | ಡಾ॥ ಭರತ್ ಶೆಟ್ಟಿ. ವೈ (ಮಂಗಳೂರು ನಗರ ಉತ್ತರ) |
| 03. | ಉತ್ತರಿಸುವ ದಿನಾಂಕ | : | 02.02.2021 |
| 04. | ಉತ್ತರಿಸುವ ಸಚಿವರು | : | ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು, ಮಂಗಳೂರು ಹಾಗೂ ಉಡುಪಿ ಜಿಲ್ಲೆಗಳಲ್ಲಿ ಪೊಲೀಸ್ ಇಲಾಖೆಯಲ್ಲಿ 2019–2020ನೇ ಸಾಲಿನಲ್ಲಿ ಭರ್ತಿ ಮಾಡಿದ ಹುದ್ದೆಗಳ ಸಂಖ್ಯೆ ಎಷ್ಟು; | 2019–2020ನೇ ಸಾಲಿನಲ್ಲಿ ಭರ್ತಿ ಮಾಡಿದ ಹುದ್ದೆಗಳ ವಿವರ ಹೀಗಿದೆ.<br>ಜಿಲ್ಲೆ \| ಸಿ.ಪಿ.ಸಿ. \| ಎ.ಪಿ.ಸಿ<br>ಕೊಡಗು \| 79 \| 54<br>ಮಂಗಳೂರು \| 73 \| 0<br>ಉಡುಪಿ \| 101 \| 0 |
| ಆ) | ಭರ್ತಿ ಮಾಡಿದ ಹುದ್ದೆಗಳಲ್ಲಿ ಸ್ಥಳೀಯರಿಗೆ ನೀಡಿದ ಹುದ್ದೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಭರ್ತಿ ಮಾಡಿದ ಹುದ್ದೆಗಳಲ್ಲಿ ಸ್ಥಳೀಯರಿಗೆ ನೀಡಿದ ಹುದ್ದೆಗಳ ವಿವರ ಹೀಗಿದೆ.<br>ಜಿಲ್ಲೆ \| ಸಿ.ಪಿ.ಸಿ. \| ಎ.ಪಿ.ಸಿ<br>ಕೊಡಗು \| 6 \| 3<br>ಮಂಗಳೂರು \| 5 \| 0<br>ಉಡುಪಿ \| 4 \| 0 |
| ಇ) | ಭರ್ತಿ ಮಾಡಿದ ಹುದ್ದೆಗಳ ಪೈಕಿ ಬೇರೆ ಜಿಲ್ಲೆಗಳಿಂದ ಬಂದ ಎಷ್ಟು ಅಭ್ಯರ್ಥಿಗಳಿಗೆ ಉದ್ಯೋಗ ನೀಡಲಾಗಿದೆಯೇ; (ಜಿಲ್ಲಾವಾರು ಮಾಹಿತಿ ನೀಡುವುದು) | ಅನುಬಂಧ–1ರಲ್ಲಿ ನೀಡಿದೆ. |
| ಈ) | ಹುದ್ದೆಗಳನ್ನು ಭರ್ತಿ ಮಾಡಿದ ನಂತರ ಭಾಷೆ, ಸಮಸ್ಯೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ. |
| ಉ) | ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಅನ್ವಯಿಸುವುದಿಲ್ಲ. |
| ಊ) | ಕೊಡಗು, ಮಂಗಳೂರು ಹಾಗೂ ಉಡುಪಿ ಜಿಲ್ಲೆಗಳಲ್ಲಿ ತುಳು ಭಾಷೆ ಹೆಚ್ಚು ಮಾತನಾಡುತ್ತಿರುವುದರಿಂದ ಶೇಕಡ 60% ರಷ್ಟು ತುಳು ಭಾಷಿಕರನ್ನು ಭರ್ತಿ ಮಾಡುವ ಯೋಜನೆ ಸರ್ಕಾರಕ್ಕಿದೆಯೇ? | ಇರುವುದಿಲ್ಲ. |

ಒಇ/08/ಪಿಪಿಎಸ್/2021

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನೆ ಸಚಿವರು

**ಅನುಬಂಧ – 1**

## ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

| ಕ್ರ. ಸಂ. | ಜಿಲ್ಲೆ | ಸಿ.ಪಿ.ಸಿ. | ಎ.ಪಿ.ಸಿ. |
|---|---|---|---|
| 1. | ಬಾಗಲಕೋಟೆ | 10 | 0 |
| 2. | ವಿಜಯಪುರ | 7 | 0 |
| 3. | ತುಮಕೂರು | 1 | 0 |
| 4. | ಯಾದಗಿರಿ | 1 | 0 |
| 5. | ರಾಯಚೂರು | 2 | 0 |
| 6. | ಹಾವೇರಿ | 1 | 0 |
| 7. | ಕಲಬುರಗಿ | 4 | 0 |
| 8. | ಚಿತ್ರದುರ್ಗ | 1 | 0 |
| 9. | ಬೆಂಗಳೂರು ನಗರ | 1 | 0 |
| 10. | ಬೀದರ್ | 1 | 0 |
| 11. | ಹಾಸನ | 7 | 0 |
| 12. | ಬಳ್ಳಾರಿ | 4 | 0 |
| 13. | ಬೆಳಗಾವಿ | 4 | 0 |
| 14. | ಉತ್ತರ ಕನ್ನಡ | 2 | 0 |
| 15. | ಗದಗ | 6 | 0 |
| 16. | ಕೊಪ್ಪಳ | 1 | 0 |
| 17. | ಧಾರವಾಡ | 1 | 0 |
| 18. | ಮೈಸೂರು | 1 | 0 |
| 19. | ಶಿವಮೊಗ್ಗ | 5 | 0 |
| 20. | ಚಿಕ್ಕಬಳ್ಳಾಪುರ | 1 | 0 |
| 21. | ಕೊಡಗು | 2 | 0 |
| 22. | ದಾವಣಗೆರೆ | 4 | 0 |
| 23. | ಚಿಕ್ಕಮಗಳೂರು | 1 | 0 |

## ಕೊಡಗು ಜಿಲ್ಲೆ

| ಕ್ರ. ಸಂ. | ಜಿಲ್ಲೆ | ಸಿ.ಪಿ.ಸಿ. | ಎ.ಪಿ.ಸಿ. |
|---|---|---|---|
| 1. | ಶಿವಮೊಗ್ಗ | 3 | 0 |
| 2. | ಚಿಕ್ಕಮಗಳೂರು | 3 | 0 |
| 3. | ಮೈಸೂರು | 10 | 10 |
| 4. | ಹಾಸನ | 13 | 7 |
| 5. | ವಿಜಯಪುರ | 10 | 0 |
| 6. | ಬಳ್ಳಾರಿ | 2 | 1 |
| 7. | ಚಾಮರಾಜನಗರ | 2 | 1 |
| 8. | ಗದಗ | 3 | 1 |

| | | | |
|---|---|---|---|
| 9. | ಬೆಳಗಾವಿ | 8 | 7 |
| 10. | ಚಿಕ್ಕಬಳ್ಳಾಪುರ | 1 | 0 |
| 11. | ಚಿತ್ರದುರ್ಗ | 2 | 0 |
| 12. | ಹಾವೇರಿ | 1 | 5 |
| 13. | ದಾವಣಗೆರೆ | 2 | 0 |
| 14. | ರಾಯಚೂರು | 3 | 2 |
| 15. | ಬೀದರ್ | 1 | 1 |
| 16. | ರಾಮನಗರ | 1 | 0 |
| 17. | ಯಾದಗಿರಿ | 1 | 1 |
| 18. | ಕೊಪ್ಪಳ | 1 | 0 |
| 19. | ಮಂಡ್ಯ | 1 | 2 |
| 20. | ತುಮಕೂರು | 0 | 4 |
| 21. | ಬೆಂಗಳೂರು ಜಿಲ್ಲೆ | 0 | 1 |
| 22. | ಬಾಗಲಕೋಟೆ | 0 | 2 |

**ಉಡುಪಿ ಜಿಲ್ಲೆ**

| ಕ್ರ. ಸಂ. | ಜಿಲ್ಲೆ | ಸಿ.ಪಿ.ಸಿ. | ಎ.ಪಿ.ಸಿ. |
|---|---|---|---|
| 1. | ಬಾಗಲಕೋಟೆ | 14 | 0 |
| 2. | ಬೆಳಗಾವಿ | 13 | 0 |
| 3. | ಬಳ್ಳಾರಿ | 8 | 0 |
| 4. | ಬೀದರ್ | 2 | 0 |
| 5. | ಚಿಕ್ಕಬಳ್ಳಾಪುರ | 1 | 0 |
| 6. | ಚಿಕ್ಕಮಗಳೂರು | 4 | 0 |
| 7. | ಚಿತ್ರದುರ್ಗ | 2 | 0 |
| 8. | ದಾವಣಗೆರೆ | 4 | 0 |
| 9. | ಧಾರವಾಡ | 2 | 0 |
| 10. | ಗದಗ | 3 | 0 |
| 11. | ಹಾಸನ | 3 | 0 |
| 12. | ಹಾವೇರಿ | 4 | 0 |
| 13. | ಕಲಬುರಗಿ | 4 | 0 |
| 14. | ಕೊಪ್ಪಳ | 3 | 0 |
| 15. | ಮೈಸೂರು | 1 | 0 |
| 16. | ರಾಯಚೂರು | 7 | 0 |
| 17. | ರಾಮನಗರ | 1 | 0 |
| 18. | ಶಿವಮೊಗ್ಗ | 6 | 0 |
| 19. | ತುಮಕೂರು | 3 | 0 |
| 20. | ಉತ್ತರ ಕನ್ನಡ | 1 | 0 |
| 21. | ವಿಜಯಪುರ | 9 | 0 |
| 22. | ಯಾದಗಿರಿ | 2 | 0 |

# ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 386
2. ಪ್ರಶ್ನೆ ಮಂಡಿಸಿರುವವರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್
3. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಯವರು
4. ಉತ್ತರಿಸ ಬೇಕಾದ ದಿನಾಂಕ : 02/02/2021

| ಪ್ರ ಸಂ | ಪ್ರಶ್ನೆ | ಉತ್ತರ |
|---|---|---|
| 01 | ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಯಾವ ಯಾವ ಕಾಯಿಲೆಗಳಿಗೆ ಚಿಕಿತ್ಸೆ ಪಡೆದ ಬಡ ರೋಗಿಗಳಿಗೆ ಧನ ಸಹಾಯ ನೀಡಲಾಗುತ್ತಿದೆ. ಇದರ ಮಾನದಂಡಗಳೇನು (ಆದೇಶದ ಪ್ರತಿ ಒದಗಿಸುವುದು) | ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕಿಡ್ನಿ, ಕ್ಯಾನ್ಸರ್, ಹೃದಯ, ಮೆದುಳು, ಯಕೃತ್ ಸಂಬಂಧಿತ ಮಾರಣಾಂತಿಕ ಕಾಯಿಲೆಗಳು ಮತ್ತು ಗಂಭೀರ ಕಾಯಿಲೆಗಳಿಗೆ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿರುವಂತಹ ಪ್ರಕರಣಗಳಿಗೆ ಧನ ಸಹಾಯ ನೀಡಲಾಗುತ್ತಿದೆ. ಆದೇಶ ಪ್ರತಿಯನ್ನು ಮಾಹಿತಿಗಾಗಿ ಒದಗಿಸಲಾಗಿದೆ. |
| 02 | ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಧನ ಸಹಾಯ ಕೋರಿ ಬರುವ ಅರ್ಜಿಗಳ ವಿಲೇವಾರಿ ತೀವ್ರ ವಿಳಂಬಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? | ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಲ್ಲಿಕೆಯಾಗುತ್ತಿರುವ ಅರ್ಜಿಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬವಾಗುತ್ತಿರುವುದಿಲ್ಲ. ಪರಿಹಾರ ಮಂಜೂರು ಮಾಡಲು ನಿಗಧಿಪಡಿಸಿರುವ ಅವಶ್ಯ ದಾಖಲೆಗಳನ್ನು ಸಲ್ಲಿಸಿದಲ್ಲಿ ಅರ್ಜಿದಾರರ ಖಾತೆಗೆ ನೇರವಾಗಿ ಡಿ.ಬಿ.ಟಿ ಯೋಜನೆಯ ಮೂಲಕ ಪರಿಹಾರದ ಮೊತ್ತವನ್ನು ಯಾವುದೇ ಕಾಲ ವಿಳಂಬವಿಲ್ಲದೆ ಬಿಡುಗಡೆ ಮಾಡಲಾಗುತ್ತಿದೆ. |
| 03 | ಬಂದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು ? | -ಉದ್ಭವಿಸುವುದಿಲ್ಲ- |
| 04 | 2018-19ನೇ ಸಾಲಿನಿಂದ ಇಲ್ಲಿಯವರೆಗೆ ಶಾಸಕರ ಶಿಫಾರಸ್ಸಿನ ಮೇರೆಗೆ ಇಂಡಿ ವಿಧಾನಸಭಾ ಕ್ಷೇತ್ರದಿಂದ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ? ಎಷ್ಟು ಪ್ರಕರಣಗಳಿಗೆ ಧನ ಸಹಾಯ ಮಂಜೂರು ಮಾಡಲಾಗಿದೆ ? (ವಿವರ ಒದಗಿಸುವುದು) | ದಿನಾಂಕ : 01/04/2018 ರಿಂದ ದಿನಾಂಕ : 27/01/2021ರ ವರೆಗೂ ಇಂಡಿ ವಿಧಾನ ಸಭಾ ಕ್ಷೇತ್ರದ ಶಾಸಕರ ಶಿಫಾರಸ್ಸಿನ ಮೇರೆಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ಕೋರಿ ಒಟ್ಟು 250 ಅರ್ಜಿಗಳು ಸಲ್ಲಿಕೆಯಾಗಿರುತ್ತವೆ. ಈ ಪೈಕಿ 160 ಅರ್ಜಿಗಳಿಗೆ ಪರಿಹಾರದ ಮೊತ್ತವನ್ನು ವಿತರಿಸಲಾಗಿರುತ್ತದೆ. ಅನುಬಂಧ-1ರಲ್ಲಿ ವಿವರ ಒದಗಿಸಲಾಗಿದೆ. |
| 05 | ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಫಲಾನುಭವಿಗಳಿಗೆ ಕೆಲವೊಂದು ತಾಂತ್ರಿಕ ತೊಂದರೆಗಳಿಂದಾಗಿ ವಿಳಂಬವಾಗಿ ತಲುಪಿದ ಚೆಕ್‌ಗಳು (ಕೋವಿಡ್-19 ಲಾಕ್ ಡೌನ್) ಹಾಗೂ ಚೆಕ್‌ನ ದಿನಾಂಕದ ಅವಧಿ ಮುಗಿದು ಪುನಃ ನವೀಕರಣ ಮಾಡಿ ಹೊಸದಾಗಿ ಚೆಕ್ ನೀಡಲು ಬಂದಿರುವ ಪ್ರಸ್ತಾವನೆಗಳು ಎಷ್ಟು ? ಹಾಗೂ ಬಾಕಿ ಇರುವ ಪ್ರಕರಣಗಳು ಎಷ್ಟು ? (ಸಂಪೂರ್ಣ ವಿವರ ಒದಗಿಸುವುದು) | ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಫಲಾನುಭವಿಗಳಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ವಿತರಿಸಲಾಗಿರುವ ಧನಾದೇಶಗಳಲ್ಲಿ 16 ಧನಾದೇಶಗಳು ತಾಂತ್ರಿಕ ಕಾರಣಗಳಿಂದ ನಗಧೀಕರಣಗೊಳ್ಳದೆ ಹಿಂದಿರುಗಿದ್ದು, ಸದರಿ ಧನಾದೇಶಗಳ ಪೈಕಿ 12 ಧನಾದೇಶಗಳ ಕುರಿತು ಕಡತ ಮಂಡನೆಯಾಗಿ ಧನಾದೇಶ / ಡಿ.ಬಿ.ಟಿ ಯೋಜನೆಯ ಮೂಲಕ ಪರಿಹಾರದ ಮೊತ್ತವನ್ನು ಫಲಾನುಭವಿಯ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಲಾಗಿರುತ್ತದೆ. ಅನುಬಂಧ-1ರಲ್ಲಿ ವಿವರ ಒದಗಿಸಲಾಗಿದೆ. |
| 06 | 2018ನೇ ಸಾಲಿನಿಂದ ಇಲ್ಲಿಯವರೆಗೆ ಸದರಿ ಚೆಕ್‌ಗಳನ್ನು ಪುನಃ ನವೀಕರಣ ಮಾಡಿ ಹೊಸದಾಗಿ ಚೆಕ್ ನೀಡದಿರಲು ಕಾರಣಗಳೇನು ? (ವಿವರ ಒದಗಿಸುವುದು) | 2018ನೇ ಸಾಲಿನಿಂದ ಇಲ್ಲಿಯವರೆಗೂ ಮುಖ್ಯಮಂತ್ರಿಗಳ ಪರಿಹಾರ ನಿಧಿ ಶಾಖೆಯಲ್ಲಿ ಸ್ವೀಕೃತಿಯಾಗಿ ಮರು ಪಾವತಿ ಮಾಡದಿರುವ ಧನಾದೇಶಗಳಿಗೆ ಸಂಬಂಧಿಸಿದಂತೆ 4 ಧನಾದೇಶಗಳ ಮೊತ್ತ ತಾಂತ್ರಿಕ ಕಾರಣದಿಂದ ಫಲಾನುಭವಿಯ ಬ್ಯಾಂಕ್ ಖಾತೆಗೆ ವರ್ಗಾಯಿಸಲು ಸಾಧ್ಯವಾಗಿರುವುದಿಲ್ಲ. ಕಾರಣ ಸದರಿ ಫಲಾನುಭವಿಯ ಆಧಾರ್ ಗುರುತಿನ ಚೀಟಿ ಬ್ಯಾಂಕ್ ಖಾತೆಗೆ ಜೋಡಣೆ ಆಗಿರುವುದಿಲ್ಲ ತಾಂತ್ರಿಕ ಕಾರಣಗಳನ್ನು ಹೊರತುಪಡಿಸಿ ಹಿಂದಿರುಗಿರುವ ಎಲ್ಲಾ ಧನಾದೇಶಗಳನ್ನು ನವೀಕರಿಸಿ ವಿತರಿಸಲಾಗಿರುತ್ತದೆ ಹಾಗೂ ದಿನಾಂಕ : 01/04/2020ರ ನಂತರ ಫಲಾನುಭವಿಯ ಬ್ಯಾಂಕ್ ಖಾತೆಗೆ ನೇರವಾಗಿ ಪರಿಹಾರದ ಮೊತ್ತವನ್ನು ವರ್ಗಾಯಿಸಲಾಗಿರುತ್ತದೆ. |
| 07 | ಬಾಕಿ ಇರುವ ಅರ್ಜಿಗಳ ವಿಲೇವಾರಿಯನ್ನು ಹಾಗೂ ಬದಲಿ ಚೆಕ್‌ಗಳನ್ನು ಯಾವ ಕಾಲಮಿತಿಯೊಳಗೆ ಬಡ ರೋಗಿಗಳ ಫಲಾನುಭವಿಗಳಿಗೆ ತಲುಪಿಸಲಾಗುವುದು ? (ವಿವರ ಒದಗಿಸುವುದು) | ಅವಶ್ಯ ದಾಖಲೆಗಳನ್ನು ಸಲ್ಲಿಸುವಂತಹ ಪ್ರಕರಣಗಳಿಗೆ ಶೀಘ್ರಗತಿಯಲ್ಲಿ ಪರಿಹಾರವನ್ನು ಬಿಡುಗಡೆ ಮಾಡಲಾಗುತ್ತದೆ. ಬದಲಿ ಚೆಕ್‌ಗಳಿಗೆ ಸಂಬಂಧಿಸಿದಂತೆ ಫಲಾನುಭವಿ ಆಧಾರ್ ಗುರುತಿನ ಚೀಟಿಗೆ ಬ್ಯಾಂಕ್ ಖಾತೆಯನ್ನು ಜೋಡಣೆ ಮಾಡಿ ಮಾಹಿತಿ ನೀಡಿದ ತಕ್ಷಣವೇ ವಿಲೇವಾರಿ ಮಾಡಲಾಗುತ್ತದೆ. ಅರ್ಜಿಗಳ ವಿಲೇವಾರಿಗೆ ಯಾವುದೇ ಕಾಲಮಿತಿಯನ್ನು |

| | | |
|---|---|---|
| | | ಅಳವಡಿಸಲಾಗಿರುವುದಿಲ್ಲ. ನಿಗಧಿತ ದಾಖಲೆಗಳು ಸಲ್ಲಿಕೆಯಾಗಿ ಪರಿಹಾರ ಬಿಡುಗಡೆ ಮಾಡುವ ಕುರಿತು ಈ ಕಛೇರಿ ಹಂತದಲ್ಲಿ ಯಾವುದೇ ಕಡತಗಳು ಬಾಕಿ ಇರುವುದಿಲ್ಲ. |
| 08 | ರಾಜ್ಯದ ಗಡಿ ಭಾಗದಲ್ಲಿರುವ ಜನರು ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ, ಪುಣೆ, ಮುಂಬೈ, ಸಾಂಗ್ಲಿ, ಮಿರಜ್ ಮೊದಲಾದ ಪಟ್ಟಣಗಳಲ್ಲಿ ಚಿಕಿತ್ಸೆ ಪಡೆದ ಬಡ ರೋಗಿಗಳಿಗೆ ಪರಿಹಾರ ಧನ ವಿತರಿಸದಿರಲು ಕಾರಣಗಳೇನು ? (ವಿವರ ಒದಗಿಸುವುದು) | ರಾಜ್ಯದಲ್ಲಿ ವಾಸವಿರುವ ಯಾವುದೇ ಜನರು ದೇಶದ ಯಾವುದಾದರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಿಗಧಿತ ದಾಖಲೆಗಳೊಂದಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಧನ ಸಹಾಯ ಕೋರಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಿ ಪರಿಹಾರ ವಿತರಿಸಲಾಗುತ್ತಿದೆ. |
| 09 | ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಅರ್ಜಿಗಳ ತೀವ್ರ ವಿಲೇವಾರಿಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು ? (ವಿವರ ಒದಗಿಸುವುದು) | ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಲ್ಲಿಕೆಯಾಗುವ ಅರ್ಜಿಗಳನ್ನು ಶೀಘ್ರಗತಿಯಲ್ಲಿ ವಿಲೆವಾರಿ ಮಾಡಲು ಆನ್‌ಲೈನ್ ತಂತ್ರಾಂಶವನ್ನು ಜಾರಿಗೆ ತರಲಾಗಿದೆ. ಅರ್ಜಿದಾರರು ಅಥವಾ ಅವರ ಪರವಾಗಿ ಶಿಫಾರಸ್ಸು ಮಾಡುವ ಶಾಸಕರುಗಳು / ಸಂಸದರುಗಳು ಅವರಿಗೆ ಒದಗಿಸಲಾಗುವ ಲಾಗಿನ್‌ಗಳ ಮೂಲಕ ವಿದ್ಯುನ್ಮಾನ ಅರ್ಜಿಯನ್ನು ಭರ್ತಿ ಮಾಡಿ ನಿಗಧಿತ ಮೂಲ ದಾಖಲೆಗಳನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿ ಶಾಖೆಗೆ ತಲುಪಿಸಿದಲ್ಲಿ ಯಾವುದೇ ಕಾಲವಿಳಂಬವಿಲ್ಲದೆ ಅರ್ಜಿದಾರರ ಆಧಾರ್ ಗುರುತಿನ ಚೀಟಿಯೊಂದಿಗೆ ಜೊಡಣೆಯಾಗಿರುವ ಬ್ಯಾಂಕ್ ಖಾತೆಗೆ ನೇರವಾಗಿ ಮಂಜೂರಾಗಿರುವ ಪರಿಹಾರದ ಮೊತ್ತವನ್ನು ವರ್ಗಾಯಿಸಲಾಗುತ್ತಿದೆ. |

ಸಿಎಂ/21/ಸಿಎಂಆರ್‌ಎಫ್/ಜಿಇಎನ್/2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

**ಅನುಬಂಧ-1**

ಮುಖ್ಯಮಂತ್ರಿಗಳ ಸಚಿವಾಲಯ

ಮುಖ್ಯಮಂತ್ರಿಗಳ ಪರಿಹಾರ ನಿಧಿ ಶಾಖೆ

ಶ್ರೀ ಯಶವಂತರಾಯಗೌಡ ಮಾನ್ಯ ವಿಧಾನ ಸಭೆ ಸದಸ್ಯರು ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 386/21ರ ಉತ್ತರಕ್ಕೆ ಸಂಬಂಧಿಸಿದಂತೆ

| ಕ್ರಸಂ | ವಿವರ | ದಿನಾಂಕ: 01/04/2018 ರಿಂದ 31/05/2020ರ ವರೆಗೂ | ದಿನಾಂಕ: 01/06/2020 ರಿಂದ 27/01/2020ರ ವರೆಗೂ | ಒಟ್ಟು | |
|---|---|---|---|---|---|
| 01 | ಸ್ವೀಕೃತಿಗೊಂಡಿರುವ ಒಟ್ಟು ಅರ್ಜಿಗಳು | 247 | 03 | A | 250 |
| 02 | ಧನಾದೇಶ / ಡಿ.ಬಿ.ಟಿ ಯೋಜನೆಯ ಮೂಲಕ ಪರಿಹಾರ ಬಿಡುಗಡೆ ಮಾಡಿರುವ ಒಟ್ಟು ಕಡತಗಳು | 155 | 03 | B | 158 |
| 03 | ಮೊತ್ತ | ರೂ.76,77,166/- | ರೂ.2,19,550 | C | ರೂ.78,96,716/- |
| 04 | ಭರವಸೆ ಪತ್ರ ಬಿಡುಗಡೆ ಮಾಡುರುವ ಒಟ್ಟು ಕಡತಗಳು | 02 | - | D | 02 (B+D=160) |
| 05 | ಮೊತ್ತ | 8,00,000/- | - | E | 8,00,000/- |
| 06 | ದಾಖಲೆಗಳನ್ನು ಕೋರಿ ಪತ್ರ ಬರೆದಿರುವ / ವಿಲೆಗೊಳಿಸಲಾಗಿರುವ / ಪರಿಶೀಲನೆ ಹಂತದಲ್ಲಿರುವ ಪ್ರಕರಣಗಳು | 85 | - | F | - |
| 07 | ಈ ಹಿಂದೆ ಪರಿಹಾರ ಪಡೆದು ಮತ್ತೊಮ್ಮೆ ಪರಿಹಾರ ಕೋರಿ ವಿಲೆಗೊಂಡಿರುವ ಕಡತಗಳು | 05 | - | G | - |
| 08 | ಹಿಂದಿರುಗಿರುವ ಒಟ್ಟು ಧನಾದೇಶಗಳು | 16 | - | H | - |
| 09 | ಹಿಂದಿರುಗಿರುವ ಧನಾದೇಶಗಳ ಪೈಕಿ ಮರು ಧನಾದೇಶ ವಿತರಿಸಲಾಗಿರುವ ಒಟ್ಟು ಕಡತಗಳು | 02 ಪ್ರಕರಣಗಳಿಗೆ ಧನಾದೇಶಗಳ ಮೂಲಕ ಮರು ಪಾವತಿಸಲಾಗಿದೆ. | 10 ಪ್ರಕರಣಗಳಿಗೆ ಡಿ.ಬಿ.ಟಿ ಯೋಜನೆಯ ಮೂಲಕ ಮರು ಪಾವತಿಸಲಾಗಿದೆ. | I | 10 ಪ್ರಕರಣಗಳಿಗೆ ಡಿ.ಬಿ.ಟಿ ಯೋಜನೆಯ ಮೂಲಕ ಮರು ಪಾವತಿಸಲಾಗಿದೆ. |
| 10 | ಹಿಂದಿರುಗಿರುವ ಧನಾದೇಶಗಳ ಪೈಕಿ ಪಾವತಿ ಮಾಡಲು ಬಾಕಿ ಇರುವ ಧನಾದೇಶಗಳ ಕುರಿತು ಮತ್ತು ಕಾರಣ | 04 | | | 3 ಪ್ರಕರಣಗಳಿಗೆ ಸಂಬಂಧಿಸಿದಂತೆ ಫಲಾನುಭವಿಯ ಆಧಾರ ಗುರುತಿನ ಚೀಟಿ ಬ್ಯಾಂಕ್ ಖಾತೆಗೆ ಜೋಡಣೆ ಯಾಗಿರುವುದಿಲ್ಲ ಹಾಗೂ 1 ಪ್ರಕರಣದಲ್ಲಿ ಎರಡನೇ ಬಾರಿ ಧನಾದೇಶ ನಗದೀಕರಣಗೊಳ್ಳದೆ ಹಿಂದಿರುಗಿರುತ್ತದೆ. ಆಧಾರ್ ಜೋಡಣೆ ಮಾಡುವ ಬಗ್ಗೆ ಮಾಹಿತಿ ಒದಗಿಸಲಾಗಿದೆ. |

ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ
(ಪರಿಹಾರ ನಿಧಿ)

415

# ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 415
ಸದಸ್ಯರ ಹೆಸರು : ಶ್ರೀ ಪ್ರಿಯಾಂಕ್ ಎಂ.ಖರ್ಗೆ(ಚಿತ್ತಾಪುರ)
ಉತ್ತರಿಸಬೇಕಾದ ದಿನಾಂಕ : 02.02.2021
ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸ | ವಿಷಯ | ಉತ್ತರ |
|---|---|---|
| ಅ) | ಕಳೆದ ವರ್ಷದಿಂದ ಕಲಬುರಗಿ ಜಿಲ್ಲೆಯಲ್ಲಿ ಮಾದಕ ವಸ್ತುಗಳ ಮಾರಾಟ, ಇಸ್ಪೀಟ್, ಮಟ್ಕಾ, ಮರಳು ಮಾಫಿಯಾ, ರಿಕ್ರಿಯೇಷನ್ ಕ್ಲಬ್, ಬೆಟ್ಟಿಂಗ್ ದಂಧೆ, ಕಳ್ಳತನ, ಕೊಲೆ, ದರೋಡೆ ಪ್ರಕರಣಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ, ಎಷ್ಟು ಪ್ರಕರಣಗಳು ದಾಖಲಾಗಿವೆ (ಪ್ರಕರಣವಾರು ಸಂಖ್ಯೆಯ ವಿವರ ನೀಡುವುದು); | ಕಳೆದ ವರ್ಷದಿಂದ ಕಲಬುರಗಿ ಜಿಲ್ಲೆಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯಾವಾರು ಹಾಗೂ ವರ್ಷವಾರು ವಿವರ ಈ ಕೆಳಗಿನಂತಿದೆ:- |

| ಕ್ರಸ | ವಿವರ | ವರ್ಷ | | |
|---|---|---|---|---|
| | | 2019 | 2020 | 2021 |
| 1 | ಮಾದಕ ವಸ್ತುಗಳ ಮಾರಾಟ | 13 | 28 | 0 |
| 2 | ಇಸ್ಪೀಟ್ | 180 | 212 | 07 |
| 3 | ಮಟ್ಕಾ | 182 | 291 | 27 |
| 4 | ಮರಳು ಮಾಫಿಯಾ | 252 | 182 | 20 |
| 5 | ರಿಕ್ರಿಯೇಷನ್ ಕ್ಲಬ್ | 0 | 0 | 0 |
| 6 | ಬೆಟ್ಟಿಂಗ್ ದಂದೆ | 04 | 02 | 0 |
| 7 | ಕಳ್ಳತನ | 159 | 172 | 20 |
| 8 | ಕೊಲೆ | 39 | 38 | 02 |
| 9 | ದರೋಡೆ | 05 | 02 | 0 |
| | **ಒಟ್ಟು** | **834** | **927** | **76** |

| ಕ್ರ.ಸ | ವಿಷಯ | ಉತ್ತರ |
|---|---|---|
| ಇ) | ಈ ಅಕ್ರಮ ಚಟುವಟಿಕೆಗಳನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಈ ಅಕ್ರಮ ಚಟುವಟಿಕೆಗಳನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ವಿವರ:-<br>1. ಕಲಬುರಗಿ ಜಿಲ್ಲೆಯಲ್ಲಿ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ಸಿಬ್ಬಂದಿಯವರನ್ನು ರಾತ್ರಿ ಗಸ್ತು, ಹಗಲು ಗಸ್ತು ಮತ್ತು ಪಿಕೆಟಿಂಗ್ ಕರ್ತವ್ಯಕ್ಕೆ ನೇಮಿಸಿ ಅಕ್ರಮ ಚಟುವಟಿಕೆಗಳನ್ನು ತಡೆಯಲು ಜಿಲ್ಲೆಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ಕಟ್ಟು ನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ.<br>2. ಅಕ್ರಮ ಮರಳು ಸಾಗಾಣಿಕೆಯಾಗದಂತೆ ಚೆಕ್ ಪೋಸ್ಟ್‌ಗಳು ಹಾಗೂ |

ಪಿಕೆಟಿಂಗ್ ಕರ್ತವ್ಯಕ್ಕೆ ಸಿಬ್ಬಂದಿಯವರನ್ನು ನೇಮಿಸಿದ್ದು ಇರುತ್ತದೆ.

3. ಅಕ್ರಮ ಮರಳು ಪ್ರಕರಣಗಳಲ್ಲಿ ಜಪ್ತಿ ಮಾಡಿದ ವಾಹನಗಳ ಆರ್.ಸಿ. ರದ್ದುಗೊಳಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡಲು ಸೂಚಿಸಲಾಗಿದೆ.

4. ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚಲು ಸ್ಥಳೀಯ ಎಂ.ಓ.ಬಿ. ಜನರು ಹಾಗೂ ಅಕ್ಕ ಪಕ್ಕದ ಜಿಲ್ಲೆ ಹಾಗೂ ರಾಜ್ಯಗಳಾದ ತೆಲಂಗಾಣಾ, ಮಹಾರಾಷ್ಟ್ರ ರಾಜ್ಯಗಳಿಗೆ ಭೇಟಿ ನೀಡಿ ಅಲ್ಲಿಯ ಎಂ.ಓ.ಬಿ. ಗಳನ್ನು ಚೆಕ್ ಮಾಡಿ ಪತ್ತೆ ಹಚ್ಚಲು ಅಧೀನ ಅಧಿಕಾರಿಯವರಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗಿ ಅಪರಾಧ ಪ್ರಕರಣಗಳ ಪತ್ತೆ ಕ್ರಮ ಪ್ರಗತಿಯಲ್ಲಿರುತ್ತದೆ.

5. ಕಲಬುರಗಿ ಜಿಲ್ಲಾ ಪೊಲೀಸ್ ಅಧೀಕ್ಷಕರ ಅಧೀನದಲ್ಲಿ ಬರುವ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಲಾಡ್ಜ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಯಾವುದೇ ತರಹದ ಅಕ್ರಮ ಚಟುವಟಿಕೆಗಳು ನಡೆಯದಂತೆ ಮೇಲಿಂದ ಮೇಲೆ ಲಾಡ್ಜ್ ಮತ್ತು ರೆಸ್ಟೋರೆಂಟ್‌ಗಳಿಗೆ ಭೇಟಿ ನೀಡಿ ನಿಗಾವಹಿಸಿಕೊಂಡು ಬರಲಾಗುತ್ತಿದೆ.

6. ಕ್ರಿಕೆಟ್ ಬೆಟ್ಟಿಂಗ್ ದಂಧೆಯ ಮೇಲೆ ತೀವ್ರವಾದ ನಿಗಾವಹಿಸಲಾಗಿ ಅಪರಾಧ ಸಭೆಗಳಲ್ಲಿ ಮತ್ತು ಪೊಲೀಸ್ ಠಾಣೆಗೆ ನಿರೀಕ್ಷಣೆ ವೇಳೆಗೆ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ಸೂಕ್ತ ಸೂಚನೆಗಳನ್ನು ನೀಡಲಾಗುತ್ತಿದೆ.

7. ಕೊಲೆ ಪ್ರಕರಣಗಳಲ್ಲಿ ಆರೋಪಿತರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು ಮತ್ತು ಸದರಿ ಕೊಲೆ ಆರೋಪಿತರ ವಿರುದ್ಧ ರೌಡಿ ಶೀಟ್‌ನ್ನು ತೆಗೆಯಲಾಗುತ್ತಿದ್ದು ಅವರ ಚಟುವಟಿಕೆಗಳ ಮೇಲೆ ನಿಗಾ ಇಡಲಾಗಿದೆ.

8. ಕೊಲೆ ಪ್ರಕರಣಗಳಲ್ಲಿ ಆರೋಪಿತರ ವಿರುದ್ಧ ಶೀಘ್ರದಲ್ಲಿ ದೋಷಾರೋಪಣೆ ಪತ್ರ ತಯಾರಿಸಿ ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ಸಲ್ಲಿಸಲಾಗುತ್ತಿದೆ.

9. ಕಲಬುರಗಿ ಜಿಲ್ಲೆಯ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಬರುವ ಪಟ್ಟಣ ಹಾಗೂ ಹಳ್ಳಿಗಳಿಗೆ ನೇಮಿಸಿದ ಬೀಟ್ ಸಿಬ್ಬಂದಿ ಹಾಗೂ ಬೀಟ್ ಮೇಲ್ವಿಚಾರಣೆ ಅಧಿಕಾರಿಯವರಿಂದ ಗುಪ್ತವಾಗಿ ಮಾಹಿತಿಯನ್ನು ಸಂಗ್ರಹಿಸಿ ಮುಂಜಾಗ್ರತಾ ಕ್ರಮಗಳನ್ನು ಜರುಗಿಸಿದ್ದು ಇರುತ್ತದೆ.

10. ಇಲಾಖೆ ವತಿಯಿಂದ ನೇರವೇರಿಸಿದ ಸಭೆ ಸಮಾರಂಭಗಳಲ್ಲಿ ಸಾರ್ವಜನಿಕರಿಗೆ ಅಕ್ರಮ ಚಟುವಟಿಕೆಗಳಲ್ಲಿ ಪಾಲುಗೊಳ್ಳದಂತೆ ವಿನಂತಿಸಿಕೊಂಡು ಅಕ್ರಮ ಚಟುವಟಿಕೆಗಳ ಮಾಹಿತಿ ಇದ್ದಲ್ಲಿ ಮಾಹಿತಿ ನೀಡುವಂತೆ ಕೋರಿಕೊಳ್ಳಲಾಗಿದೆ.

--3

415



| | | |
|---|---|---|
| ಈ) | ಅಕ್ರಮ ರಿಕ್ರಿಯೇಷನ್ ಕ್ಲಬ್‌ಗಳು ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇವುಗಳಿಗೆ ಕಡಿವಾಣ ಹಾಕಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು)? | ಅಕ್ರಮ ರಿಕ್ರಿಯೇಷನ್ ಕ್ಲಬ್‌ಗಳ ಬಗ್ಗೆ ಮಾಹಿತಿ ಇದ್ದಾಗ ಕಟ್ಟುನಿಟ್ಟಿನ ಕ್ರಮಜರುಗಿಸಲಾಗುತ್ತದೆ. |

**ಹೆಚ್‌ಡಿ 67 ಎಸ್‌ಎಸ್‌ಟಿ 2021**

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

424

# ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 424
2. ಸದಸ್ಯರ ಹೆಸರು : ಶ್ರೀ. ಬಂಡೆಪ್ಪ ಖಾಶೆಂಪೂರ್ (ಬೀದರ್ ದಕ್ಷಿಣ)
3. ಉತ್ತರಿಸಬೇಕಾದ ದಿನಾಂಕ : 02.02.2021.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | 2019-20 ಮತ್ತು 2020-21ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಇಲಾಖೆಗಳಿಗೆ ನಿಗದಿಪಡಿಸಲಾದ ಅನುದಾನವೆಷ್ಟು; (ಇಲಾಖಾವಾರು ಮಾಹಿತಿ ನೀಡುವುದು) | 2019-20 ಮತ್ತು 2020-21ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಇಲಾಖೆಗಳಿಗೆ ಇಲಾಖಾವಾರು ನಿಗದಿಪಡಿಸಲಾದ ಅನುದಾನದ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ | ಈ ಪೈಕಿ ಬಿಡುಗಡೆ ಮಾಡಲಾದ ಅನುದಾನವೆಷ್ಟು; ಹಾಗೂ ಅದರಲ್ಲಿ ಖರ್ಚು ಮಾಡಿರುವ ಅನುದಾನವೆಷ್ಟು; (ಇಲಾಖಾವಾರು ಮಾಹಿತಿ ನೀಡುವುದು) | ಆರ್ಥಿಕ ಪ್ರತ್ಯಾಯೋಜನೆಯನ್ವಯ ಸರ್ಕಾರದ ವಿವಿಧ ಹಂತಗಳಲ್ಲಿ ಅನುದಾನ ಬಿಡುಗಡೆಗೆ ಆದೇಶವನ್ನು ಹೊರಡಿಸಲಾಗುವುದರಿಂದ ಬಿಡುಗಡೆಯಾಗುವ ಅನುದಾನ ಆರ್ಥಿಕ ಇಲಾಖೆಯಲ್ಲಿ ಮಾಹಿತಿ ಲಭ್ಯವಿರುವುದಿಲ್ಲ.<br>ಆದಾಗ್ಯೂ, ಮಹಾಲೇಖಪಾಲರ ಲೆಕ್ಕದನ್ವಯ ಡಿಸೆಂಬರ್-2020ರ ಅಂತ್ಯಕ್ಕೆ ಇಲಾಖೆಗಳಿಗೆ ನಿಗದಿಪಡಿಸಲಾದ ಅನುದಾನದಲ್ಲಿ ಶೇ. 59 ರಷ್ಟು ವೆಚ್ಚ ಮಾಡಲಾಗಿದೆ. |
| ಇ | ಈ ಬಿಡುಗಡೆಯಾದ ಅನುದಾನದ ಪೈಕಿ ಕೆಲವು ಇಲಾಖೆಗಳು ಬಿಡುಗಡೆ ಮಾಡಿದ ಅನುದಾನವನ್ನು ಖರ್ಚು ಮಾಡದಿರಲು ಕಾರಣಗಳೇನು? (ಇಲಾಖಾವಾರು ಮಾಹಿತಿ ನೀಡುವುದು) | |

ಸಂಖ್ಯೆ: ಆಇ 4 ಬಿಜಿಎಲ್ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

## ಅನುಬಂಧ-1

### 2019-20 ಮತ್ತು 2020-21ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಇಲಾಖೆಗಳಿಗೆ ನಿಗದಿಪಡಿಸಲಾದ ಅನುದಾನ ಹಾಗೂ ಲೆಕ್ಕದ ವಿವರಗಳು

(ರೂ. ಕೋಟಿಗಳಲ್ಲಿ)

| ಇಲಾಖೆಗಳು | 2019-20 | | 2020-21 | | |
|---|---|---|---|---|---|
| | ಆಯವ್ಯಯ ಅಂದಾಜು | ಲೆಕ್ಕ (#) | ಆಯವ್ಯಯ ಅಂದಾಜು | ಮಹಾಲೇಖಪಾಲರ ಲೆಕ್ಕ (ಡಿಸೆಂಬರ್ 2020ರ ಅಂತ್ಯಕ್ಕೆ) # | ಶೇಕಡವಾರು ವೆಚ್ಚ |
| ಕೃಷಿ | 5380.80 | 6129.24 | 6409.26 | 2846.96 | 44% |
| ತೋಟಗಾರಿಕೆ | 1174.32 | 1000.16 | 1000.33 | 698.93 | 70% |
| ರೇಷ್ಮೆ | 427.80 | 405.08 | 406.97 | 319.78 | 79% |
| ಪಶುಸಂಗೋಪನೆ | 2591.81 | 2526.82 | 2488.86 | 1496.53 | 60% |
| ಮೀನುಗಾರಿಕೆ | 281.47 | 334.88 | 291.58 | 141.60 | 49% |
| ಆರ್ಥಿಕ | 28847.67 | 22760.56 | 25922.99 | 15218.39 | 59% |
| ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 1072.93 | 1026.84 | 882.52 | 510.19 | 58% |
| ಇ – ಆಡಳಿತ | 117.54 | 66.09 | 108.87 | 55.69 | 51% |
| ಒಳಾಡಳಿತ | 6467.17 | 6572.15 | 7842.86 | 4756.47 | 61% |
| ಸಾರಿಗೆ | 1676.22 | 1604.26 | 1908.69 | 2090.86 | 110% |
| ಮೂಲಭೂತ ಸೌಕರ್ಯ | 16.57 | 65.48 | 82.04 | 239.72 | 292% |
| ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ | 14220.07 | 13466.56 | 15496.03 | 8650.57 | 56% |
| ಅರಣ್ಯ | 1470.61 | 1688.38 | 1888.15 | 1088.94 | 58% |
| ಪರಿಸರ ಮತ್ತುಜೀವಿಶಾಸ್ತ್ರ | 15.96 | 9.78 | 13.17 | 7.13 | 54% |
| ಸಹಕಾರ | 7937.71 | 6655.85 | 2095.20 | 1261.09 | 60% |
| ಪರಿಶಿಷ್ಠ ಜಾತಿಗಳ ಕಲ್ಯಾಣ | 4649.82 | 4100.49 | 3988.80 | 1971.34 | 49% |
| ಪರಿಶಿಷ್ಠ ಪಂಗಡಗಳ ಕಲ್ಯಾಣ | 1389.18 | 1237.37 | 1490.06 | 842.61 | 57% |
| ಹಿಂದುಳಿದ ವರ್ಗಗಳ ಕಲ್ಯಾಣ | 2980.90 | 2969.73 | 2646.55 | 1342.94 | 51% |
| ಅಲ್ಪಸಂಖ್ಯಾತರ ಕಲ್ಯಾಣ | 2096.78 | 1645.62 | 1276.32 | 418.39 | 33% |
| ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 5237.05 | 4695.45 | 4634.89 | 2569.83 | 55% |
| ವಾರ್ತೆ | 159.46 | 152.01 | 135.91 | 112.14 | 83% |
| ಪ್ರವಾಸೋದ್ಯಮ | 527.24 | 404.74 | 314.60 | 67.29 | 21% |
| ಯುವಜನ ಸೇವೆಗಳು | 251.09 | 226.91 | 199.67 | 104.53 | 52% |
| ಆಹಾರ ಮತ್ತು ನಾಗರೀಕ ಸರಬರಾಜು | 4000.06 | 3910.78 | 2666.64 | 1800.59 | 68% |
| ಕಂದಾಯ | 9756.51 | 13276.75 | 10805.26 | 6690.71 | 62% |
| ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | 190.54 | 127.65 | 103.27 | 48.02 | 46% |
| ವಸತಿ | 2634.47 | 3323.29 | 2964.05 | 852.62 | 29% |
| ಉನ್ನತ ಶಿಕ್ಷಣ | 5490.77 | 5156.01 | 5131.67 | 2720.88 | 53% |
| ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ | 21952.14 | 22181.48 | 23422.35 | 19612.36 | 84% |
| ಕೈಮಗ್ಗ ಮತ್ತು ಜವಳಿ | 313.59 | 271.12 | 378.82 | 206.42 | 54% |
| ಭಾರಿ ಮತ್ತು ಮಧ್ಯಮ ಕೈಗಾರಿಕೆ | 1125.10 | 802.30 | 929.86 | 704.25 | 76% |
| ಸಣ್ಣ ಕೈಗಾರಿಕೆ | 627.19 | 586.38 | 415.35 | 171.98 | 41% |
| ಗಣಿ | 101.41 | 79.89 | 139.88 | 45.37 | 32% |

| | | | | | |
|---|---|---|---|---|---|
| ನಗರಾಭಿವೃದ್ಧಿ | 15890.75 | 11960.37 | 15973.33 | 7732.19 | 48% |
| ಲೋಕೋಪಯೋಗಿ | 10164.32 | 9179.82 | 10229.44 | 5234.55 | 51% |
| ಭಾರಿ ನೀರಾವರಿ | 13762.33 | 12921.86 | 17017.72 | 7405.82 | 44% |
| ಸಣ್ಣ ನೀರಾವರಿ | 1880.50 | 2483.79 | 2445.95 | 1434.61 | 59% |
| ವೈದ್ಯಕೀಯ ಶಿಕ್ಷಣ | 2865.66 | 2732.08 | 3107.92 | 1656.91 | 53% |
| ಆರೋಗ್ಯ | 6460.63 | 6067.02 | 6808.74 | 5092.48 | 75% |
| ಕಾರ್ಮಿಕ | 480.95 | 444.40 | 608.86 | 285.40 | 47% |
| ಕೌಶಲ್ಯ ಅಭಿವೃದ್ಧಿ , ಉದ್ಯಮಶೀಲತೆ ಮತ್ತು ಜೀವ | 964.93 | 922.30 | 922.00 | 495.28 | 54% |
| ಇಂಧನ | 13153.33 | 15647.55 | 12943.94 | 6221.67 | 48% |
| ಕನ್ನಡ ಮತ್ತು ಸಂಸ್ಕೃತಿ | 347.90 | 251.93 | 254.94 | 84.14 | 33% |
| ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ | 2248.00 | 1560.55 | 2305.85 | 726.27 | 31% |
| ಕಾನೂನು | 1206.79 | 1191.24 | 1370.42 | 924.58 | 67% |
| ಸಂಸದೀಯ ವ್ಯವಹಾರಗಳು | 170.25 | 163.48 | 251.08 | 167.85 | 67% |
| ಋಣ ಮೇಲುಸ್ತುವಾರಿ | 29374.67 | 29049.81 | 35171.67 | 22241.59 | 63% |
| **ಒಟ್ಟು** | **234152.96** | **224036.31** | **237893.33** | **139368.41** | **59%** |

(#) : ಪೂರ್ವ ವಾಸ್ತವಿಕ ಲೆಕ್ಕ

ಹೆಚ್ಚುವರಿ ವೆಚ್ಚವು ಪೂರಕ ಅಂದಾಜುಗಳನ್ನು ಒಳಗೊಂಡಿರುತ್ತದೆ.

## ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 429
2. ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಎಂ.ಪಿ.
3. ಉತ್ತರಿಸಬೇಕಾದ ದಿನಾಂಕ : 02.02.2021
4. ಉತ್ತರಿಸುವವರು : ಸಣ್ಣ ನೀರಾವರಿ ಸಚಿವರು.

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಮೂಡಿಗೆರೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಯಾವಾಗ ಸರ್ವೆ ಮಾಡಲಾಗಿದೆ; | ಮೂಡಿಗೆರೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸಣ್ಣ ನೀರಾವರಿ ಇಲಾಖೆಯ ಕೆರೆಗಳನ್ನು ಮೂಡಿಗೆರೆ ಹಾಗೂ ಚಿಕ್ಕಮಗಳೂರು ತಾಲ್ಲೂಕಿನ ತಾಲ್ಲೂಕು ಕಛೇರಿಯ ಸರ್ವೆಯರ್ ಮತ್ತು ಭೂ ದಾಖಲೆಗಳ ಸಹಾಯಕ ಉಪನಿರ್ದೇಶಕರು ರವರ ವತಿಯಿಂದ ಸೆಪ್ಟೆಂಬರ್ 2020 ರ ಮಾಹೆಯಲ್ಲಿ ಸರ್ವೆ ಮಾಡಲಾಗಿದೆ. |
| ಆ | ಈ ಕೆರೆಗಳು ಬಹುತೇಕ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಸೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವ ಕೆರೆಗಳನ್ನು ಸರ್ವೆ ಮಾಡಲಾಗಿದೆ. |
| ಇ | ಮೂಡಿಗೆರೆ ಕ್ಷೇತ್ರ ವ್ಯಾಪ್ತಿಯ ರೈತರುಗಳ ಅನುಕೂಲಕ್ಕಾಗಿ ಕಳೆದ ಮೂರು ವರ್ಷಗಳಿಂದ ಕೆರೆಗಳ ದುರಸ್ತಿಗೆ ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಅನುದಾನ ಬಿಡುಗಡೆ ಮಾಡಲಾಗಿದೆಯೇ; | ಹೌದು. ಬಿಡುಗಡೆ ಮಾಡಲಾಗಿದೆ.<br><br>ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. . |
| ಈ | ಇಲ್ಲವಾದಲ್ಲಿ, ಯಾವಾಗ ಎಷ್ಟು ಅನುದಾನ ಬಿಡುಗಡೆ ಮಾಡಲಾಗುವುದು (ಸಂಪೂರ್ಣ ವಿವರ ನೀಡುವುದು)? | |

**ಸಂಖ್ಯೆ:ಎಂಐಡಿ 38 ಎಲ್‌ಎಕ್ಯೂ 2021**

(ಜೆ.ಸಿ.ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು

429

ವಿಧಾನ ಸಭೆಯ ಸದಸ್ಯರಾದ ಮಾನ್ಯ ಶ್ರೀ ಕುಮಾರಸ್ವಾಮಿ ಎಂ.ಪಿ., (ಮೂಡಿಗೆರೆ) ಇವರ ಪ್ರಶ್ನೆ ಸಂಖ್ಯೆ: 429ಕ್ಕೆ ಅನುಬಂಧ

ಮೂಡಿಗೆರೆ ಕ್ಷೇತ್ರ ವ್ಯಾಪ್ತಿಯ ರೈತರುಗಳ ಅನುಕೂಲಕ್ಕಾಗಿ ಕಳೆದ ಮೂರು ವರ್ಷಗಳಿಂದ ಕೆರೆಗಳ ದುರಸ್ತಿಗೆ ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಕೈಗೊಂಡ ಕಾಮಗಾರಿಗಳ ವಿವರ

ರೂ.ಲಕ್ಷಗಳಲ್ಲಿ

| ಕ್ರ. ಸಂ. | ವರ್ಷ | ಲೆಕ್ಕ ಶೀರ್ಷಿಕೆ | ಜಿಲ್ಲೆ | ವಿಧಾನ ಸಭಾ ಕ್ಷೇತ್ರ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | 2017-18 ಅನುದಾನ | 2017-18 ವೆಚ್ಚ | 2018-19 ಅನುದಾನ | 2018-19 ವೆಚ್ಚ | 2019-20 ಅನುದಾನ | 2019-20 ವೆಚ್ಚ | ಒಟ್ಟು ಅನುದಾನ | ಒಟ್ಟು ವೆಚ್ಚ | ಕಾಮಗಾರಿಯ ಹಂತ: ಪೂರ್ಣ ಗೊಂಡಿದೆ. | ಕಾಮಗಾರಿಯ ಹಂತ: ಪ್ರಗತಿಯಲ್ಲಿದೆ | ಷರಾ |
|---|---|---|---|---|---|---|---|---|---|---|---|---|---|---|---|---|---|
| | | | | | | 7 | 8 | 9 | 10 | 11 | 12 | 13 | | 14 | 15 | 16 | 17 |
| 1 | 2 | 3 | 4 | 5 | 6 | | | | | | | | | | | | |
| | 2017-18 ನೇ ಸಾಲಿನ ಕಾಮಗಾರಿಗಳು | | | | | | | | | | | | | | | | |
| 1 | 2017-18 | 4702-00-101-1-07-139-ಪ್ರಧಾನ ಕಾಮಗಾರಿಗಳು (ಕೆರೆಗಳ ಆಧುನೀಕರಣ) | ಚಿಕ್ಕಮಗಳೂರು | ಮೂಡಿಗೆರೆ | ಉದುಸೆ ದೇವೀರಮ್ಮನಕೆರೆ ಅಭಿವೃದ್ಧಿ | 25.00 | 13.55 | 13.55 | 0.00 | 0.00 | 0.00 | 0.00 | 13.55 | 13.55 | ಪೂರ್ಣ ಗೊಂಡಿದೆ. | | |
| 2 | 2017-18 | 4702-00-101-1-07-139-ಪ್ರಧಾನ ಕಾಮಗಾರಿಗಳು (ಕೆರೆಗಳ ಆಧುನೀಕರಣ) | ಚಿಕ್ಕಮಗಳೂರು | ಮೂಡಿಗೆರೆ | ಗೋಣಿಬೀಡು ಹೋಬಳಿ ಕಿರುಗುಂದ ಗ್ರಾಮ ಪಂಚಾಯಿತಿ ಹೊತ್ತಿಕೆರೆ ಕಲ್ಲುಗುಡ್ಡೆ ಪಿಕಪ್ ಅಭಿವೃದ್ಧಿ | 10.00 | 3.94 | 3.94 | 0.00 | 0.00 | 0.00 | 0.00 | 3.94 | 3.94 | ಪೂರ್ಣ ಗೊಂಡಿದೆ. | | |
| 3 | 2017-18 | 4702-00-101-1-07-139-ಪ್ರಧಾನ ಕಾಮಗಾರಿಗಳು (ಕೆರೆಗಳ ಆಧುನೀಕರಣ) | ಚಿಕ್ಕಮಗಳೂರು | ಮೂಡಿಗೆರೆ | ಮೂಡಿಗೆರೆ ತಾ., ಹಳೇ ಮೂಡಿಗೆರೆ ಗ್ರಾ. ಪಂ. ಲೋಕವಳ್ಳಿ ಗ್ರಾಮದ ಸ.ನಂ.5ರಲ್ಲಿ ಲೋಕವಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸುವ ಕಾಮಗಾರಿ | 75.00 | 24.65 | 24.65 | 39.10 | 39.10 | 0.00 | 0.00 | 63.75 | 63.75 | ಪೂರ್ಣ ಗೊಂಡಿದೆ. | | |
| 4 | 2017-18 | 4702-00-101-1-07-139-ಪ್ರಧಾನ ಕಾಮಗಾರಿಗಳು (ಕೆರೆಗಳ ಆಧುನೀಕರಣ) | ಚಿಕ್ಕಮಗಳೂರು | ಮೂಡಿಗೆರೆ | ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಅಂಬಳೆ ಹೋಬಳಿ ಭೈರಾಪುರ ಪಿಕಪ್ ನಾಲಾ ಅಭಿವೃದ್ಧಿಪಡಿಸುವುದು. | 25.00 | 8.33 | 0.00 | 20.23 | 28.56 | 0.00 | 0.00 | 28.56 | 28.56 | ಪೂರ್ಣ ಗೊಂಡಿದೆ. | | |
| 5 | 2017-18 | 4702-00-101-1-07-139-ಪ್ರಧಾನ ಕಾಮಗಾರಿಗಳು (ಕೆರೆಗಳ ಆಧುನೀಕರಣ) | ಚಿಕ್ಕಮಗಳೂರು | ಮೂಡಿಗೆರೆ | ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ವಸ್ತಾರ ಹೋಬಳಿ ವಸ್ತಾರೆ ಹಿರೇಕೆರೆ ಅಭಿವೃದ್ಧಿಪಡಿಸುವುದು. | 50.00 | 24.51 | 24.51 | 20.32 | 20.32 | 0.00 | 0.00 | 44.83 | 44.83 | ಪೂರ್ಣ ಗೊಂಡಿದೆ. | | |
| 6 | 2017-18 | 4702-00-101-1-07-139-ಪ್ರಧಾನ ಕಾಮಗಾರಿಗಳು (ಕೆರೆಗಳ ಆಧುನೀಕರಣ) | ಚಿಕ್ಕಮಗಳೂರು | ಮೂಡಿಗೆರೆ | ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಆಲ್ದೂರು ಹೋಬಳಿ ದೊಡ್ಡ ಮಾಗರವಳ್ಳಿಕೆರೆ ಅಭಿವೃದ್ಧಿಪಡಿಸುವುದು. | 50.00 | 41.75 | 41.75 | 1.50 | 1.50 | 0.00 | 0.00 | 43.25 | 43.25 | ಪೂರ್ಣ ಗೊಂಡಿದೆ. | | |
| 7 | 2017-18 | 4702-00-101-1-07-139-ಪ್ರಧಾನ ಕಾಮಗಾರಿಗಳು (ಕೆರೆಗಳ ಆಧುನೀಕರಣ) | ಚಿಕ್ಕಮಗಳೂರು | ಮೂಡಿಗೆರೆ | ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ದಾರದಹಳ್ಳಿ ಗ್ರಾಮ ಪಂಚಾಯಿತಿ ಜೋಗಣ್ಣನ ದಿಣ್ಣೇಕೆರೆ ಅಭಿವೃದ್ಧಿಪಡಿಸುವುದು. | 30.00 | 10.00 | 0.00 | 10.00 | 0.00 | 10.00 | 27.35 | 30.00 | 27.35 | ಪೂರ್ಣ ಗೊಂಡಿದೆ. | | |
| 8 | 2017-18 | 4702-00-101-1-07-139-ಪ್ರಧಾನ ಕಾಮಗಾರಿಗಳು (ಕೆರೆಗಳ ಆಧುನೀಕರಣ) | ಚಿಕ್ಕಮಗಳೂರು | ಮೂಡಿಗೆರೆ | ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಹಳೇ ಮೂಡಿಗೆರೆ ಗ್ರಾಮ ಪಂಚಾಯಿತಿ ಲೋಕವಳ್ಳಿ ಉದಿಕ್ಕಿನ ಹರಸಿನಕೆರೆ ಅಭಿವೃದ್ಧಿಪಡಿಸುವುದು. | 25.00 | 24.58 | 24.58 | 0.00 | 0.00 | 0.00 | 0.00 | 24.58 | 24.58 | ಪೂರ್ಣ ಗೊಂಡಿದೆ. | | |
| 9 | 2017-18 | 4702-00-101-1-07-139-ಪ್ರಧಾನ ಕಾಮಗಾರಿಗಳು (ಕೆರೆಗಳ ಆಧುನೀಕರಣ) | ಚಿಕ್ಕಮಗಳೂರು | ಮೂಡಿಗೆರೆ | ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಅಂಬಳೆ ಹೋಬಳಿ ಬೆಣ್ಣೂರು ಪಿಕಪ್ ಅಭಿವೃದ್ಧಿಪಡಿಸುವುದು. | 75.00 | 25.00 | 0.00 | 46.43 | 71.43 | 0.00 | 0.00 | 71.43 | 71.43 | ಪೂರ್ಣ ಗೊಂಡಿದೆ. | | |
| 10 | 2017-18 | 4702-00-101-1-07-139-ಪ್ರಧಾನ ಕಾಮಗಾರಿಗಳು (ಕೆರೆಗಳ ಆಧುನೀಕರಣ) | ಚಿಕ್ಕಮಗಳೂರು | ಮೂಡಿಗೆರೆ | ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಆಲ್ದೂರು ಹೋಬಳಿ ಕೋಟೆವೂರು ನಾಗರಬಾವಿ ಕೆರೆ ಅಭಿವೃದ್ಧಿಪಡಿಸುವುದು. | 30.00 | 19.42 | 19.42 | 0.00 | 0.00 | 0.00 | 0.00 | 19.42 | 19.42 | ಪೂರ್ಣ ಗೊಂಡಿದೆ. | | |

| ಕ್ರ. ಸಂ. | ವರ್ಷ | ಲೆಕ್ಕ ಶೀರ್ಷಿಕೆ | ಜಿಲ್ಲೆ | ವಿಧಾನ ಸಭಾ ಕ್ಷೇತ್ರ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | 2017-18 ಅನುದಾನ | 2017-18 ವೆಚ್ಚ | 2018-19 ಅನುದಾನ | 2018-19 ವೆಚ್ಚ | 2019-20 ಅನುದಾನ | 2019-20 ವೆಚ್ಚ | ಒಟ್ಟು ಅನುದಾನ | ಒಟ್ಟು ವೆಚ್ಚ | ಕಾಮಗಾರಿಯ ಹಂತ ಪೂರ್ಣ ಗೊಂಡಿದೆ. | ಕಾಮಗಾರಿಯ ಹಂತ ಪ್ರಗತಿ ಯಲ್ಲಿದೆ | ಷರಾ |
|---|---|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | | 14 | 15 | 16 | 17 |
| 11 | 2017-18 | 4702-00-101-1-07-139- ಪ್ರಧಾನ ಕಾಮಗಾರಿಗಳು (ಕೆರೆಗಳ ಆಧುನೀಕರಣ) | ಚಿಕ್ಕಮಗಳೂರು | ಮೂಡಿಗೆರೆ | ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕೆಳಗೂರು ಗ್ರಾಮ ಪಂಚಾಯಿತಿ ಬಾಳೆಹಳ್ಳಿ ಗ್ರಾಮದ ಕರಿಯಪ್ಪ ಗೌಡನಕೆರೆ ಅಭಿವೃದ್ಧಿಪಡಿಸುವುದು. | 25.00 | 8.33 | 0.00 | 8.33 | 0.53 | 8.34 | 22.06 | 25.00 | 22.59 | ಪೂರ್ಣ ಗೊಂಡಿದೆ. | | |
| 12 | 2017-18 | 4702-00-101-1-07-139- ಪ್ರಧಾನ ಕಾಮಗಾರಿಗಳು (ಕೆರೆಗಳ ಆಧುನೀಕರಣ) | ಚಿಕ್ಕಮಗಳೂರು | ಮೂಡಿಗೆರೆ | ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಆಲ್ದೂರು ಹೋಬಳಿ ಚಿಕ್ಕಮಾಗರವಳ್ಳಿ ಗ್ರಾಮದ ಮಳಲೂರಮ್ಮನಕೆರೆ ಅಭಿವೃದ್ಧಿ. | 20.00 | 6.66 | 0.00 | 11.85 | 18.51 | 0.00 | 0.00 | 18.51 | 18.51 | ಪೂರ್ಣ ಗೊಂಡಿದೆ. | | |
| 13 | 2017-18 | ಕೆರೆ ಸಂಜೀವಿನಿ | ಚಿಕ್ಕಮಗಳೂರು | ಮೂಡಿಗೆರೆ | ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು ಅಂಬಳೆ ದೊಡ್ಡಕೆರೆ ಹೂಳನ್ನು ಜೆ.ಸಿ.ಬಿ. ಯಂತ್ರಗಳಿಂದ ತೆಗೆಯುವ ಕೆಲಸ | 4.00 | 4.00 | 0.00 | 0.00 | 3.91 | 0.00 | 0.00 | 4.00 | 3.91 | ಪೂರ್ಣ ಗೊಂಡಿದೆ. | | |
| 14 | 2017-18 | ಕೆರೆ ಸಂಜೀವಿನಿ | ಚಿಕ್ಕಮಗಳೂರು | ಮೂಡಿಗೆರೆ | ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು ಮರ್ಲೆ ದೊಡ್ಡಕೆರೆ ಹೂಳನ್ನು ಜೆ.ಸಿ.ಬಿ. ಯಂತ್ರಗಳಿಂದ ತೆಗೆಯುವ ಕೆಲಸ | 4.00 | 4.00 | 0.00 | 0.00 | 3.28 | 0.00 | 0.00 | 4.00 | 3.28 | ಪೂರ್ಣ ಗೊಂಡಿದೆ. | | |
| | | | | | | **448.00** | **218.72** | **152.40** | **157.76** | **187.14** | **18.34** | **49.41** | **394.82** | **388.95** | | | |
| | | | | | | | | | | | | | | | | | |
| | **2018-19 ನೇ ಸಾಲಿನ ಕಾಮಗಾರಿಗಳು** | | | | | | | | | | | | | | | | |
| 1 | 2018-19 | 4702-00-101-1-07-139 - ಪ್ರಧಾನ ಕಾಮಗಾರಿಗಳು-ಕೆರೆಗಳ ಆಧುನೀಕರಣ | ಚಿಕ್ಕಮಗಳೂರು | ಮೂಡಿಗೆರೆ | ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಕಸಬಾ ಹೋಬಳಿ ಹಳೇ ಮೂಡಿಗೆರೆ ಗ್ರಾಮ ಪಂಚಾಯಿತಿ ಲೋಕವಳ್ಳಿ ಗ್ರಾಮದ ಸರ್ವೆ ನಂ.5 ಲೋಕವಳ್ಳಿ ಕೆರೆಗೆ ತಡೆಗೋಡೆ ನಿರ್ಮಿಸುವ ಕಾಮಗಾರಿ | 145.00 | 0.00 | 0.00 | 48.33 | 0.00 | 60.86 | 109.19 | 109.19 | 109.19 | ಪೂರ್ಣ ಗೊಂಡಿದೆ. | | |
| | | | | | | **145.00** | 0.00 | **0.00** | 48.33 | **0.00** | 60.86 | **109.19** | **109.19** | **109.19** | | | |
| | | | | | | | | | | | | | | | | | |
| | **2019-20 ನೇ ಸಾಲಿನ ಕಾಮಗಾರಿಗಳು** | | | | | | | | | | | | | | | | |
| 1 | 2019-20 | 4702-00-101-1-07-139 - ಪ್ರಧಾನ ಕಾಮಗಾರಿಗಳು-ಕೆರೆಗಳ ಆಧುನೀಕರಣ | ಚಿಕ್ಕಮಗಳೂರು | ಮೂಡಿಗೆರೆ | ಭಾರಿ ಮಳೆಯಿಂದಾಗಿ ಹಾನಿಯಾಗಿರುವ ಲೋಕವಳ್ಳಿ ಉದುಕಿನ ಅರಿಸಿನ ಕೆರೆ ಸರಪಳಿ 230.00 ಮೀ. ನಲ್ಲಿ ಕಾಲುವೆ ಪುನಶ್ಚೇತನ | 5.00 | 0.00 | 0.00 | 2.50 | 0.00 | 2.50 | 5.00 | 5.00 | 5.00 | ಪೂರ್ಣ ಗೊಂಡಿದೆ. | | |
| | | | | | | **5.00** | 0.00 | **0.00** | 2.50 | **0.00** | 2.50 | **5.00** | 5.00 | 5.00 | | | |
| | | | | | | **598.00** | **218.72** | **152.40** | **208.59** | **187.14** | **81.70** | **163.60** | **509.01** | **503.14** | | | |
| **16** | | | | | | | | | | | | | | | | | |

# ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 430
2. ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ
3. ಉತ್ತರಿಸುವ ದಿನಾಂಕ : 02-02-2021
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳ ಸುವ್ಯವಸ್ಥೆಗಾಗಿ ಸರ್ಕಾರದ ಪರಿಣಾಮಕಾರಿ ಕ್ರಮಗಳೇನು; ಸದರಿ ಆರೋಗ್ಯ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಳವಡಿಸಿಕೊಳ್ಳಲಾಗಿದೆಯೇ; ಮೂಲ ಸೌಲಭ್ಯಗಳ ಕೊರತೆಯನ್ನು ಎದುರಿಸುತ್ತಿರುವ ಆರೋಗ್ಯ ಕೇಂದ್ರಗಳು ಮತ್ತು ಅವುಗಳ ಸುವ್ಯವಸ್ಥೆಗಾಗಿ ಸರ್ಕಾರದ ಕ್ರಮಗಳೇನು; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸುವ್ಯವಸ್ಥೆಗಾಗಿ ಪರಿಣಾಮಾಕಾರಿ ಕ್ರಮಗಳನ್ನು ಈಗಾಗಲೇ ಕೈಗೊಂಡು, ಹೊರ ರೋಗಿಗಳ ಆರೋಗ್ಯದ ಸುಧಾರಣಾ ಹಿತದೃಷ್ಟಿಯಿಂದ ಅವಶ್ಯಕ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ಮೂಲ ಸೌಲಭ್ಯಗಳ ಕೊರತೆಯನ್ನು ಎದುರಿಸುತ್ತಿರುವ ಯಾವುದೇ ಪ್ರಕರಣಗಳು ಕಂಡುಬಂದಿರುವುದಿಲ್ಲ. |
| ಆ | ಆರೋಗ್ಯ ಕೇಂದ್ರಗಳಲ್ಲಿ ನಿಗಧಿತ ಪ್ರಮಾಣದ ವೈದ್ಯರು ಮತ್ತಿತರ ಸೇವಾ ಸಿಬ್ಬಂದಿ ವರ್ಗಗಳನ್ನು ಸೂಕ್ತ ಪ್ರಮಾಣದಲ್ಲಿ ನೇಮಕ ಮಾಡಲಾಗಿದೆಯೇ; ಬಿಬಿಎಂಪಿ ವ್ಯಾಪ್ತಿಯಲ್ಲಿನ ಆರೋಗ್ಯ ಸೇವಾ ವಲಯದಲ್ಲಿ ಕೊರತೆ ಇರುವ ವಿವಿಧ ವರ್ಗಗಳ ಸಿಬ್ಬಂದಿ ವರ್ಗಗಳ ಸಂಖ್ಯೆ ಮತ್ತು ಅವುಗಳನ್ನು ಭರ್ತಿಗೊಳಿಸಲು ಸರ್ಕಾರದ ಕ್ರಮಗಳೇನು; (ವಿವರ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರೆಫರಲ್ ಮತ್ತು ಹೆರಿಗೆ ಆಸ್ಪತ್ರೆಗಳಲ್ಲಿ ತಾಯಿ ಮತ್ತು ಮಕ್ಕಳ ಆರೋಗ್ಯಕ್ಕೆ ಒತ್ತು ಕೊಟ್ಟು ಆರೋಗ್ಯ ಸೇವೆಯನ್ನು ಒದಗಿಸಲಾಗುತ್ತಿದ್ದು, ಅಗತ್ಯ ವಿವಿಧ ವರ್ಗಗಳ ಸಿಬ್ಬಂದಿಗಳನ್ನು ಪಾಲಿಕೆಯಿಂದ ನಿಯೋಜಿಸಲಾಗಿದೆ. ಉಳಿದಂತೆ ಅಗತ್ಯ ಹೆಚ್ಚಿನ ಸಿಬ್ಬಂದಿಗಳನ್ನು ಎನ್‌ಯುಹೆಚ್‌ಎಂ ವತಿಯಿಂದ ಹೊರಗುತ್ತಿಗೆ ಮೇಲೆ ಭರ್ತಿಗೊಳಿಸಲಾಗಿರುತ್ತದೆ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಿದೆ. |
| ಇ | ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿನ ನಾಗರೀಕರ ಆರೋಗ್ಯ ಸೇವಾ ವ್ಯವಸ್ಥೆಯನ್ನು ಆಧುನೀಕರಣಗೊಳಿಸಿ ಸಮರ್ಪಕ ಸೇವೆ ಸೌಕರ್ಯ ನೀಡಲು ಸರ್ಕಾರದ ಸುಧಾರಿತ ಕ್ರಮಗಳೇನು? | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ರೆಫರಲ್ ಹಾಗೂ ಹೆರಿಗೆ ಆಸ್ಪತ್ರೆಗಳಲ್ಲಿ ಹೊರರೋಗಿ ಸೇವೆಗಳು ಮತ್ತು ಸಹಜ ಹೆರಿಗೆ, ಸಿಜೇರಿಯನ್ ಶಸ್ತ್ರಚಿಕಿತ್ಸೆ ಸೇವೆಗಳನ್ನು ಒದಗಿಸಲಾಗುತ್ತಿದೆ. ಮುಂದುವರಿದು 07 ಆಸ್ಪತ್ರೆಗಳಲ್ಲಿ ಲಕ್ಷ್ಯಾ (LAQSHYA-Labour Room Quality Improvement Initiative) ಕಾರ್ಯಕ್ರಮದ ಮಾರ್ಗಸೂಚಿಗಳನ್ನು ಅಳವಡಿಸಿ ಕೊಳ್ಳಲಾಗಿದೆ. ರೆಫರಲ್ ಆಸ್ಪತ್ರೆಗಳಲ್ಲಿ ಹೈಟೆಕ್ ಲ್ಯಾಬೋರೇಟರಿ ಸೌಲಭ್ಯ ಹಾಗೂ ಹೆಚ್.ಸಿದ್ದಯ್ಯರಸ್ತೆ ರೆಫರಲ್ ಆಸ್ಪತ್ರೆಯಲ್ಲಿ ಎಸ್‌ಎನ್‌ಸಿಯು (SNCU) ಘಟಕವನ್ನು ಸ್ಥಾಪಿಸಿದ್ದು, ಸಾರ್ವಜನಿಕರಿಗೆ ಗುಣಮಟ್ಟದ ಸೇವೆಯನ್ನು ಒದಗಿಸಲಾಗುತ್ತಿದೆ. |

**ಸಂಖ್ಯೆ: ನಅಇ 25 ಬಿಬಿಎಲ್ 2021**

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ.

430

ಅನುಬಂಧ -1

## Paramedical Staff (Referral Hospital)

| Sl No | Name of the Posts | Approved as per ROP 2017-18 | Working | | Vacancy | Approved Salary per Month |
|---|---|---|---|---|---|---|
| 1 | Staff Nurse | 51 | 42 | | 9 | 15,000 |
| 2 | Lab Technician | 0 | 0 | | 0 | 15,000 |
| 3 | Pharmacist | 6 | 3 | | 3 | 15,000 |
| 4 | OT | 6 | 5 | | 1 | 15,000 |
| 5 | DEO | 1 | 1 | | 0 | 15,000 |
| | **Total** | **64** | **51** | | **13** | |

## HR Staff Status of City Programme Management Unit under NUHM in BBMP

| SL No | Name of the Posts | Approved as per ROP 2019-20 | Working | | Vacancy | Approved Salary per Month |
|---|---|---|---|---|---|---|
| 1 | City Programme Manager | 1 | 1 | | 0 | 40,000 |
| 2 | City Accounts Manager | 1 | 1 | | 0 | 30,000 |
| 3 | Community Mobilizer | 1 | 1 | | 0 | 50,000 |
| 4 | Bio Medical Engineer | 1 | 0 | | 1 | 40,000 |
| 5 | IT Consultant | 1 | 1 | | 0 | 50,000 |
| 6 | Epidemiologists | 8 | 8 | | 0 | 25,000 |
| 7 | Zonal Programme Manager | 8 | 8 | | 0 | 20,000 |
| 8 | Zonal Account Manager | 8 | 8 | | 0 | 15,000 |
| 9 | Account Assistant | 1 | 1 | | 0 | 17,000 |
| 10 | DEOs | 2 | 2 | | 0 | 15,000 |
| 11 | Zonal DEOs | 8 | 8 | | 0 | 12,000 |
| | **Total** | **40** | **39** | | **1** | |

| | Approved as per ROP 2017-18 | Working | Total Vacancy |
|---|---|---|---|
| Grand Total | 1433 | 1030 | 403 |

[signature]

HR Status of Medical Officers,Specialists and Paramedical

Staffs at UPHCs and UCHCs in BBMP under NUHM

Bangalore City Health & Family Welfare Society ®

## UPHCs

| SL NO | Name of the Posts | Approved as per ROP 2019-20 | Bangalore Urban | | | BBMP | | | Working (BU+BBMP) | Vacancy | Approved Salary per Month |
|---|---|---|---|---|---|---|---|---|---|---|---|
| | | | Approved | Working | Vacancy | Approved | Working | Vacancy | | | |
| 1 | Medical Officer | 46 | 14 | 14 | 0 | 32 | 32 | 2 | 46 | 0 | 45,000 |
| 2 | Part time Evening specialists | 123UPHC'S | 38 | 13 | 25 | 85 | 85 | 20 | 78 | 45 | 54,000/UPHC |
| 3 | Staff Nurse | 138 | 46 | 46 | 0 | 92 | 92 | 3 | 118 | 20 | 15,000 |
| 4 | Lab Technician | 120 | 37 | 34 | 3 | 83 | 83 | 14 | 103 | 17 | 15,000 |
| 5 | Pharmacist | 137 | 31 | 31 | 0 | 106 | 76 | 30 | 107 | 30 | 15,000 |
| 6 | ANM/LHV | 444 | 166 | 156 | 0 | 288 | 288 | 142 | 302 | 142 | 9,000 |
| 7 | Group -D | 120 | | | | | | | 110 | 120 | 8,500 |
| 8 | LDC | 57 | | | | | | | 47 | 57 | 12,000 |
| | Total | 1062 | | | | | | | 911 | 151 | |

## UCHC's REFERRAL HOSPITALS

| SL No | Name of the Posts | Approved as per ROP 2017-18 | Working | | Vacancy | Approved Salary per Month |
|---|---|---|---|---|---|---|
| 1 | Gynaecologist | 6 | 6 | | 0 | 1,10,000 |
| 2 | Anaesthetist | 4 | 4 | | 0 | 1,10,000 |
| 3 | Peadiatrician | 6 | 6 | | 0 | 1,10,000 |
| 4 | Radiologist | 6 | 6 | | 0 | 1,10,000 |
| 5 | Physician | 6 | 6 | | 0 | 1,10,000 |
| 6 | Dental Surgeon | 6 | 6 | | 0 | 60,000 |
| 7 | Medical Officer | 10 | 10 | | 0 | 45,000 |
| | Total | 44 | 44 | | 0 | |

447

# ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 447

ಸದಸ್ಯರ ಹೆಸರು : ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದ್ರೆ)

ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಉತ್ತರಿಸುವ ದಿನಾಂಕ : 02.02.2021

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಕಾರ್ಪೋರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ ಬಳಕೆ ಕುರಿತಾಗಿ ಸರ್ಕಾರ ಅನುಸರಿಸುತ್ತಿರುವ ನೀತಿ ನಿಯಮಗಳು ಯಾವುವು; ಸರ್ಕಾರದ ಆದ್ಯತಾ ನಿಯಮಗಳೇನು; | ಕಂಪನೀಸ್ ಅಧಿನಿಯಮ (ಕಂಪನೀಸ್ ಆಕ್ಟ್)ರನ್ವಯ ಕಾರ್ಪೋರೇಟ್ ಸೋಶಿಯಲ್ ರೆಸ್ಪಾನ್ಸಿಬಿಲಿಟಿ (ಸಿ.ಎಸ್.ಆರ್) ನಿಬಂಧನೆಗಳಿಗೆ ಒಳಪಡುವ ಕಂಪನಿಗಳು ಸಿ.ಎಸ್.ಆರ್ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಾದ ನಿಯಮವಿರುತ್ತದೆ. ಈ ಅಧಿನಿಯಮವು ಕೇಂದ್ರೀಯ ಅಧಿನಿಯಮವಾಗಿದ್ದು ಈ ಬಗ್ಗೆ ರಾಜ್ಯ ಸರ್ಕಾರದಿಂದ ಯಾವುದೇ ಮಾರ್ಗಸೂಚಿಗಳನ್ನು ಹೊರಡಿಸಿರುವುದಿಲ್ಲ. |
| ಆ | ಕಳೆದ ಎರಡು ವರ್ಷಗಳಲ್ಲಿ ಸರ್ಕಾರಕ್ಕೆ ಸಂದಾಯವಾಗಿರುವ ಸಾಮಾಜಿಕ ಹೊಣೆಗಾರಿಕೆ ನಿಧಿಯ ಮೊತ್ತ ಪ್ರಮಾಣ ಎಷ್ಟು; | ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ ಖರ್ಚು ಮಾಡಬೇಕಾಗಿರುವ ಮೊತ್ತವನ್ನು ಕಂಪನಿಗಳು ಕಂಪನೀಸ್ ಅಧಿನಿಯಮದ ನಿಯಾಮನುಸಾರ ಅರ್ಹ ಯೋಜನೆಗಳ ಅನುಷ್ಠಾನಕ್ಕೆ ನೇರವಾಗಿ ಖರ್ಚು ಮಾಡುತ್ತವೆ. ಸದರಿ ಮೊತ್ತವನ್ನು ಸರ್ಕಾರಕ್ಕೆ ಸಂದಾಯ ಮಾಡುವುದಿಲ್ಲ. |
| ಇ | ಮಂಗಳೂರು (ದಕ್ಷಿಣ ಕನ್ನಡ) ವಿಶೇಷ ಆರ್ಥಿಕ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಂಪನಿಗಳಿಂದ ಸಂದಾಯವಾದ ಸಿಎಸ್‌ಆರ್ ನಿಧಿಯ ಮೊತ್ತ ಎಷ್ಟು; | ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿರುವ "ಮಂಗಳೂರು ವಿಶೇಷ ಆರ್ಥಿಕ ವಲಯ"ದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂಪನಿಗಳು ಕಂಪನೀಸ್ ಅಧಿನಿಯಮದನ್ವಯ ಲಾಭ ಗಳಿಕೆಯ ಆಧಾರದ ಮೇಲೆ ಕಳೆದ ಎರಡು ವರ್ಷಗಳಲ್ಲಿ ರೂ.8.24 ಲಕ್ಷಗಳನ್ನು ಸಿ.ಎಸ್.ಆರ್ ನಿಧಿಯಡಿ ವೆಚ್ಚ ಮಾಡಿರುತ್ತವೆ. |
| ಈ | ಸದರಿ ಸಿಎಸ್‌ಆರ್ ಮೊತ್ತದಲ್ಲಿ ಜಿಲ್ಲೆಯ ವಿಶೇಷತಃ ಆ ಪ್ರದೇಶದ ಅದರಲ್ಲೂ ತಮ್ಮ ಭೂಮಿ ಮನೆಗಳನ್ನು ಬಿಟ್ಟು ಅತಂತ್ರರಾಗಿರುವ ಕುಟುಂಬಗಳು ಹಾಗೂ ಅವರು ಮರೆನೆಲೆ ನಿಂತ ಪ್ರದೇಶಗಳ ಅಭಿವೃದ್ಧಿಗಾಗಿ ಬಳಸಲಾದ ನಿಧಿಯ ಮೊತ್ತ ಎಷ್ಟು? (ಎರಡು ವರ್ಷಗಳ ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪನೆಗಾಗಿ ಭೂಮಿ ಮನೆಗಳನ್ನು ಕಳೆದುಕೊಂಡಿರುವ ಕುಟುಂಬಗಳಿಗೆ ಕಲ್ಪಿಸಿರುವ ಪುನರ್‌ವಸತಿ ಪ್ರದೇಶಗಳ ಅಭಿವೃದ್ಧಿಗಾಗಿ ಸಿ.ಎಸ್.ಆರ್ ನಿಧಿಯಡಿ ಕಳೆದ ಎರಡು ವರ್ಷಗಳಲ್ಲಿ ಒಟ್ಟು ರೂ.59.07 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. **ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.** |

ಸಿಐ 54 ಎಸ್‌ಪಿಐ 2021

**(ಜಗದೀಶ್ ಶೆಟ್ಟರ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ವಿಧಾನ ಸಭೆ ಪ್ರಶ್ನೆ ಸಂ: 447

ಅನುಬಂಧ

447

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಭೂಮಿ, ಮನೆ ಕಳೆದುಕೊಂಡವರ ಪ್ರದೇಶದಲ್ಲಿ ಅಭಿವೃದ್ಧಿಗಾಗಿ ಹಾಗೂ ಪುನರ್ವಸತಿ ಗಾಗಿ ಸಿ. ಎಸ್. ಆರ್ ನಿಧಿಯಲ್ಲಿ ವೆಚ್ಚ ಮಾಡಲಾದ ವಿವರಗಳು

| ಕ್ರ. ಸಂ | ಸಿ.ಎಸ್.ಆರ್ ಭರಿಸಿದ ಕಂಪೆನಿಯ ಹೆಸರು ವಿಳಾಸ | ಕೈಗೊಂಡ ಕಾರ್ಯಕ್ರಮಗಳು/ ಕಾಮಗಾರಿಗಳು | ಭರಿಸಲಾದ ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|---|
| 1 | ಎಂ.ಆರ್.ಪಿ.ಎಲ್, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ | ರಿಹೇಬಿಟೇಶನ್ ಕಾಲೋನಿಯಲ್ಲಿರುವ ಪ್ರೈಮರಿ ಹೆಲ್ತ್ ಸೆಂಟರ್‌ಗೆ ಅನುದಾನ | 2.96 |
| | | ಪುನರ್ವಸತಿ ಕಾಲೋನಿಗೆ ಕುಡಿಯುವ ನೀರಿನ ವ್ಯವಸ್ಥೆ | 1.43 |
| | | ಪುನರ್ವಸತಿ ಕೇಂದ್ರದಲ್ಲಿ ಪೈಪ್‌ಲೈನ್ ಹಾಗೂ ನೀರು ಸರಬರಾಜು ವ್ಯವಸ್ಥೆ | 10.84 |
| | | ಪಿ.ಹೆಚ್.ಸಿ ಗೆ ಅನುದಾನ | 2.34 |
| | | ಆರ್ಟಿಫಿಶಿಯಲ್ ಲಿಂಬ್‌ಕ್ಯಾಂಪ್ | 0.72 |
| | | ಪುನರ್ವಸತಿ ಕಾಲೋನಿಯಲ್ಲಿ ಶೌಚಾಲಯ ನಿರ್ಮಾಣ | 1.18 |
| | | ಶಾಲಾ ಮಕ್ಕಳಿಗೆ ಸಮವಸ್ತ್ರ ಹಾಗೂ ಪುಸ್ತಕ ಸರಬರಾಜು | 2.35 |
| | | ಶಾಲಾ ಕಟ್ಟಡ ದುರಸ್ತಿ | 11.80 |
| | | ಚೇಳ್ಯಾರು ಪಿ.ಹೆಚ್.ಸಿ ಗೆ ಅನುದಾನ | 3.91 |
| | | ಚೇಳ್ಯಾರುಪುನರ್ವಸತಿ ಕಾಲೋನಿ ಕುಡಿಯುವ ನೀರಿನ ಯೋಜನೆ | 5.9 |
| | | ಚೇಳ್ಯಾರು ಪುನರ್ವಸತಿ ಕಾಲೋನಿಯಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ | 9.5 |
| | | ಪುನರ್ವಸತಿ ಕಾಲೋನಿಯಲ್ಲಿ ಸ್ವಚ್ಛಭಾರತ್ ಅಭಿಯಾನ ಕಾರ್ಯಕ್ರಮ | 5.5 |
| | | ಶಾಲಾ ಮಕ್ಕಳಿಗೆ ಸಮವಸ್ತ್ರ ಹಾಗೂ ಪುಸ್ತಕ ಸರಬರಾಜು | 0.64 |
| | | | 59.07 |

14

# ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 460
2. ಸದಸ್ಯರ ಹೆಸರು : ಶ್ರೀ ರವಿಸುಬ್ರಹ್ಮಣ್ಯ. ಎಲ್.ಎ (ಬಸವನಗುಡಿ)
3. ಉತ್ತರಿಸುವ ದಿನಾಂಕ : 02/02/2021
4. ಉತ್ತರಿಸುವ ಸಚಿವರ ಹೆಸರು : ಮಾನ್ಯ ಮುಖ್ಯ ಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರಿ ನೌಕರರಿಗೆ 2021 ನೇ ಸಾಲಿನ ಅವರ ಹಕ್ಕಿನಲ್ಲಿರುವ ಗಳಿಕೆ ರಜೆ ಅಧ್ಯರ್ಪಿಸಿ ನಗದೀಕರಣ ಪಡೆಯುವ ಸೌಲಭ್ಯವನ್ನು ರದ್ದುಗೊಳಿಸಿರುವ ಆದೇಶವನ್ನು ಹಿಂಪಡೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಸದರಿ ಆದೇಶವನ್ನು ಹಿಂಪಡೆಯಲಾಗಿದೆ. |
| ಆ) | ಹಾಗಿದ್ದಲ್ಲಿ, ಸದರಿ ಹಿಂಪಡೆದ ಆದೇಶವನ್ನು ಯಾವ ದಿನಾಂಕದಂದು ಜಾರಿಗೊಳಿಸ ಲಾಗುವುದು? (ಹಿಂಪಡೆದ ಆದೇಶದ ಪ್ರತಿ ನೀಡುವುದು) | ಸರ್ಕಾರಿ ಆದೇಶ ಸಂಖ್ಯೆ: ಆಇ 7(ಇ) ಸೇನಿಸೇ 2020, ದಿ:28/01/2021ನ್ನು ಹೊರಡಿಸುವ ಮೂಲಕ ತತ್‌ಕ್ಷಣದಿಂದ ಜಾರಿಗೊಳಿಸಿ ಆದೇಶಿಸಿದೆ. (ಪ್ರತಿಯನ್ನು ಲಗತ್ತಿಸಿದೆ). |

ಸಂಖ್ಯೆ: ಆಇ 1(ಇ) ಸೇನಿಸೇ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯ ಮಂತ್ರಿ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: 2021 ನೇ ಸಾಲಿನ ಅವಧಿಗೆ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣ ಪಡೆಯುವ ಸೌಲಭ್ಯವನ್ನು ನಿಯತಗೊಳಿಸುವ ಬಗ್ಗೆ.**

**ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ:ಆಇ 5 ಸೇನಿಸೇ 2012, ದಿನಾಂಕ:14.06.2012.**

**2. ಸರ್ಕಾರಿ ಆದೇಶ ಸಂಖ್ಯೆ: ಆಇ 7(ಇ) ಸೇನಿಸೇ 2020, ದಿನಾಂಕ:04/01/2021**

**ಪ್ರಸ್ತಾವನೆ:**

ಮೇಲೆ ಓದಲಾದ(1)ರ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 118(2)ರ ಸೌಲಭ್ಯ ಪಡೆಯುವ ಸಲುವಾಗಿ, ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ (ಆಯಾ ವರ್ಷದ ಜನವರಿ 1ರಿಂದ ಡಿಸೆಂಬರ್ 31ರೊಳಗೆ) 15 ದಿನಗಳಿಗೆ ಮೀರದ ಗಳಿಕೆ ರಜೆಯನ್ನು ಅಧ್ಯರ್ಪಿಸಿ, ರಜಾ ವೇತನಕ್ಕೆ ಸಮನಾದ ನಗದೀಕರಣ ಪಡೆಯಬಹುದಾದ ಸೌಲಭ್ಯವನ್ನು ದಿ:01/01/2013ರಿಂದ ಜಾರಿಗೊಳಿಸಲಾಗಿದೆ.

ಕೋವಿಡ್-19ರ ಹಿನ್ನೆಲೆಯಲ್ಲಿ ಸರ್ಕಾರವು ತೀವ್ರ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಹಿನ್ನೆಲೆಯಲ್ಲಿ 2021ನೇ ಸಾಲಿನ ಕ್ಯಾಲೆಂಡರ್ ವರ್ಷ ದಿನಾಂಕ:01/01/2021 ರಿಂದ ದಿನಾಂಕ:31/12/2021 ರವರೆಗಿನ ಅವಧಿಗೆ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣ ಪಡೆಯುವ ಸೌಲಭ್ಯವನ್ನು ಮೇಲೆ ಓದಲಾದ(2)ರ ಆದೇಶದಲ್ಲಿ ರದ್ದುಗೊಳಿಸಿ ಆದೇಶಿಸಿತ್ತು.

ಪ್ರಸಕ್ತ, ಸರ್ಕಾರವು 2021 ನೇ ಸಾಲಿನ ಅವಧಿಯ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣ ಪಡೆಯುವ ಅವಕಾಶವನ್ನು ಪುನರುಜ್ಜೀವನಗೊಳಿಸಲು ಉದ್ದೇಶಿಸಿದ್ದು, ಈ ಹಿನ್ನೆಲೆಯಲ್ಲಿ ದಿ:04/01/2021ರ ಉಲ್ಲೇಖಿತ(2)ರಲ್ಲಿನ ಸರ್ಕಾರದ ಆದೇಶವನ್ನು ಹಿಂಪಡೆಯಲಾಗಿದೆ ಮತ್ತು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 7(ಇ) ಸೇನಿಸೇ 2020 ಬೆಂಗಳೂರು, ದಿನಾಂಕ: 28.01.2021**

2021 ನೇ ಸಾಲಿನ ಬ್ಲಾಕ್ ಅವಧಿಗೆ ಗರಿಷ್ಟ 15 ದಿನಗಳಿಗೆ ಮೀರದ ಗಳಿಕೆ ರಜೆಯನ್ನು ಅಧ್ಯರ್ಪಿಸಿ ರಜಾ ವೇತನಕ್ಕೆ ಸಮನಾದ ನಗದೀಕರಣ ಸೌಲಭ್ಯ ಪಡೆಯುವ ಯೋಜನೆಯನ್ನು ತತ್‌ಕ್ಷಣದಿಂದ ಜಾರಿಗೊಳಿಸಿ ಆದೇಶಿಸಿದೆ.

ಎಲ್ಲಾ ವೃಂದದ ಅರ್ಹ ಅಧಿಕಾರಿ/ನೌಕರರು ಒಂದು ತಿಂಗಳ ಮುಂಚಿತ ನೋಟಿಸ್ ನೀಡಿ ಜನವರಿ 2021 ರಿಂದ ಡಿಸೆಂಬರ್ 2021 ರವರೆಗಿನ ಅವಧಿಯಲ್ಲಿ ಅವರ ಇಚ್ಛೆಯಂತೆ ಯಾವುದೇ ತಿಂಗಳಿನಲ್ಲಿ ಗಳಿಕೆ ರಜೆ ನಗದೀಕರಣ ಪ್ರಯೋಜನ ಪಡೆಯಲು ಅರ್ಹರಾಗಿರುತ್ತಾರೆ.

ಗೆಜೆಟೆಡ್ ಅಧಿಕಾರಿಗಳ ಸಂಬಂಧದಲ್ಲಿ 2021ನೇ ಸಾಲಿನ ಗಳಿಕೆ ರಜೆ ನಗದೀಕರಣ ಸೌಲಭ್ಯ ಮಂಜೂರಾತಿ ಉದ್ದೇಶಕ್ಕಾಗಿ ಮಾತ್ರ, ಹೆಚ್‌ಆರ್‌ಎಂಎಸ್ ನಲ್ಲಿ ಲಭ್ಯವಿರುವ ಅಧಿಕಾರಿಗಳ ಗಳಿಕೆ ರಜೆ ಲೆಕ್ಕಾಚಾರದ ಆಧಾರದ ಮೇಲೆ ನಗದೀಕರಣವನ್ನು ಮಂಜೂರು ಮಾಡಲು ಸಕ್ಷಮ ರಜೆ ಮಂಜೂರಾತಿ ಪ್ರಾಧಿಕಾರಿಗಳು ಕ್ರಮ ವಹಿಸತಕ್ಕದ್ದು ಮತ್ತು ಮಹಾಲೇಖಪಾಲರು ಲೆಕ್ಕಾಚಾರದ ಬಗ್ಗೆ ಯಾವುದೇ ವ್ಯತ್ಯಾಸವನ್ನು ತಿಳಿಸಿದಲ್ಲಿ ಅದನ್ನು ಸರಿಪಡಿಸುವ ಮತ್ತು ಅದರನ್ವಯದ ಆರ್ಥಿಕ ಸೌಲಭ್ಯಗಳಿಗೆ ಮಾತ್ರ ಅರ್ಹವಾಗುವ ಷರತ್ತಿಗೊಳಪಡಿಸಿ ಮಂಜೂರು ಮಾಡತಕ್ಕದ್ದು.

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 118 ರಲ್ಲಿ ನಿಯಮಿಸಿರುವಂತಹ ಗಳಿಕೆ ರಜೆ ನಗದೀಕರಣ ನಿಯಂತ್ರಣಕ್ಕೆ ಸಂಬಂಧಿಸಿದ ಇತರೆ ಷರತ್ತುಗಳು ಅನ್ವಯವಾಗುತ್ತವೆ.

...ಪುಟ_2ಕ್ಕೆ

ಈ ಆದೇಶವು ಸರ್ಕಾರದಿಂದ ಸಹಾಯಾನುದಾನ/ಅನುದಾನ ಪಡೆಯುವ ಅಥವಾ ಪಡೆಯದಿರುವ ಎಲ್ಲಾ ಕರ್ನಾಟಕ ಸರ್ಕಾರದ ಎಲ್ಲಾ ಸಂಸ್ಥೆಗಳ/ಉದ್ಯಮಗಳ ನೌಕರರಿಗೂ ಸಂಬಂಧಿತ ಸಂಸ್ಥೆ/ಉದ್ಯಮಗಳ ಆರ್ಥಿಕ ಸ್ಥಿತಿಗೊಳಪಟ್ಟು ನಿಯತಗೊಳ್ಳತಕ್ಕದ್ದು.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

H.R. Lalitha
**(ಹೆಚ್.ಆರ್.ಲಲಿತ),**
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಆರ್ಥಿಕ ಇಲಾಖೆ (ಸೇವೆಗಳು-1 & 3).**

**ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 50 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು ಕೋರಿ ಕಳುಹಿಸಿದೆ.**

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಪೋಸ್ಟ್.ಬಾಕ್ಸ್ ಸಂಖ್ಯೆ-5398, ಬೆಂಗಳೂರು-560001
2. ಮಹಾಲೇಖಪಾಲರು (ಇ & ಆರ್ಎಸ್ಎ). ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಪೋಸ್ಟ್.ಬಾಕ್ಸ್ ಸಂಖ್ಯೆ-5398, ಬೆಂಗಳೂರು-560001
3. ಮಹಾಲೇಖಪಾಲರು (ಎ & ಇ), ಕರ್ನಾಟಕ, ಪೋಸ್ಟ್.ಬಾಕ್ಸ್ ಸಂಖ್ಯೆ-5329/5369, ಪಾರ್ಕ ಹೌಸ್ ರೋಡ್, ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು/ಅಪರಮುಖ್ಯ ಕಾರ್ಯದರ್ಶಿಗಳು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಗುಲ್ಬರ್ಗ.
9. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
10. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು.
11. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
12. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಬೆಂಗಳೂರು.
13. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
14. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತು, ಬೆಂಗಳೂರು.
15. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
16. ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸಸೌಧ, ಬೆಂಗಳೂರು.
17. ಪ್ರಾಜೆಕ್ಟ್ಆಫೀಸರ್, ಹೆಚ್.ಆರ್.ಎಂ.ಎಸ್, ಕೊಠಡಿ ಸಂಖ್ಯೆ:145-ಎ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
18. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.
19. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
20. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
21. ಕರ್ನಾಟಕ ಸರ್ಕಾರಿ ಸಚಿವಾಲಯದ ಗ್ರಂಥಾಲಯ; ವಿಧಾನ ಮಂಡಲದ ಗ್ರಂಥಾಲಯ.
22. ವಾರಪತ್ರ/ಶಾಖೆಯ ರಕ್ಷಾ ಕಡತ.

**[ಕ್ರಮ ಸಂಖ್ಯೆ:1 ರಿಂದ 3 ಹಾಗೂ 10 ರಿಂದ 17 ರವರೆಗೆ ನಮೂದಿತವಾದ ಅಧಿಕಾರಿಗಳಿಗೆ ಪತ್ರದ ಮೂಲಕ].**

34

503

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 503 |
| ಸದಸ್ಯರ ಹೆಸರು | : | ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ) |
| ಉತ್ತರಿಸಬೇಕಾದ ದಿನಾಂಕ | : | 02.02.2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

*******

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದ ಬಿಟಿಪಿಎಸ್, ವೈಟಿಪಿಎಸ್ ಮತ್ತು ಆರ್‌ಟಿಪಿಎಸ್ ಪ್ಲಾಂಟ್‌ಗಳು ಒಂದು ದಿನಕ್ಕೆ ಎಷ್ಟು ಯೂನಿಟ್ ವಿದ್ಯುತ್ ಉತ್ಪಾದಿಸುತ್ತಿವೆ; | ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳಾದ ಆರ್‌ಟಿಪಿಎಸ್, ಬಿಟಿಪಿಎಸ್ ಮತ್ತು ವೈಟಿಪಿಎಸ್‌ಗಳ ಪ್ರಸ್ತುತ 2020-21ನೇ ಸಾಲಿನ (ದಿನಾಂಕ: 01.04.2020 – 27.01.2021) ವಿದ್ಯುತ್ ಉತ್ಪಾದನಾ ವಿವರ ಕೆಳಕಂಡಂತಿವೆ:<br>ದಶ ಲಕ್ಷ ಯೂನಿಟ್‌ಗಳಲ್ಲಿ.<br>ಶಾಖೋತ್ಪನ್ನ ವಿದ್ಯುತ್ ಕೇಂದ್ರ / 2020-21 (01.04.2020 – 27.01.2021) ವಿದ್ಯುತ್ ಉತ್ಪಾದನೆ / ಪ್ರತಿದಿನ ಸರಾಸರಿ ವಿದ್ಯುತ್ ಉತ್ಪಾದನೆ:<br>ಆರ್‌ಟಿಪಿಎಸ್ / 2277.64 / 7.54<br>ಬಿಟಿಪಿಎಸ್ / 1797.09 / 5.95<br>ವೈಟಿಪಿಎಸ್ / 2543.17 / 8.42 |
| ಆ) | ಈ ಪ್ಲಾಂಟ್‌ಗಳಲ್ಲಿ ಒಂದು ಯೂನಿಟ್ ಉತ್ಪಾದನೆಗೆ ಎಷ್ಟು ಹಣ ಖರ್ಚಾಗುವುದು; (ಸಂಪೂರ್ಣ ವಿವರವನ್ನು ನೀಡುವುದು) | ಈ ಪ್ಲಾಂಟ್‌ಗಳಲ್ಲಿ ಒಂದು ಯೂನಿಟ್ ಉತ್ಪಾದನೆಗೆ ತಗಲುವ ಖರ್ಚಿನ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಇ) | ಈ ಪ್ಲಾಂಟ್‌ಗಳು ಉತ್ಪಾದಿಸುವ ಒಂದು ಯೂನಿಟ್ ವಿದ್ಯುತ್ ಅನ್ನು ಸರ್ಕಾರಕ್ಕೆ ಎಷ್ಟು ರೂ.ಗಳಿಗೆ ಮಾರಾಟ ಮಾಡುತ್ತಿದೆ? (ವಿವರವನ್ನು ನೀಡುವುದು) | ಈ ಪ್ಲಾಂಟ್‌ಗಳಲ್ಲಿ ಒಂದು ಯೂನಿಟ್‌ನ ಮಾರಾಟ ದರದ ವಿವರಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. |

**ಸಂಖ್ಯೆ: ಎನರ್ಜಿ 17 ಪಿಪಿಎಂ 2021**

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

503

## ಅನುಬಂಧ–1

ರೂ./ಯೂನಿಟ್

| ಕೇಂದ್ರ | ಪ್ರತಿ ಯೂನಿಟ್‌ನ ಉತ್ಪಾದನೆಗೆ ತಗಲುವ ವೆಚ್ಚ | | |
|---|---|---|---|
| | ಸ್ಥಿರ ವೆಚ್ಚ | ವೇರಿಯಬಲ್ ವೆಚ್ಚ | ಒಟ್ಟು ವೆಚ್ಚ |
| ರಾಶಾವಿಕೇಂದ್ರ ಘಟಕ 1-7 | 0.77 | 2.90 | **3.67** |
| ರಾಶಾವಿಕೇಂದ್ರ ಘಟಕ -8 | 1.15 | 2.90 | **4.05** |
| ಬಶಾವಿಕೇಂದ್ರ ಘಟಕ -1 | 0.76 | 2.95 | **3.71** |
| ಬಶಾವಿಕೇಂದ್ರ ಘಟಕ -2 | 1.05 | 2.80 | **3.85** |
| ಬಶಾವಿಕೇಂದ್ರ ಘಟಕ -3 | 1.60 | 2.80 | **4.41** |
| ಯಶಾವಿಕೇಂದ್ರ ಘಟಕ -1 & 2 | 1.77 | 2.70 | **4.48** |

## ಅನುಬಂಧ–2

ರೂ./ಯೂನಿಟ್

| ಕೇಂದ್ರ | ಪ್ರತಿ ಯೂನಿಟ್‌ನ ಮಾರಾಟ ದರ | | |
|---|---|---|---|
| | ಸಾಮರ್ಥ್ಯದ ಚಾರ್ಜಸ್ | ವೇರಿಯಬಲ್ ಚಾರ್ಜಸ್ | ಮಾರಾಟ ದರ |
| ರಾಶಾವಿಕೇಂದ್ರ ಘಟಕ 1-7 | 0.90 | 2.90 | **3.80** |
| ರಾಶಾವಿಕೇಂದ್ರ ಘಟಕ -8 | 1.31 | 2.90 | **4.21** |
| ಬಶಾವಿಕೇಂದ್ರ ಘಟಕ -1 | 0.92 | 2.95 | **3.87** |
| ಬಶಾವಿಕೇಂದ್ರ ಘಟಕ -2 | 1.23 | 2.80 | **4.03** |
| ಬಶಾವಿಕೇಂದ್ರ ಘಟಕ -3 | 1.97 | 2.80 | **4.77** |
| ಯಶಾವಿಕೇಂದ್ರ ಘಟಕ -1 & 2 | 2.10 | 2.70 | **4.80** |

# ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 505
2. ಸದಸ್ಯರ ಹೆಸರು : ಶ್ರೀ ಬಸವನಗೌಡ ದದ್ದಲ
3. ಉತ್ತರಿಸಬೇಕಾದ ದಿನಾಂಕ : 02.02.2021
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಮಾನವಿ ತಾಲ್ಲೂಕಿನ ದದ್ದಲ ಏತ ನೀರಾವರಿ ಯೋಜನೆ ಕಾಮಗಾರಿ ಕಳೆದ 20 ವರ್ಷಗಳ ಹಿಂದೆ ಪ್ರಾರಂಭವಾಗಿದ್ದು, ಪ್ರಸ್ತುತ ಈ ಯೋಜನೆ ಯಾವ ಹಂತದಲ್ಲಿದೆ; | ದದ್ದಲ್ ಏತ ನೀರಾವರಿ ಯೋಜನೆ ಕಾಮಗಾರಿಯನ್ನು ನಬಾರ್ಡ ಸಾಲಸೌಲಭ್ಯದಡಿ ಕೈಗೊಳ್ಳಲು ರೂ.485.00 ಲಕ್ಷಗಳಿಗೆ ಆರ್.ಐ.ಡಿ.ಎಫ್–8 ಯೋಜನೆಯಡಿ ದಿನಾಂಕ:30-10-2001 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಮುಖ್ಯ ಇಂಜಿನೀಯರ್ ಸಣ್ಣ ನೀರಾವರಿ ಉತ್ತರ ವಲಯ, ವಿಜಯಪುರ ರವರು ದಿನಾಂಕ:8-11-2001 ರಂದು ಸದರಿ ಕಾಮಗಾರಿಯ ರೂ.485.00 ಲಕ್ಷಗಳ ಅಂದಾಜಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.<br>1.ಈ ಯೋಜನೆಯ ಸಿವ್ಹಿಲ್ ಕಾಮಗಾರಿ ಪೂರ್ಣಗೊಂಡಿರುತ್ತದೆ.<br>2.ಒಟ್ಟು 6220.ಮೀ ಉದ್ದಕ್ಕೆ ರೈಜಿಂಗ್ ಮೇನ್ ಅಳವಡಿಸಬೇಕಾಗಿದ್ದು, ಸದರಿ ಕಾಮಗಾರಿಯ ಗುತ್ತಿಗೆದಾರರು 5665ಮೀ.ಉದ್ದಕ್ಕೆ ರೈಜಿಂಗ್ ಮೇನ್ ಅಳವಡಿಸಿರುತ್ತಾರೆ.<br>3.ಗುತ್ತಿಗೆದಾರರು ಪಂಪಿಂಗ್ ಮಶಿನರಿ, ಮೋಟಾರ್ಸ್, ಸ್ಟಾರ್ಟರ್, ಓ.ಸಿ.ಬಿ. ಮತ್ತು ಟ್ರಾನ್ಸಫರ್ಮರ್ ಗಳನ್ನು ಒದಗಿಸಿರುತ್ತಾರೆ. 2009ನೇ ಸಾಲಿನಲ್ಲಿ ಉಂಟಾದ ತುಂಗಭದ್ರಾ ನದಿ ಪ್ರವಾಹದ ಪರಿಸ್ಥಿತಿಯಲ್ಲಿ ಈ ಯೋಜನೆಗೆ ಅಳವಡಿಸಲಾದ ಮೋಟಾರ್, ಸ್ಟಾರ್ಟರ್, ಓ.ಸಿ.ಬಿ. ಮತ್ತು ಟ್ರಾನ್ಸಫರ್ಮರ್‌ಗಳು ಸಂಪೂರ್ಣ ಮುಳುಗಡೆಯಾಗಿರುತ್ತವೆ ಮತ್ತು 2 ಟ್ರಾನ್ಸಫಾರ್ಮರ್‌ಗಳು ನೀರಿನಲ್ಲಿ ಮುಳುಗಡೆಯಾಗಿದ್ದರಿಂದ ಹಾನಿಗೊಳಗಾಗಿರುತ್ತವೆ. |
| ಆ | ಈ ಯೋಜನೆಗೆ ಇದುವರೆಗೂ ಎಷ್ಟು ಅನುದಾನ ನೀಡಲಾಗಿದೆ ಹಾಗೂ ಎಷ್ಟು ಹಣ ಖರ್ಚು ಮಾಡಲಾಗಿದೆ; | 4. ವಿದ್ಯುತ್ ಸರಬರಾಜು ಲೈನ್ ಕಾಮಗಾರಿಯನ್ನು ಬಹುತೇಕವಾಗಿ ಪೂರ್ಣಗೊಳಿಸಲಾಗಿರುತ್ತದೆ. ಈ ಯೋಜನೆಗೆ ಇದುವರೆಗೂ ರೂ.685.46 ಲಕ್ಷ ಖರ್ಚು ಮಾಡಲಾಗಿರುತ್ತದೆ.<br>5.ಕಾಮಗಾರಿಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಿ ಚಾಲನೆಗೊಳಿಸಲು ರೂ.1406.00 ಲಕ್ಷಗಳ ಅವಶ್ಯಕತೆ ಇರುತ್ತದೆ, ವಿವರವಾದ ಯೋಜನಾ ವರದಿಯು ಸರ್ಕಾರದಲ್ಲಿ ಪರಿಶೀಲನೆಯ ಹಂತದಲ್ಲಿರುತ್ತದೆ. |
| ಇ | ಈ ಕಾಮಗಾರಿ ಇದುವರೆಗೂ ಪೂರ್ಣಗೊಳ್ಳದಿರಲು ಅಥವಾ ವಿಳಂಬ ವಾಗಿರುವುದಕ್ಕೆ ಕಾರಣಗಳೇನು; | ದದ್ದಲ್ ಏತ ನೀರಾವರಿ ಯೋಜನೆಯು ಮೂರು ಭಾಗಗಳನ್ನು ಒಳಗೊಂಡಿರುತ್ತವೆ.<br>(1)ಸಿವ್ಹಿಲ್ ಕಾಮಗಾರಿ<br>(2)ರೈಜಿಂಗ್ ಮೇನ್ ಕಾಮಗಾರಿ<br>(3)ಪಂಪಿಂಗ್ ಮಶಿನರಿ, ಮೋಟಾರ್, ಸ್ಟಾರ್ಟರ್, ಓ.ಸಿ.ಬಿ. ಮತ್ತು ಟ್ರಾನ್ಸಫರ್ಮರ್ ಅಳವಡಿಸುವ ಕಾಮಗಾರಿ.<br>**(1) ಸಿವ್ಹಿಲ್ ಕಾಮಗಾರಿ:–** ಈ ಕಾಮಗಾರಿಯನ್ನು ಶ್ರೀ ಪಿ.ವೆಂಕಟೇಶ್ವರ್ ರಾವ್ ಗುತ್ತಿಗೆದಾರರಿಗೆ ರೂ.56.57 ಲಕ್ಷಗಳಿಗೆ ವಹಿಸಿಕೊಟ್ಟಿದ್ದು ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದು, ರೂ.94.41 ಲಕ್ಷಗಳ ವೆಚ್ಚ ಆಗಿರುತ್ತದೆ. |

| | | |
|---|---|---|
| | | **(2)ರೈಜಿಂಗ್ ಮೇನ್ ಕಾಮಗಾರಿ:-** ಈ ಕಾಮಗಾರಿಯನ್ನು ಮೆ:ಕರ್ನಾಟಕ ಸಿಮೆಂಟ್ ಪೈಪ್ ಫ್ಯಾಕ್ಟರಿ, ಹುಬ್ಬಳ್ಳಿ ಇವರಿಗೆ ರೂ.250.70 ಲಕ್ಷಗಳಿಗೆ ವಹಿಸಿಕೊಟ್ಟಿದ್ದು, ಸದರಿ ಕಾಮಗಾರಿಯಲ್ಲಿ ಒಟ್ಟು 6220.ಮೀ ಉದ್ದಕ್ಕೆ ರೈಜಿಂಗ್ ಮೇನ್ ಅಳವಡಿಸಲು ಅವಕಾಶ ಕಲ್ಪಿಸಿದ್ದು, ಸದರಿ ಗುತ್ತಿಗೆದಾರರು 5665ಮೀ.ಉದ್ದಕ್ಕೆ ರೈಜಿಂಗ್ ಮೇನ್ ಅಳವಡಿಸಿದ್ದು, ರೈಜಿಂಗ್‌ಮೇನ ಕಾಮಗಾರಿ ಪೂರ್ಣಗೊಳಿಸಿರುವುದಿಲ್ಲ. ಸದರಿ ಕಾಮಗಾರಿಗೆ ರೂ.241.41 ಲಕ್ಷಗಳ ವೆಚ್ಚ ಆಗಿರುತ್ತದೆ.<br>**(3) ಪಂಪಿಂಗ್ ಮಶಿನರಿ, ಮೋಟಾರ್, ಸ್ಟಾರ್ಟರ್, ಓ.ಸಿ.ಬಿ. ಮತ್ತು ಟ್ರಾನ್ಸಫರ್ಮರ್ ಅಳವಡಿಸುವ ಕಾಮಗಾರಿ.:-** ಈ ಕಾಮಗಾರಿಯನ್ನು ಮೆ:ವಾಟರ್ ಆಂಡ್ ಪಾವರ್ ಇಂಜಿನೀಯರಿಂಗ್ ಬೆಂಗಳೂರು ಇವರಿಗೆ ರೂ.362.70 ಲಕ್ಷಗಳಿಗೆ ವಹಿಸಿಕೊಟ್ಟು, ದಿನಾಂಕ:30-6-2007 ರಂದು ಕಾಮಗಾರಿ ಪ್ರಾರಂಭಿಸಲಾಗಿದೆ. ಈ ಕಾಮಗಾರಿಯನ್ನು ಪೂರ್ಣಗೊಳಿಸಲು 12 ತಿಂಗಳು ಕಾಲಾವಕಾಶ ನಿಗಡಿಪಡಿಸಲಾಗಿದೆ. ಈ ಅವಧಿಯಲ್ಲಿ ಗುತ್ತಿಗೆದಾರರು ಪಂಪಿಂಗ್ ಮಶಿನರಿ, ಮೋಟಾರ್, ಸ್ಟಾರ್ಟರ್, ಓ.ಸಿ.ಬಿ. ಮತ್ತು ಟ್ರಾನ್ಸಫರ್ಮರ್ ಒದಗಿಸಿರುತ್ತಾರೆ. ಇದುವರೆಗೆ ಗುತ್ತಿಗೆದಾರರಿಗೆ ರೂ.234.49 ಲಕ್ಷಗಳು ಪಾವತಿಯಾಗಿರುತ್ತದೆ. 2009ನೇ ಸಾಲಿನ ಸಪ್ಟೆಂಬರ್ ತಿಂಗಳಿನಲ್ಲಿ ದಿನಾಂಕ:28, 29 ಮತ್ತು 30 ರಂದು ಉಂಟಾದ ತುಂಗಭದ್ರಾ ನದಿ ಪ್ರವಾಹದ ಪರಿಸ್ಥಿತಿಯಲ್ಲಿ ಈ ಯೋಜನೆಗೆ ಅಳವಡಿಸಲಾದ ಮೋಟಾರ್, ಸ್ಟಾರ್ಟರ್, ಓ.ಸಿ.ಬಿ. ಮತ್ತು ಟ್ರಾನ್ಸಫರ್ಮರ್‌ಗಳು ಸಂಪೂರ್ಣ ಮುಳುಗಡೆಯಾಗಿರುತ್ತವೆ ಮತ್ತು 2 ಟ್ರಾನ್ಸಫಾರ್ಮರ್‌ಗಳು ನೀರಿನಲ್ಲಿ ಮುಳುಗಡೆಯಾಗಿದ್ದರಿಂದ ಹಾನಿಗೊಳಗಾಗಿರುತ್ತವೆ. ಹಾಗೂ ಕಾಮಗಾರಿಯನ್ನು ಪೂರ್ಣಗೊಳಿಸಲು ಆಸಕ್ತಿ ತೋರಿಸದ ಕಾರಣ ಗುತಿಗೆದಾರರ ಟೆಂಡರನ್ನು ಗುತ್ತಿಗೆದಾರರ ಹೊಣೆ ಹಾಗೂ ಬಾಧ್ಯತೆ ಆಧಾರದ ಮೇಲೆ (ರಿಸ್ಕ ಆಂಡ್ ಕಾಸ್ಟ್) ರದ್ದುಪಡಿಸಲಾಗಿರುತ್ತದೆ. ಸದರಿ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಪ್ರಸ್ತಾವನೆಯನ್ನು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ವಿಜಯಪುರ ರವರ ಕಚೇರಿ ಪತ್ರ ಸಂ:3652/ದಿನಾಂಕ:7-8-2015 ರಲ್ಲಿ ಮುಖ್ಯ ಇಂಜಿನೀಯರು, ಲೋಕೋಪಯೋಗಿ ಇಲಾಖೆ, (ದಕ್ಷಿಣ) ಮತ್ತು (ಉತ್ತರ) ವಲಯ, ಬೆಂಗಳೂರು ಮತ್ತು ಧಾರವಾಡ ಇವರಿಗೆ ಸಲ್ಲಿಸಲಾಗಿದೆ.<br>ಮೇಲಿನ ಗುತ್ತಿಗೆಯಲ್ಲಿ ಉಳಿದ ಕೆಲಸವಾದ ಯೋಜನೆಗೆ ಬೇಕಾದ ವಿದ್ಯುತ್ ಸರಬರಾಜು ಪೂರೈಸುವ ಕೆಲಸವನ್ನು ರೂ.115.15 ಲಕ್ಷಗಳಿಗೆ ಶ್ರೀ ಮಹಾದೇವಪ್ಪ ಬಸಪ್ಪ ಇದರಮನಿ ಗುತ್ತಿಗೆದಾರರು ಇವರಿಗೆ ನೀಡಲಾಗಿದ್ದು ಈ ಗುತ್ತಿಗೆದಾರರು ತಮಗೆ ವಹಿಸಿದ ವಿದ್ಯುತ್ ಸರಬರಾಜು ಲೈನ್ ಕಾಮಗಾರಿಯನ್ನು ಬಹುತೇಕ ಪೂರ್ಣಗೊಳಿಸಿ ರೂ. 115.16 ಲಕ್ಷ ಮೊತ್ತವನ್ನು ಪಾವತಿಸಲಾಗಿರುತ್ತದೆ.<br>ಶ್ರೀ ಮಹಾದೇವಪ್ಪ ಇದರಮನಿ ಇವರು ವಿದ್ಯುತ್ ಸರಬರಾಜು ಲೈನ್ ಕಾಮಗಾರಿ ಪೂರ್ಣಗೊಳಿಸಿದ್ದರೂ ಸಹ ಲೈನ್ ಚಾರ್ಜ್ ಮಾಡಲು ಸಾಧ್ಯವಾಗಿರುವುದಿಲ್ಲ. ಸಪ್ಟೆಂಬರ್ 2009 ಮತ್ತು ಅಕ್ಟೋಬರ್ 2009ರ ಪ್ರವಾಹದಲ್ಲಿ ಹಾನಿಯಾದ ಮೋಟಾರ್, ಪಂಪ್, ಸ್ಟಾಟರ್, ಟ್ರಾನ್ಸಫಾರ್ಮರ್‌ಗಳನ್ನು ಮೆ:ವಾಟರ್ ಆಂಡ್ ಪಾವರ್ ಇಂಜಿನೀಯರಿಂಗ್ ಬೆಂಗಳೂರು ಇವರು ಸರಿಪಡಿಸಿ ನೀಡದ ಕಾರಣ ವಿದ್ಯುತ್ ಸರಬರಾಜು ಲೈನ್ ಚಾರ್ಜ್ ಮಾಡಿರುವುದಿಲ್ಲ.<br>ದಿನಾಂಕ:21-10-2018 ರಂದು ಕಾರ್ಯನಿರ್ವಾಹಕ ಇಂಜಿನೀಯರರು |

| | | |
|---|---|---|
| | | ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು ಹಾಗೂ ಶಾಖಾಧಿಕಾರಿಗಳೊಂದಿಗೆ ಏತ ನೀರಾವರಿ ಯೋಜನೆಯ ಸ್ಥಳವನ್ನು ಪರಿಶೀಲನೆ ಮಾಡಿದಾಗ ಸಿವಿಲ್ ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿರುವುದು ಕಂಡು ಬಂದಿರುತ್ತದೆ. ಇನ್ನುಳಿದ ರೈಜಿಂಗ್ ಮೇನ್, ಪಂಪ್, ಮೋಟಾರ್, ಸ್ಟಾರ್ಟರ್ಸ್, ಟ್ರಾನ್ಸಫಾರ್ಮರ್‌ಗಳ ಕೆಲಸ ಪ್ರವಾಹದಿಂದ ಹಾನಿಯಾಗಿರುವುದು ಕಂಡು ಬಂದಿರುತ್ತದೆ. ತಜ್ಞರ ಮಾರ್ಗದರ್ಶನ ಪಡೆದು ಮತ್ತು **ರೈಸಿಂಗ್ ಮೇನ್, ಪಂಪಿಂಗ್ ಮಶಿನರಿ, ಮೋಟಾರ್, ಸ್ಟಾರ್ಟರ್, ಓ.ಸಿ.ಬಿ. ಮತ್ತು ಟ್ರಾನ್ಸಫರ್ಮರ್** ಇವುಗಳ ಕಾಮಗಾರಿಯನ್ನು ಪೂರ್ಣಗೊಳಿಸಿರುವ ಬಗ್ಗೆ ವರದಿಯನ್ನು ಪಡೆಯಲಾಗಿದ್ದು, ಕಾಮಗಾರಿಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಿ ಚಾಲನೆಗೊಳಿಸಲು ರೂ. 1406.00 ಲಕ್ಷಗಳ ಅವಶ್ಯಕತೆ ಇರುತ್ತದೆ. ಆರ್ಥಿಕ ಸಂಪನ್ಮೂಲಗಳನ್ನಾಧರಿಸಿ ಅನುದಾನದ ಲಭ್ಯತೆಯನುಸಾರ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು. |
| ಈ | ಈ ವಿಳಂಬಕ್ಕೆ ಕಾರಣವಾದವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಈ ಯೋಜನೆಯಲ್ಲಿ ಪ್ರಮುಖವಾಗಿ ಪಂಪಿಂಗ್ ಮಶಿನರಿ, ಮೋಟಾರ್, ಸ್ಟಾರ್ಟರ್, ಓ.ಸಿ.ಬಿ. ಮತ್ತು ಟ್ರಾನ್ಸಫರ್ಮರ್ ಅಳವಡಿಸುವ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲರಾದ ಮೆ:ವಾಟರ್ ಆಂಡ್ ಪಾವರ್ ಇಂಜಿನೀಯರಿಂಗ್, ಬೆಂಗಳೂರು ಗುತ್ತಿಗೆದಾರರ ಹೊಣೆ ಹಾಗೂ ಬಾಧ್ಯತೆ ಆಧಾರದ ಮೇಲೆ (ರಿಸ್ಕ ಆಂಡ್ ಕಾಸ್ಟ್) ಅವರ ಗುತ್ತಿಗೆಯನ್ನು ರದ್ದುಪಡಿಸಲಾಗಿರುತ್ತದೆ. ಸದರಿ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಪ್ರಸ್ತಾವನೆಯನ್ನು ಸಕ್ಷಮ ಪ್ರಾಧಿಕಾರವಾದ ಮುಖ್ಯ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ದಕ್ಷಿಣ ವಲಯ, ಬೆಂಗಳೂರು ರವರಿಗೆ ಮತ್ತು ಉತ್ತರ ವಲಯ, ಧಾರವಾಡ ಇವರಿಗೆ ಕಳುಹಿಸಲಾಗಿರುತ್ತದೆ. |
| ಉ | ಈ ಕಾಮಗಾರಿಯನ್ನು ಪೂರ್ಣಗೊಳಿಸಿ ರೈತರಿಗೆ ಅನುಕೂಲ ಮಾಡಿ ಕೊಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? (ಸಂಪೂರ್ಣ ವಿವರಗಳನ್ನು ನೀಡುವುದು) | ಕಾಮಗಾರಿಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಿ ಚಾಲನೆಗೊಳಿಸಲು ರೂ. 1406.00 ಲಕ್ಷಗಳ ಹೆಚ್ಚುವರಿ ಅನುದಾನದ ಅವಶ್ಯಕತೆ ಇರುತ್ತದೆ. ಹಣಕಾಸಿನ ಲಭ್ಯತೆಯ ಮೇರೆಗೆ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಆದ್ಯತೆಯ ಅನುಸಾರ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು. |

ಕಡತ ಸಂಖ್ಯೆ: MID 31 LAQ 2021

(ಜೆ.ಸಿ.ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು.

516

# ಕರ್ನಾಟಕ ವಿಧಾನ ಸಭೆ

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 516 |
| 2. | ಸದಸ್ಯರ ಹೆಸರು | : | ಶ್ರೀ ಸತೀಶ್‌ರೆಡ್ಡಿ ಎಂ. (ಬೊಮ್ಮನಹಳ್ಳಿ) |
| 3. | ಉತ್ತರಿಸುವ ದಿನಾಂಕ | : | 02-02-2021 |
| 4. | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬನ್ನೇರುಘಟ್ಟ ರಸ್ತೆ-ಬೇಗೂರು ರಸ್ತೆ-ಸರ್ಜಾಪುರ ರಸ್ತೆ ಅಗಲೀಕರಣ ಕಾಮಗಾರಿ ಯಾವಾಗ ಪ್ರಾರಂಭವಾಗಿರುತ್ತದೆ; ಕಾಮಗಾರಿ ಮುಕ್ತಾಯಕ್ಕೆ ಹಾಕಿಕೊಂಡಿರುವ ಕಾಲಮಿತಿ ಏನು; | ಬನ್ನೇರುಘಟ್ಟ ಮುಖ್ಯರಸ್ತೆಯನ್ನು ಪರಿಷ್ಕೃತ ಮಹಾನಕ್ಷೆ-2015 ರಂತೆ ಜೇಡಿಮರ ಜಂಕ್ಷನ್‌ನಿಂದ ಕೋಳಿಫಾರಂ ಗೇಟ್‌ವರೆಗೂ ರಸ್ತೆ ಅಗಲೀಕರಣಗೊಳಿಸಲು ಗುತ್ತಿಗೆ ಅವಧಿಯನ್ನು 18 ತಿಂಗಳುಗಳಿಗೆ ನಿಗಧಿಪಡಿಸಿ ದಿನಾಂಕ: 01-09-2017 ರಂದು ಕಾರ್ಯಾದೇಶವನ್ನು ನೀಡಿ ದಿನಾಂಕ: 28-02-2019 ರೊಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿತ್ತು ಹಾಗೂ ಅಗಲೀಕರಣ ಕಾಮಗಾರಿಗೆ ಈಗಾಗಲೇ ಕೆಲವು ಖಾಸಗಿ ಸ್ವತ್ತುಗಳನ್ನು ಟಿ.ಡಿ.ಆರ್ ನಿಯಮಾವಳಿ ಅನ್ವಯ ಭೂ-ಸ್ವಾಧೀನ ಪಡಿಸಿಕೊಂಡು, ಕಾಮಗಾರಿಯಲ್ಲಿ ಶೇ.52 ರಷ್ಟು ಪ್ರಗತಿ ಸಾಧಿಸಲಾಗಿರುತ್ತದೆ. ಇನ್ನುಳಿದ ಖಾಸಗಿ ಭೂ-ಮಾಲೀಕರು ಟಿ.ಡಿ.ಆರ್ ಯೋಜನೆಗೆ ಆಸಕ್ತಿಯನ್ನು ತೋರಿಸದೆ ಹಣದ ರೂಪದ ಭೂ ಪರಿಹಾರವನ್ನು ಕೋರುತ್ತಿರುವ ಹಿನ್ನೆಲೆಯಲ್ಲಿ ಕಾಮಗಾರಿ ಮುಕ್ತಾಯಗೊಳಿಸಲು ವಿಳಂಬವಾಗುತ್ತಿರುತ್ತದೆ ಹಾಗೂ ಟಿ.ಡಿ.ಆರ್ ಯೋಜನೆಯನ್ನು "ಹೆಚ್ಚು ಉತ್ತೇಜನಕಾರಿಯಾಗಿ" ಮಾರ್ಪಡಿಸಲು ಸರ್ಕಾರದ ಮಟ್ಟದಲ್ಲಿ ಕ್ರಮಕೈಗೊಳ್ಳಲಾಗುತ್ತಿದ್ದು, ಅಗಲೀಕರಣ ಕಾಮಗಾರಿಯನ್ನು ದಿನಾಂಕ: 31-12-2021 ರೊಳಗಾಗಿ ಪೂರ್ಣಗೊಳಿಸಲು ಕಾಲಮಿತಿ ನಿಗದಿಪಡಿಸಿಕೊಳ್ಳಲಾಗಿದೆ.<br><br>ಬೇಗೂರು ಮುಖ್ಯರಸ್ತೆಯನ್ನು ಪರಿಷ್ಕೃತ ಮಹಾನಕ್ಷೆ-2015ರಂತೆ ಪ್ರಥಮ ಹಂತದಲ್ಲಿ ಹೊಸೂರು ರಸ್ತೆಯಿಂದ ಬೇಗೂರು ಗ್ರಾಮದವರೆಗೆ ಅಗಲೀಕರಣಗೊಳಿಸುವ ಕಾಮಗಾರಿಗೆ ಗುತ್ತಿಗೆ ಅವಧಿಯನ್ನು 18 ತಿಂಗಳುಗಳಿಗೆ ನಿಗಧಿಪಡಿಸಿ ದಿನಾಂಕ: 15-04-2020 ರಂದು ಕಾರ್ಯಾದೇಶವನ್ನು ನೀಡಲಾಗಿದ್ದು, ರಸ್ತೆ ಅಗಲೀಕರಣಕ್ಕೆ ಅವಶ್ಯವಿರುವ ಖಾಸಗಿ ಸ್ವತ್ತುಗಳ ಭೂಸ್ವಾಧೀನವನ್ನು ಸರ್ಕಾರದ/ಪಾಲಿಕೆಯ ಬೊಕ್ಕಸಕ್ಕೆ ಆರ್ಥಿಕ ಹೊರೆಯಾಗದಂತೆ ಖಾಸಗಿ ಭೂ-ಮಾಲೀಕರಿಗೆ ಟಿ.ಡಿ.ಆರ್ ಆಧಾರದ ಮೇಲೆ ಭೂ-ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿತ್ತು.<br><br>ಆದರೆ, ಖಾಸಗಿ ಸ್ವತ್ತಿನ ಭೂ-ಮಾಲೀಕರು ಟಿ.ಡಿ.ಆರ್ ಯೋಜನೆಗೆ ಆಸಕ್ತಿಯನ್ನು ತೋರಿಸದೆ ಹಣದ ರೂಪದ ಭೂ ಪರಿಹಾರವನ್ನು ಕೋರುತ್ತಿರುವುದರಿಂದ **ಸದರಿ ರಸ್ತೆ ಅಗಲೀಕರಣ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ ಹಾಗೂ** ಪ್ರಸ್ತುತ ಟಿ.ಡಿ.ಆರ್ ಯೋಜನೆಯನ್ನು "ಹೆಚ್ಚು ಉತ್ತೇಜನಕಾರಿಯಾಗಿ" ಮಾರ್ಪಡಿಸಲು |

. . .2/-

| | | |
|---|---|---|
| | | ಸರ್ಕಾರದ ಮಟ್ಟದಲ್ಲಿ ಕ್ರಮಕೈಗೊಳ್ಳಲಾಗುತ್ತಿದ್ದು, ಹಣದ ರೂಪದಲ್ಲಿ ಭೂ ಪರಿಹಾರವನ್ನು ನೀಡಿದ ಪಕ್ಷದಲ್ಲಿ ಸರ್ಕಾರ/ಪಾಲಿಕೆಯ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುವುದರಿಂದ ಭೂಮಾಲೀಕರೊಂದಿಗೆ ಹೆಚ್ಚಿನ ಸಭೆಗಳನ್ನು ನಡೆಸಿ ಮನವೊಲಿಸಲು ಪ್ರಯತ್ನಿಸಲಾಗುತ್ತಿರುತ್ತದೆ ಮತ್ತು ಭೂಸ್ವಾಧೀನಕ್ಕೆ ಅನುಗುಣವಾಗಿ ಹಂತ ಹಂತವಾಗಿ ಕಾಮಗಾರಿಯನ್ನು ಶೀಘ್ರದಲ್ಲಿ ಪ್ರಾರಂಭಿಸಿ ಮೊದಲನೇ ಹಂತದ ಹೊಸೂರು ರಸ್ತೆಯಿಂದ ಬೇಗೂರು ಗ್ರಾಮದವರೆಗಿನ ಅಗಲೀಕರಣ ಕಾಮಗಾರಿಯನ್ನು ದಿನಾಂಕ: 31–08–2022 ರೊಳಗಾಗಿ ಪೂರ್ಣಗೊಳಿಸಲು ಕಾಲಮಿತಿ ನಿಗಧಿಪಡಿಸಿಕೊಳ್ಳಲಾಗಿದೆ.<br><br>**<u>ಸರ್ಜಾಪುರ ಮುಖ್ಯರಸ್ತೆಯನ್ನು</u>** ಪರಿಷ್ಕೃತ ಮಹಾ ನಕ್ಷೆ –2015 ರಂತೆ 45.00 ಮೀ ಅಗಲಕ್ಕೆ ಇಬ್ಬಲೂರು ಜಂಕ್ಷನ್‌ನಿಂದ ಕಾರ್ಮೆಲ್‌ರಾಮ್ ಜಂಕ್ಷನ್ ವರೆಗೆ ಅಗಲೀಕರಣಗೊಳಿಸಲು ಗುತ್ತಿಗೆ ಅವಧಿಯನ್ನು 24 ತಿಂಗಳುಗಳಿಗೆ ನಿಗಧಿಪಡಿಸಿ ದಿನಾಂಕ: 14–03–2018 ರಂದು ಕಾರ್ಯಾದೇಶವನ್ನು ನೀಡಿ ದಿನಾಂಕ: 13–03–2020 ರೊಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿತ್ತು ಹಾಗೂ ಅಗಲೀಕರಣ ಕಾಮಗಾರಿಗೆ ಈಗಾಗಲೇ ಕೆಲವು ಖಾಸಗಿ ಸ್ವತ್ತುಗಳನ್ನು ಟಿ.ಡಿ.ಆರ್ ನಿಯಮಾವಳಿಯ ಅನ್ವಯ ಭೂ–ಸ್ವಾಧೀನಪಡಿಸಿಕೊಂಡು, ಕಾಮಗಾರಿಯಲ್ಲಿ ಶೇ.35 ರಷ್ಟು ಪ್ರಗತಿ ಸಾಧಿಸಿದ್ದು, Main Carriage Way ನ 03 ಪಥದ ಜೋಡಿ ರಸ್ತೆಯನ್ನು ಪೂರ್ಣಗೊಳಿಸಲಾಗಿದೆ ಹಾಗೂ ಸರ್ವೀಸ್ ರಸ್ತೆಗಳನ್ನು ನಿರ್ಮಿಸಲು ಅವಶ್ಯವಿರುವ ಇನ್ನುಳಿದ ಖಾಸಗಿ ಭೂ–ಮಾಲೀಕರು ಟಿ.ಡಿ.ಆರ್ ಯೋಜನೆಗೆ ಆಸಕ್ತಿಯನ್ನು ತೋರಿಸದೆ ಹಣದ ರೂಪದ ಭೂ ಪರಿಹಾರವನ್ನು ಕೋರುತ್ತಿರುವ ಹಿನ್ನೆಲೆಯಲ್ಲಿ ಕಾಮಗಾರಿ ಮುಕ್ತಾಯಗೊಳಿಸಲು ವಿಳಂಬವಾಗುತ್ತಿರುತ್ತದೆ ಹಾಗೂ ಟಿ.ಡಿ.ಆರ್ ಯೋಜನೆಯನ್ನು "ಹೆಚ್ಚು ಉತ್ತೇಜನಕಾರಿಯಾಗಿ" ಮಾರ್ಪಡಿಸಲು ಸರ್ಕಾರದ ಮಟ್ಟದಲ್ಲಿ ಕ್ರಮಕೈಗೊಳ್ಳಲಾಗುತ್ತಿದ್ದು, ಅಗಲೀಕರಣ ಕಾಮಗಾರಿಯನ್ನು ದಿನಾಂಕ: 31-12-2021ರೊಳಗಾಗಿ ಪೂರ್ಣಗೊಳಿಸಲು ಕಾಲಮಿತಿ ನಿಗದಿಪಡಿಸಿಕೊಳ್ಳಲಾಗಿದೆ. |
| ಆ | ರೈತರು ಮತ್ತು ಮನೆ ಮಾಲೀಕರು ತಮ್ಮ ಜಾಗವನ್ನು ಟಿ.ಡಿ.ಆರ್ ಯೋಜನೆಯಡಿ ಬಿಟ್ಟುಕೊಡಲು ಆಸಕ್ತಿ ತೋರದ ಕಾರಣ ರಸ್ತೆ ಕಾಮಗಾರಿ ಸಮರ್ಪಕವಾಗಿ ಆಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರೈತರು ಮತ್ತು ಮನೆ ಮಾಲೀಕರು ತಮ್ಮ ಜಾಗವನ್ನು ಟಿ.ಡಿ.ಆರ್ ಯೋಜನೆಯಡಿ ಬಿಟ್ಟುಕೊಡಲು ಆಸಕ್ತಿ ತೋರದ ಕಾರಣ ರಸ್ತೆ ಅಗಲೀಕರಣ ಕಾಮಗಾರಿ ಸಮರ್ಪಕವಾಗಿ ಆಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಪ್ರಸ್ತುತ ಇರುವ ಟಿ.ಡಿ.ಆರ್ ವ್ಯವಸ್ಥೆಯನ್ನು "ಹೆಚ್ಚಿನ ಉತ್ತೇಜನಕಾರಿಯಾಗಿ" ಮಾಡಲು ಸರ್ಕಾರದ ಮಟ್ಟದಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ. |

. . .3/–

54

516



| | | |
|---|---|---|
| ಇ | ಹಾಗಿದ್ದಲ್ಲಿ, ಈ ಸಮಸ್ಯೆಯನ್ನು ಬಗೆಹರಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; ಟಿ.ಡಿ.ಆರ್ ನೀಡುವುದಕ್ಕೆ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು? | ರಸ್ತೆ ಅಗಲೀಕರಣದಿಂದ ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ಹೊರೆಯಾಗದಂತೆ ಖಾಸಗಿ ಭೂ-ಮಾಲೀಕರಿಗೆ ಟಿ.ಡಿ.ಆರ್ ಆಧಾರದ ಮೇಲೆ ಭೂ-ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದ್ದು, ಖಾಸಗಿ ಭೂ-ಮಾಲೀಕರು ಟಿ.ಡಿ.ಆರ್ ಯೋಜನೆಗೆ ಆಸಕ್ತಿಯನ್ನು ತೋರಿಸದೆ ಹಣದ ರೂಪದ ಭೂ ಪರಿಹಾರವನ್ನು ಕೋರುತ್ತಿರುವುದರಿಂದ **ಅಗಲೀಕರಣ ಕಾಮಗಾರಿಗಳನ್ನು ಪ್ರಾರಂಭಿಸಲು/ಪೂರ್ಣಗೊಳಿಸಲು ಸಾಧ್ಯವಾಗುತ್ತಿರುವುದಿಲ್ಲ.** ಪ್ರಸ್ತುತ ಟಿ.ಡಿ.ಆರ್ ಯೋಜನೆಯನ್ನು "ಹೆಚ್ಚು ಉತ್ತೇಜನಕಾರಿಯಾಗಿ" ಮಾರ್ಪಡಿಸಲು ಸರ್ಕಾರದ ಮಟ್ಟದಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ನಅಇ 13 ಎಂಎನ್‌ವೈ 2021 (ಇ)**

ಬಿ.ಎಸ್.

(ಬಿ.ಎಸ್. ಯಡಿಯೂರಪ್ಪ.)
ಮುಖ್ಯಮಂತ್ರಿ

# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 528 |
| ಸದಸ್ಯರ ಹೆಸರು | : | ಶ್ರೀ ರೇವಣ್ಣ ಹೆಚ್.ಡಿ (ಹೊಳೆನರಸೀಪುರ) |
| ಉತ್ತರಿಸಬೇಕಾದ ದಿನಾಂಕ | : | 02-02-2021 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಹಾಗೂ ಸಕ್ಕರೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಹಾಸನ ಜಿಲ್ಲೆ ಹೊಳೆನರಸೀಪುರ ಪುರಸಭೆಯಲ್ಲಿ ವಿವಿಧ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು State Finance Commission ಯೋಜನೆಯಡಿ ಮತ್ತು ಮಾನ್ಯ ಮುಖ್ಯಮಂತ್ರಿಯವರ ವಿವೇಚನಾ ನಿಧಿಯಡಿಯಲ್ಲಿ ರೂ.10.00 ಕೋಟಿ ಮತ್ತು ರೂ.8.00 ಕೋಟಿಗಳ ಅನುದಾನವನ್ನು ಹಿಂದಿನ ಮೈತ್ರಿ ಸರ್ಕಾರದ ಅವಧಿಯಲ್ಲಿ ಮಂಜೂರಾತಿಯಾಗಿ ಆದೇಶ ನೀಡಿರುವುದು ನಿಜವೇ; ಹಾಗಿದ್ದಲ್ಲಿ, ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿಗಳ ವಿವೇಚನಾ ನಿಧಿಯಡಿಯಲ್ಲಿ ನಿಗಧಿಪಡಿಸಿದ ರೂ 10.00 ಕೋಟಿ ಮತ್ತು ರೂ.8.00 ಕೋಟಿಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ಪುರಸಭೆ ವತಿಯಿಂದ ಹಾಗೂ ಲೋಕೋಪಯೋಗಿ ಇಲಾಖೆಯ ವತಿಯಿಂದ ತೆಗೆದುಕೊಂಡಿರುವ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು ; | ಹೌದು, ಹಾಸನ ಜಿಲ್ಲೆ ಹೊಳೆನರಸೀಪುರ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಪತ್ರ ಸಂಖ್ಯೆ: ನಅಇ 145 ಎಸ್‌ಎಫ್‌ಸಿ 2018 ದಿ: 15-11-2018ರಲ್ಲಿ ರೂ 10.00 ಕೋಟಿಗಳನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ: ನಅಇ 03 ಎಸ್‌ಎಫ್‌ಸಿ 2019 ದಿ: 09-01-2019ರಲ್ಲಿ ರೂ.8.00 ಕೋಟಿಗಳ ಎಸ್.ಎಫ್.ಸಿ ವಿಶೇಷ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ.<br><br>• ಎಸ್.ಎಫ್.ಸಿ ವಿಶೇಷ ಅನುದಾನ ರೂ.10.00 ಕೋಟಿ ಅನುದಾನದಲ್ಲಿ ಲೋಕೋಪಯೋಗಿ ಇಲಾಖೆಯ ವತಿಯಿಂದ ವಾಣಿಜ್ಯ ಸಂಕೀರ್ಣ ನಿರ್ಮಿಸುವ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>• ಎಸ್.ಎಫ್.ಸಿ ವಿಶೇಷ ಅನುದಾನ ರೂ.8.00 ಕೋಟಿ ಅನುದಾನದಲ್ಲಿ 9 ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿ ಈ ಪೈಕಿ 4 ಕಾಮಗಾರಿಗಳನ್ನು ಪುರಸಭಾ ವತಿಯಿಂದ ಹಾಗೂ 5 ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.<br><br>**<u>ಪುರಸಭೆ ವತಿಯಿಂದ ಅನುಷ್ಠಾನ ಗೊಳಿಸಲಾಗುತ್ತಿರುವ ಕಾಮಗಾರಿಗಳ ವಿವರ:</u>**<br>1) ಹೊಳೆನರಸೀಪುರ ಪುರಸಭಾ ವ್ಯಾಪ್ತಿಯ ಬಸ್ ಸ್ಟ್ಯಾಂಡ್ ಮತ್ತು ರೈಲ್ವೆ ನಿಲ್ದಾಣಗಳ ಮಧ್ಯೆ ನೂತನವಾಗಿ ನಿರ್ಮಾಣ ಆಗುತ್ತಿರುವ ತರಕಾರಿ ಮಾರುಕಟ್ಟೆಗೆ ನೆಲ ಅಂತಸ್ತಿನವರೆಗೆ ಕಾಮಗಾರಿ ಮುಕ್ತಾಯಗೊಂಡಿದ್ದು ಕಾಮಗಾರಿಯ (ಉಳಿಕೆ ಬಿಲ್ ಹೊಂದಾಣಿಕೆ ಬಾಬ್ತು ರೂ 2.70ಕೋಟಿಗಳು).<br><br>2) ಹೊಳನರಸೀಪುರ ಪುರಸಭಾ ವ್ಯಾಪ್ತಿಯ ಮುಖ್ಯ ರಸ್ತೆಗಳಲ್ಲಿ ಹಾಗೂ ವೃತ್ತಗಳಲ್ಲಿ ಪಟ್ಟಣದ ಸುರಕ್ಷತೆಗಾಗಿ ಸಿ.ಸಿ ಕ್ಯಾಮರಾಗಳನ್ನು ಅಳವಡಿಸುವ ಕಾಮಗಾರಿ (ಅಂದಾಜು ಮೊತ್ತ ರೂ |

| | | |
|---|---|---|
| | | 0.50 ಕೋಟಿ).<br><br>3) ಹೊಳೆನರಸೀಪುರ ಪುರಸಭೆಯ ಸ್ವಚ್ಛತಾ ಹಾಗೂ ಒಳಚರಂಡಿ ವಿಭಾಗಕ್ಕೆ ಹೂಳು ಎತ್ತುವ ಯಂತ್ರ (Desilting machine) ಖರೀದಿಸುವುದು ಅಂದಾಜು ಮೊತ್ತ ರೂ.0.08 ಕೋಟಿ.<br><br>4) ಹೊಳೆನರಸೀಪುರ ಪುರಸಭೆಯ ಸ್ವಚ್ಛತಾ ವಿಭಾಗಕ್ಕೆ ಪಟ್ಟಣದ ವ್ಯಾಪ್ತಿಯಲ್ಲಿ ಕ್ರಿಮಿನಾಶಕ ಸಿಂಪಡಿಸಲು Vehicle mounted spraying machine ಖರೀದಿಸುವುದು (ಅಂದಾಜು ಮೊತ್ತ ರೂ.0.07 ಕೋಟಿ).<br><br>**<u>ಲೋಕೋಪಯೋಗಿ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳ ವಿವರ :</u>**<br>1) ಹೊಳೆನರಸೀಪುರ ಪುರಸಭಾ ಕಚೇರಿಯ ಮುಖ್ಯಾಧಿಕಾರಿಗಳ ಕೊಠಡಿ ಮತ್ತು ಅಧ್ಯಕ್ಷರು, ಉಪಾಧ್ಯಾಕ್ಷರ ಕೊಠಡಿಗಳನ್ನು ಉನ್ನತೀಕರಿಸುವುದು ಹಾಗೂ ಕಛೇರಿಯ ಎಲ್ಲಾ ಶಾಖೆಗಳಿಗೆ ಪ್ರತ್ಯೇಕ ಕೊಠಡಿಗಳನ್ನು ನಿರ್ಮಿಸುವುದು ಹಾಗೂ ಉನ್ನತೀಕರಿಸುವುದು, ಸಾರ್ವಜನಿಕರು ಮತ್ತು ವಯೋವೃದ್ಧರು ಕಚೇರಿ ಕೆಲಸ ಕಾರ್ಯಗಳಿಗಾಗಿ ಹತ್ತಿ ಇಳಿಯಲು ಲಿಫ್ಟ್ ಅಳವಡಿಸುವುದು ಮತ್ತು ಕಛೇರಿಯ 3ನೇ ಅಂತಸ್ತಿನಲ್ಲಿ ಕಚೇರಿ ಉಪಯೋಗಕ್ಕಾಗಿ ಶೆಡ್ ನಿರ್ಮಾಣ ಕಾಮಗಾರಿ(ಅಂದಾಜು ಮೊತ್ತ ರೂ 0.50 ಕೋಟಿ).<br><br>2) ಹೌಸಿಂಗ್ ಬೋರ್ಡ್ ವತಿಯಿಂದ ಪುರಸಭೆಗೆ ಹಸ್ತಾಂತರಗೊಂಡ ವಾಣಿಜ್ಯ ಮಳಿಗೆಯ ಉನ್ನತೀಕರಣ ಹಾಗೂ ಮೊದಲನೇ ಅಂತಸ್ತು ನಿರ್ಮಾಣ ಕಾಮಗಾರಿ (ಅಂದಾಜು ಮೊತ್ತ ರೂ 3.00 ಕೋಟಿ).<br><br>3) ಹೊಳೆನರಸೀಪುರ ಪುರಸಭಾ ವ್ಯಾಪ್ತಿಯ ಅರಕಲಗೂಡು ಮುಖ್ಯ ರಸ್ತೆಯಲ್ಲಿರುವ ಎ.ಪಿ.ಎಂ.ಸಿ ಯಾರ್ಡ್ ಮುಂಭಾಗದ ಖಾಲಿ ನಿವೇಶನದಲ್ಲಿ ಹೊಸದಾಗಿ ವಾಣಿಜ್ಯ ಸಂಕೀರ್ಣ ನಿರ್ಮಾಣ ಕಾಮಗಾರಿ(ಅಂದಾಜು ಮೊತ್ತ ರೂ 0.50 ಕೋಟಿ).<br><br>4) ಹೊಳೆನರಸೀಪುರ ಪುರಸಭಾ ವ್ಯಾಪ್ತಿಯ ಅರಕಲಗೂಡು ಮುಖ್ಯ ರಸ್ತೆಯಲ್ಲಿರುವ |

528

| | | |
|---|---|---|
| | | ಎ.ಪಿ.ಎಂ.ಸಿ ಯಾರ್ಡ್ ಮುಂಭಾಗದ ಖಾಲಿ ನಿವೇಶನದಲ್ಲಿ ಹೊಸದಾಗಿ ವಾಣಿಜ್ಯ ಸಂಕೀರ್ಣ ನಿರ್ಮಾಣ ಕಾಮಗಾರಿ(ಅಂದಾಜು ಮೊತ್ತ ರೂ 0.50 ಕೋಟಿ).<br><br>5) ಹೊಳೆನರಸೀಪುರ ಪುರಸಭಾ ವ್ಯಾಪ್ತಿಯ ಬಸ್‌ಸ್ಟ್ಯಾಂಡ್ ಮುಂಭಾಗದ ವಾಣಿಜ್ಯ ಸಂಕೀರ್ಣದ ಮೊದಲನೇ ಅಂತಸ್ತು ನಿರ್ಮಾಣ ಕಾಮಗಾರಿ(ಅಂದಾಜು ಮೊತ್ತ ರೂ 0.30 ಕೋಟಿ).<br><br>6) ಹೊಳೆನರಸೀಪುರ ಪುರಸಭೆಗೆ ಸೇರಿದ ಪುರಸಭಾ ಕಛೇರಿಯ ಮುಂಭಾಗದಲ್ಲಿರುವ ವಾಣಿಜ್ಯ ಮಳಿಗೆ, ಟವರ್ ಬ್ಲಾಕ್ ಮೊದಲನೇ ತಿರುವು ಮತ್ತು ಎರಡನೇ ತಿರುವಿನ ವಾಣಿಜ್ಯ ಮಳಿಗೆಗಳು ಹಾಗೂ ಪುರಸಭಾ ಕಛೇರಿಯ ಮುಂಭಾಗದ ವಾಣಿಜ್ಯ ಮಳಿಗೆಯನ್ನು ದುರಸ್ತಿಪಡಿಸುವುದು ಹಾಗೂ ಬಣ್ಣ ಬಳಿಯುವುದು (ಅಂದಾಜು ಮೊತ್ತ ರೂ.0.35 ಕೋಟಿ). |
| (ಆ) | ಸದರಿ ಎಸ್.ಎಫ್.ಸಿ ಅನುದಾನದಡಿಯಲ್ಲಿ ಹೊಳೆನರಸೀಪುರ ಪುರಸಭೆಯ ವ್ಯಾಪ್ತಿಯಲ್ಲಿರುವ ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಗಳನ್ನು ಮುಗಿಸಿ ಗುತ್ತಿಗೆದಾರರಿಗೆ ತರಕಾರಿ ಮಾರುಕಟ್ಟೆ ರೂ.11.19 ಕೋಟಿಗಳಿಗೆ ಹಾಗೂ ಪುರಸಭೆಯ ವಾಣಿಜ್ಯ ಮಳಿಗೆಗೆ ರೂ.3.21 ಕೋಟಿಗಳ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ನಿಗಧಿಪಡಿಸಿದ ನಂತರ ಕಾಮಗಾರಿಗಳು ಪೂರ್ಣಗೊಂಡಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರದ ಪತ್ರ ಸಂಖ್ಯೆ: ನಅಇ 145 ಎಸ್‌ಎಫ್‌ಸಿ 2018 ದಿ: 05-01-2019ರಲ್ಲಿ ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ತರಕಾರಿ ಮಾರುಕಟ್ಟೆ ಮತ್ತು ವಾಣಿಜ್ಯ ಸಂಕೀರ್ಣಕ್ಕಾಗಿ ಮತ್ತು ಹಾಲಿ ಇರುವ ವಾಣಿಜ್ಯ ಮಳಿಗೆ ಉನ್ನತೀಕರಣ ಮತ್ತು ಮೊದಲನೇ ಅಂತಸ್ತಿನ ನಿರ್ಮಾಣ ಹಾಗೂ ಇತರೆ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲು ತಿಳಿಸಲಾಗಿರುತ್ತದೆ.<br><br>ಅದರಂತೆ, <u>ಲೋಕೋಪಯೋಗಿ ಇಲಾಖೆ ವತಿಯಿಂದ</u> ಟೆಂಡರ್ ಆಹ್ವಾನಿಸಲಾಗಿ ಗುತ್ತಿಗೆದಾರರಿಗೆ ರೂ.11.19 ಕೋಟಿ ಮೊತ್ತಕ್ಕೆ ಕಾಮಗಾರಿ ಕಾರ್ಯಾದೇಶ ನೀಡಲಾಗಿರುತ್ತದೆ. ಪ್ರಸ್ತುತ ಭೌತಿಕವಾಗಿ ಶೇ50ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು,ಅಂದರೆ ರೂ5.50ಕೋಟಿ ಮೊತ್ತದ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.<br><br>ಪುರಸಭೆಗೆ ಮಂಜೂರಾಗಿರುವ ರೂ 8.00 ಕೋಟಿ ವಿಶೇಷ ಅನುದಾನದಡಿ ಒಟ್ಟು 09 ಕಾಮಗಾರಿಗಳನ್ನು ಕೈಗೊಳ್ಳಲು ಕ್ರಿಯಾ ಯೋಜನೆ ಅನುಮೋದನೆ ನೀಡಲಾಗಿ <u>ಈ ಪೈಕಿ ಹೌಸಿಂಗ್ ಬೋರ್ಡ್ ವತಿಯಿಂದ ಪುರಸಭೆಗೆ ಹಸ್ತಾಂತರಗೊಂಡ</u> ವಾಣಿಜ್ಯ ಮಳಿಗೆಯ ಉನ್ನತೀಕರಣ ಹಾಗು ಮೊದಲನೇ ಅಂತಸ್ತು ನಿರ್ಮಾಣ ಕಾಮಗಾರಿಯನ್ನು ಅಂದಾಜು ಮೊತ್ತ |

| | | |
|---|---|---|
| | | ರೂ.3.00ಕೋಟಿಗಳಲ್ಲಿ ನಿರ್ಮಿಸಲು ಅನುಮೋದಿಸಲಾಗಿರುತ್ತದೆ. ಸದರಿ ಕಾಮಗಾರಿಯನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆ ವತಿಯಿಂದ ಟೆಂಡರ್ ಆಹ್ವಾನಿಸಲಾಗಿ ರೂ 3.21 ಕೋಟಿ ಮೊತ್ತದ ಕಾಮಗಾರಿ ಕಾರ್ಯಾದೇಶ ನೀಡಲಾಗಿರುತ್ತದೆ. ಪ್ರಸ್ತುತ ಭೌತಿಕವಾಗಿ ಶೇ80ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು ಅಂದರೆ ರೂ2.56 ಕೋಟಿ ಮೊತ್ತದ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ |
| (ಇ) | ಅನುಮೋದನೆಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ಆರ್ಥಿಕ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆ ತಡೆ ಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ತಡೆಹಿಡಿದಿರುವ ಅನುದಾನವನ್ನು ಬಿಡುಗಡೆಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | ಸರ್ಕಾರದ ಪತ್ರ ಸಂಖ್ಯೆ: ನಅಇ 222 ಎಸ್‌ಎಫ್‌ಸಿ 2019 ದಿ: 13-09-2019ರಲ್ಲಿ ಆರ್ಥಿಕ ಇಲಾಖೆಯ ನಿರ್ದೇಶನದನುಸಾರ ಹಾಗೂ ಇನ್ನು ಕಾಮಗಾರಿಗಳು ಆರಂಭವಾಗಿಲ್ಲದ್ದರಿಂದ ಹಿನ್ನಲೆಯಲ್ಲಿ ಎಸ್.ಎಫ್.ಸಿ ವಿಶೇಷ ಅನುದಾನದಡಿ ಹೊಳೆನರಸೀಪುರ ಪುರಸಭೆಗೆ ಮಂಜೂರು ಮಾಡಲಾಗಿದ್ದ ರೂ.10.00 ಕೋಟಿ ಹಾಗೂ ರೂ 8.00 ಕೋಟಿಗಳ ವಿಶೇಷ ಅನುದಾನಗಳನ್ನು ತಡೆಹಿಡಿಯಲಾಗಿರುತ್ತದೆ.<br><br>ಈಗಾಗಲೇ ತಡೆ ಹಿಡಿಯಲಾದ ಅನುದಾನದಲ್ಲಿ ಕಾಲಕಾಲಕ್ಕೆ ಹಂತ ಹಂತವಾಗಿ ಅನುದಾನವನ್ನು ಮುಂದುವರೆಸಲು ಕ್ರಮ ಕೈಗೊಳ್ಳಲಾಗಿದ್ದು, ರಾಜ್ಯದ ಆರ್ಥಿಕ ಸಂಪನ್ಮೂಲವನ್ನು ಪರಿಗಣಿಸಿ, ತಡೆ ಹಿಡಿಯಲಾದ ಮೊತ್ತವನ್ನು ಹಂತ ಹಂತವಾಗಿ ಬಿಡುಗಡೆಗೊಳಿಸಲು ಕ್ರಮವಹಿಸಲಾಗುತ್ತಿದೆ. |

ಕಡತ ಸಂಖ್ಯೆ:ನಅಇ 43 ಎಸ್.ಎಫ್.ಸಿ 2021

(signature)

**(ಎನ್. ನಾಗರಾಜ್, ಎಂ.ಟಿ.ಬಿ.)**
ಪೌರಾಡಳಿತ ಹಾಗೂ ಸಕ್ಕರೆ ಸಚಿವರು

## ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 551
2. ಸದಸ್ಯರ ಹೆಸರು : ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.
3. ಉತ್ತರಿಸಬೇಕಾದ ದಿನಾಂಕ : 02.02.2021
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ಕೊಡಗು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒಳಪಡುವ ಕೆರೆಗಳು ಎಷ್ಟು; ಅವು ಯಾವುವು; ಈ ಪೈಕಿ ಮಡಿಕೇರಿ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕೆಲವು ಕೆರೆಗಳಲ್ಲಿ ಕಳೆದ ಮೂರು ವರ್ಷಗಳಿಂದ ಬಿದ್ದ ಮಳೆಯಿಂದ ಹೂಳು ತುಂಬಿರುವುದಲ್ಲದೆ, ಕೆರೆಯ ತೂಬುಗಳು (ನಾಲೆಗಳು) ದುರಸ್ತಿಯಾಗಿದ್ದು, ಇದರ ಅಭಿವೃದ್ಧಿಗೆ ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಿದೆ: (ಪೂರ್ಣ ವಿವರ ನೀಡುವುದು | ಕೊಡಗು ಜಿಲ್ಲೆಯ ಮಡಿಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 19 ಕೆರೆಗಳು ಮತ್ತು ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 10 ಕೆರೆಗಳು ಒಟ್ಟು 29 ಕೆರೆಗಳು ಇರುತ್ತದೆ. ಕೊಡಗು ಜಿಲ್ಲೆಯ ಕೆರೆಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.<br><br>ಕೊಡಗು ಜಿಲ್ಲೆಯ ಮಡಿಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕೆರೆಗಳಲ್ಲಿ ಕಳೆದ ಮೂರು ವರ್ಷಗಳಿಂದ ಬಿದ್ದ ಮಳೆಯಿಂದ ಕೆರೆಯಲ್ಲಿ ಹೂಳು ತೆಗೆದಿರುವ, ಕೆರೆಗಳ ತೂಬುಗಳ ದುರಸ್ತಿ ಮತ್ತು ಅಭಿವೃದ್ಧಿಗಾಗಿ 2019-20ನೇ ಸಾಲಿನಲ್ಲಿ ರೂ.270.00 ಲಕ್ಷ ಅಂದಾಜು ಮೊತ್ತದಲ್ಲಿ 8 ಕಾಮಗಾರಿಗಳು ಮಂಜೂರಾಗಿದ್ದು, ರೂ.217.67 ಲಕ್ಷ ವೆಚ್ಚವಾಗಿದ್ದು, ಈ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಕಾಮಗಾರಿವಾರು ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |
| ಆ. | ಆಲೂರು ಸಿದ್ದಾಪುರದ ಹೊಸಗುತ್ತಿ ವ್ಯಾಪ್ತಿಯ ಏತ ನೀರಾವರಿ ಯೋಜನೆಯು ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದು, ಈವರೆವಿಗೂ ಕಾಮಗಾರಿ ಪೂರ್ಣಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ನಿಗದಿಪಡಿಸಿದ ಅನುದಾನವೆಷ್ಟು; | ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಆಲೂರು ಸಿದ್ದಾಪುರ ಗ್ರಾಮ ಪಂಚಾಯತಿಯ ಹೊಸಗುತ್ತಿ ಹೊಸಹಳ್ಳಿ ವ್ಯಾಪ್ತಿಯ ಏತ ನೀರಾವರಿ ಯೋಜನೆ ಕೈಗೊಳ್ಳಲು ಪ್ರಸ್ತಾವನೆಯಿದ್ದು, ಸದರಿ ಏತ ನೀರಾವರಿ ಮೂಲಕ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಗೆ ರೂ.700.00 ಲಕ್ಷ ಅನುದಾನದ ಅವಶ್ಯಕತೆಯಿದ್ದು, ಕಾಮಗಾರಿಯ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಿ ದಿ:05.08.2020 ರಂದು ಜರುಗಿದ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯಲ್ಲಿ ಮಂಡಿಸಿ ತೀರುವಳಿ ಪಡೆಯಲಾಗಿದೆ. |
| ಇ. | ಯಾವಾಗ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು? (ಪೂರ್ಣ ವಿವರ ನೀಡುವುದು) | ಅನುದಾನದ ಲಭ್ಯತೆಯ ಮೇರೆಗೆ ಕಾಮಗಾರಿಯನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು. |

ಸಂಖ್ಯೆ: MID 26 LAQ 2021

(ಜೆ.ಸಿ.ಮಾಧುಸ್ವಾಮಿ)
ಸಣ್ಣ ನೀರಾವರಿ ಸಚಿವರು.

## ಅನುಬಂಧ-1

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ)ಇವರ ಪ್ರಶ್ನೆ ಸಂಖ್ಯೆ: 551 ಕ್ಕೆ ಉತ್ತರ.

| ಕ್ರಸಂ | ಜಿಲ್ಲೆ | ತಾಲ್ಲೂಕು | ವಿಧಾನಸಭಾ ಕ್ಷೇತ್ರ | ಸಣ್ಣ ನೀರಾವರಿ ಕೆರೆಗಳ ಹೆಸರು | ಅಚ್ಚುಕಟ್ಟು (ಹೆ.) | ಷರಾ |
|---|---|---|---|---|---|---|
| 1 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಮುಳ್ಳೂರು ಜೋಡು ಕೆರೆ | 44.00 | |
| 2 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಬ್ಯಾಡಗಟ್ಟ ದೇವರ ಕೆರೆ | 41.00 | |
| 3 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಬಸವನ ಕೆರೆ | 44.86 | |
| 4 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಚಿನ್ನಳ್ಳಿ ದೇವರ ಕೆರೆ | 45.00 | |
| 5 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಪಾಲಗಡ ಕೆರೆ | 40.50 | |
| 6 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಕಾಮನ ಕೆರೆ | 40.50 | |
| 7 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಮೋರಿಕಲ್ ಬಸವನ ಹಳ್ಳಿ ಪೈಸಾರಿ ಕೆರೆ | 89.70 | |
| 8 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಮುಳ್ಳೂರು ಕೆರೆ | 44.24 | |
| 9 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಶಿಡಿಗಳಲೆ ಮಠದ ಕೆರೆ | 50.00 | |
| 10 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಗಣಗೂರು ಊರುಬಾಗಿಲು ಕೆರೆ | 125.00 | |
| 11 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಹೊನ್ನಮ್ಮನ ಕೆರೆ | 48.60 | |
| 12 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಆಲೂರು ಸಿದ್ದಾಪುರ ಕೆರೆ | 118.00 | |
| 13 | ಕೊಡಗು | ಸೋಮವಾರಪೇಟೆ | ಮಡಿಕೇರಿ | ದೊಡ್ಡಕಣಗಾಲು ಅಗಸನ ಕೆರೆ | 48.00 | |
| 14 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಮಾಲಂಬಿ ಗ್ರಾಮದ ದೊಡ್ಡ ಕೆರೆ | 40.00 | |
| 15 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಗಣಗೂರು ಕೆರೆ | 120.00 | |
| 16 | ಕೊಡಗು | ಸೋಮವಾರಪೇಟೆ | ಮಡಿಕೇರಿ | ದೊಡ್ಡಕಣಗಾಲು ಊರುಬಾಗಿಲು ಕೆರೆ | 120.00 | |
| 17 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಸಂಗಯ್ಯನಪುರ ಕೆರೆ | 112.00 | |
| 18 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಹಿತ್ತಲುಗದ್ದೆ ಕೆರೆ | 120.00 | |
| 19 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಮಾಲಂಬಿ ಕೆರೆ | 50.00 | |
| 20 | ಕೊಡಗು | ವಿರಾಜಪೇಟೆ | ವಿರಾಜಪೇಟೆ | ಮಾಯಂಗೇರಿ ಕೆರೆ | 55.80 | |
| 21 | ಕೊಡಗು | ವಿರಾಜಪೇಟೆ | ವಿರಾಜಪೇಟೆ | ಕುಂಜಿ ಕೆರೆ | 49.40 | |
| 22 | ಕೊಡಗು | ವಿರಾಜಪೇಟೆ | ವಿರಾಜಪೇಟೆ | ಪೈಸಾರಿ ಕೆರೆ | 40.00 | |
| 23 | ಕೊಡಗು | ವಿರಾಜಪೇಟೆ | ವಿರಾಜಪೇಟೆ | ಇಗ್ಗುತ್ತಪ್ಪ ಕೆರೆ | 45.00 | |
| 24 | ಕೊಡಗು | ವಿರಾಜಪೇಟೆ | ವಿರಾಜಪೇಟೆ | ಬೆಟ್ಟತ್ತೂರು ಕೆರೆ | 83.00 | |
| 25 | ಕೊಡಗು | ವಿರಾಜಪೇಟೆ | ವಿರಾಜಪೇಟೆ | ಪಾಲ್ದಾಳ ಕೆರೆ | 50.60 | |
| 26 | ಕೊಡಗು | ವಿರಾಜಪೇಟೆ | ವಿರಾಜಪೇಟೆ | ಕುಂದ ಪೈಸಾರಿ ಕೆರೆ | 63.60 | |
| 27 | ಕೊಡಗು | ವಿರಾಜಪೇಟೆ | ವಿರಾಜಪೇಟೆ | ಸಿದ್ದಾಪುರ ಕೆರೆ | 89.10 | |
| 28 | ಕೊಡಗು | ವಿರಾಜಪೇಟೆ | ವಿರಾಜಪೇಟೆ | ನಾಲ್ಕೇರಿ ಕೆರೆ | 90.00 | |
| 29 | ಕೊಡಗು | ವಿರಾಜಪೇಟೆ | ವಿರಾಜಪೇಟೆ | ವಡ್ಡರಮಾಡು ಕೆರೆ | 40.00 | |

551

ಘೋಷ್ವಾರೆ

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:551 ಕ್ಕೆ ಅನುಬಂಧ-2

| ಕ್ರ.ಸಂ | ವರ್ಷ | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ವೆಚ್ಚ | ಪೂರ್ಣಗೊಂಡಿರುವ ಕಾಮಗಾರಿಗಳ ಸಂಖ್ಯೆ | ಷರಾ |
|---|---|---|---|---|---|---|
| 1 | 2017-18 | ಯಾವುದೇ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ. | | | | |
| 2 | 2018-19 | | | | | |
| 3 | 2019-20 | 8 | 270.00 | 217.67 | 8 | |
| | ಒಟ್ಟು | 8 | **270.00** | **217.67** | 8 | |

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 551 ಕ್ಕೆ ಅನುಬಂಧ-2

ರೂ. ಲಕ್ಷಗಳಲ್ಲಿ

| ಕ್ರಸಂ. | ಲೆಕ್ಕ ಶೀರ್ಷಿಕೆ | ವರ್ಷ | ಜಿಲ್ಲೆ | ತಾಲೂಕು | ವಿಧಾನ ಸಭಾ ಕ್ಷೇತ್ರ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಒಟ್ಟು ವೆಚ್ಚ | ಕಾಮಗಾರಿಯ ಹಂತ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | 2017-18 | | | | | ಯಾವುದೂ ಇರುವುದಿಲ್ಲ | | | |
| | 2018-19 | | | | | ಯಾವುದೂ ಇರುವುದಿಲ್ಲ | | | |
| | 2019-20 | | | | | | | | |
| 1 | 4702-00-101-1-07-139 ಕೆರೆಗಳ ಆಧುನೀಕರಣ | 2019-20 | ಕೊಡಗು | ಸೋಮವಾರಪೇಟೆ | ಮಡಿಕೇರಿ | ನಿಡ್ತ ಗ್ರಾಮ ಪಂಚಾಯತಿಯ ಮುಳ್ಳೂರು ಜೋಡುಕೆರೆ ಏರಿ ಪುನರುಜ್ಜೀವನ ಕಾಮಗಾರಿ. | 45.00 | 44.97 | ಪೂರ್ಣಗೊಂಡಿದೆ. |
| 2 | 4702-00-101-1-07-139 ಕೆರೆಗಳ ಆಧುನೀಕರಣ | 2019-20 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಆಲೂರು ಸಿದ್ಧಾಪುರ ಕೆರೆ ಕಾಲುವೆಯ ಪುನರುಜ್ಜೀವನ ಕಾಮಗಾರಿ. | 50.00 | 49.08 | ಪೂರ್ಣಗೊಂಡಿದೆ. |
| 3 | 4702-00-101-1-07-139 ಕೆರೆಗಳ ಆಧುನೀಕರಣ | 2019-20 | ಕೊಡಗು | ಸೋಮವಾರಪೇಟೆ | ಮಡಿಕೇರಿ | ನಿಡ್ತ ಗ್ರಾಮಪಂಚಾಯತ್‌ನ ಮುಳ್ಳೂರು ಕೆರೆ ಏರಿ ಮತ್ತು ಕಾಲುವೆಯ ಪುನರುಜ್ಜೀವನ ಕಾಮಗಾರಿ. | 40.00 | 38.88 | ಪೂರ್ಣಗೊಂಡಿದೆ. |
| 4 | 4702-00-101-1-07-139 ಕೆರೆಗಳ ಆಧುನೀಕರಣ | 2019-20 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಆಲೂರು ಸಿದ್ಧಾಪುರ ಗ್ರಾಮಪಂಚಾಯತ್‌ನ ದೊಡ್ಡಕಣಗಾಲು ಉರುಬಾಗಿಲು ಕೆರೆಯ ಪುನರುಜ್ಜೀವನ ಕಾಮಗಾರಿ. | 35.00 | 34.93 | ಪೂರ್ಣಗೊಂಡಿದೆ. |
| 5 | 4702-00-101-1-07-139 ಕೆರೆಗಳ ಆಧುನೀಕರಣ | 2019-20 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಆಲೂರು ಸಿದ್ಧಾಪುರ ಗ್ರಾಮಪಂಚಾಯತ್‌ನ ಸಂಗಯ್ಯನಪುರ ಕೆರೆಯ ಪುನರುಜ್ಜೀವನ ಕಾಮಗಾರಿ. | 40.00 | 39.99 | ಪೂರ್ಣಗೊಂಡಿದೆ. |
| 6 | 4711-01-103-1-00-140 ಪ್ರವಾಹ ನಿಯಂತ್ರಣ ಕಾಮಗಾರಿಗಳು | 2019-20 | ಕೊಡಗು | ಮಡಿಕೇರಿ | ಮಡಿಕೇರಿ | ಬ್ಯಾಡಗೊಟ್ಟ ಗ್ರಾಮದ ಬಸವನ ಕೆರೆ ಮಳೆಯಿಂದ ಹಾನಿಯಾದ ಭಾಗದಲ್ಲಿ ಕೆರೆ ಅಭಿವೃದ್ಧಿಪಡಿಸಿ ಏರಿ ಸಂರಕ್ಷಣಾ ಕಾಮಗಾರಿ | 40.00 | - | ಪೂರ್ಣಗೊಂಡಿದೆ. |
| 7 | 4711-01-103-1-00-140 ಪ್ರವಾಹ ನಿಯಂತ್ರಣ ಕಾಮಗಾರಿಗಳು | 2019-20 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಆಲೂರು ಗ್ರಾಮದ ಆಲೂರು ಸಿದ್ಧಾಪುರಕೆರೆ ಮಳೆಯಿಂದ ಹಾನಿಯಾದ ಭಾಗದಲ್ಲಿ ಕೆರೆ ಅಭಿವೃದ್ಧಿಪಡಿಸಿ ಏರಿ ಸಂರಕ್ಷಣಾ ಕಾಮಗಾರಿ | 10.00 | 9.82 | ಪೂರ್ಣಗೊಂಡಿದೆ. |
| 8 | 4711-01-103-1-00-140 ಪ್ರವಾಹ ನಿಯಂತ್ರಣ ಕಾಮಗಾರಿಗಳು | 2019-20 | ಕೊಡಗು | ಸೋಮವಾರಪೇಟೆ | ಮಡಿಕೇರಿ | ಬಸವನಹಳ್ಳಿ ಗ್ರಾಮದ ಮೋರಿಕಲ್ ಬಸವನಹಳ್ಳಿ ಪೈಸಾರಿ ಕೆರೆ ಮಳೆಯಿಂದ ಹಾನಿಯಾದ ಭಾಗದಲ್ಲಿ ಕೆರೆ ಅಭಿವೃದ್ಧಿಪಡಿಸಿ ಏರಿ ಸಂರಕ್ಷಣಾ ಕಾಮಗಾರಿ | 10.00 | - | ಪೂರ್ಣಗೊಂಡಿದೆ. |
| | | | | | | | 270.00 | 217.67 | |

## ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 724
2) ಸದಸ್ಯರ ಹೆಸರು : ಶ್ರೀ ಮುನಿಯಪ್ಪ ವಿ
3) ಉತ್ತರಿಸಬೇಕಾದ ದಿನಾಂಕ : 02.02.2021
4) ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಚಿಕ್ಕಬಳ್ಳಾಪುರ ಜಿಲ್ಲೆಗೆ ಹೆಚ್.ಎನ್.ವ್ಯಾಲಿ ಯೋಜನೆಯಡಿಯಲ್ಲಿ ಎಷ್ಟು ಕೆರೆಗಳನ್ನು ಆಯ್ಕೆಮಾಡಲಾಗಿದೆ; (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು) | ಚಿಕ್ಕಬಳ್ಳಾಪುರ ಜಿಲ್ಲೆಗೆ ಹೆಚ್.ಎನ್.ವ್ಯಾಲಿ ಯೋಜನೆಯಡಿಯಲ್ಲಿ 44 ಕೆರೆಗಳನ್ನು ಆಯ್ಕೆ ಮಾಡಲಾಗಿದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ | ಈ ಯೋಜನೆಯಡಿಯಲ್ಲಿ ಎಷ್ಟು ಕೆರೆಗಳಿಗೆ ನೀರು ತುಂಬಿಸಲಾಗಿದೆ; ನೀರು ತುಂಬಿಸಲು ಇರುವ ಮಾನದಂಡಗಳೇನು; (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು) | ಈ ಯೋಜನೆಯಡಿಯಲ್ಲಿ 26 ಕೆರೆಗಳಿಗೆ ನೀರನ್ನು ಹರಿಸಲಾಗಿದೆ. ಯೋಜನೆಯಲ್ಲಿ ಪರಿಗಣಿಸಲಾಗಿರುವ ಕೆರೆಗಳಲ್ಲಿ ಸರಣಿಯಲ್ಲಿನ ಮೇಲಿನ ಕೆರೆಯ ಶೇಕಡಾ 50% ನೀರು ತುಂಬಿದ ನಂತರ ಸದರಿ ಕೆರೆಯ ಕೋಡಿಯಲ್ಲಿ ಗೇಟನ್ನು ಅಳವಡಿಸಿ ಸರಣಿಯಲ್ಲಿನ ಕೆಳಗಿನ ಕೆರೆಗಳಿಗೆ ನೀರನ್ನು ಹರಿಸಲಾಗುತ್ತಿರುತ್ತದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |
| ಇ | ಸದರಿ ಯೋಜನೆಯಲ್ಲಿ ಇದುವರೆಗೂ ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಎಷ್ಟು ಕೆರೆಗಳಿಗೆ ನೀರು ತುಂಬಿಸಲಾಗಿದೆ; (ಸಂಪೂರ್ಣ ವಿವರ ಒದಗಿಸುವುದು) | ಸದರಿ ಯೋಜನೆಯಲ್ಲಿ ಇದುವರೆಗೂ ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ 1 ಕೆರೆಗೆ ನೀರನ್ನು ಹರಿಸಲಾಗುತ್ತಿರುತ್ತದೆ. (ಶಿಡ್ಲಘಟ್ಟ ತಾಲ್ಲೂಕಿನ ಅಬ್ಲೂಡು ಕೆರೆಗೆ ನೀರನ್ನು ಹರಿಸಲಾಗುತ್ತಿರುತ್ತದೆ.) |
| ಈ | ಹಾಗಿದ್ದಲ್ಲಿ, ಈ ಯೋಜನೆಯಲ್ಲಿ ಸೇರಿರುವ ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಕೆರೆಗಳಿಗೆ ನೀರು ತುಂಬಿಸಲು ಇನ್ನೂ ಎಷ್ಟು ಕಾಲಾವಕಾಶ ಬೇಕಾಗುತ್ತದೆ; | ಪ್ರಸ್ತುತ ಯೋಜನೆಗೆ ಲಭ್ಯವಾಗಬೇಕಿದ್ದ 210 ಎಂಎಲ್‌ಡಿ ನೀರಿನ ಪರಿಮಾಣದ ಪೈಕಿ 70 ಎಂ.ಎಲ್.ಡಿ. ನೀರು ಮಾತ್ರ ಲಭ್ಯವಾಗುತ್ತಿದೆ. ಹೆಬ್ಬಾಳ ಎಸ್.ಟಿ.ಪಿ ಆವರಣದಲ್ಲಿ ಹೊಸದಾಗಿ ನಿರ್ಮಾಣ ಮಾಡಲಾಗುತ್ತಿರುವ STPಯಿಂದ 100 ಎಂ.ಎಲ್.ಡಿ ನೀರನ್ನು ಮಾರ್ಚ್-2021ರ ಅಂತ್ಯಕ್ಕೆ ನೀಡುವುದಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿರವರು ತಿಳಿಸಿದ್ದು, ಸದರಿ ಪರಿಮಾಣದ ನೀರು ಲಭ್ಯವಾದ ನಂತರದ 6 ತಿಂಗಳುಗಳಲ್ಲಿ ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಕೆರೆಗಳಿಗೆ ನೀರು ತುಂಬಿಸಲಾಗುವುದು. |
| ಉ | ಸಣ್ಣ ನೀರಾವರಿ ಇಲಾಖೆಯ ಕೆರೆಗಳಲ್ಲಿ ಜಾಲಿ ಮರಗಳು ಬೆಳೆದಿರುವುದು ಸರ್ಕಾರದ ಗಮನದಲ್ಲಿದೆಯೇ; | ಹೌದು. |
| ಊ | ಹಾಗಿದ್ದಲ್ಲಿ ಹೆಚ್.ಎನ್.ವ್ಯಾಲಿ ಯೋಜನೆಯಲ್ಲಿ ಆಯ್ಕೆಯಾಗಿರುವ ಕೆರೆಗಳಲ್ಲಿ ಬೆಳೆದಿದ್ದ ಜಾಲಿ ಮರಗಳನ್ನು ಸಂಪೂರ್ಣವಾಗಿ ತೆಗೆಯಲಾಗಿದೆಯೇ; ಈ ಜಾಲಿ ಮರಗಳನ್ನು ತೆಗೆಯದೇ ಇರಲು ಕಾರಣಗಳೇನು? (ವಿವರಗಳನ್ನು ಒದಗಿಸುವುದು) | ಹೆಚ್.ಎನ್.ವ್ಯಾಲಿ ಯೋಜನೆಯಲ್ಲಿ ಆಯ್ಕೆಯಾಗಿರುವ ಕೆರೆಗಳಲ್ಲಿ ಬೆಳೆದಿದ್ದ ಜಾಲಿ ಮರಗಳನ್ನು ಸಂಪೂರ್ಣವಾಗಿ ತೆಗೆಯಲಾಗಿರುವುದಿಲ್ಲ. ಈ ಸಂಬಂಧ ಅರಣ್ಯ ಇಲಾಖೆಗಳೊಂದಿಗೆ ಸತತವಾಗಿ 2017 ರಿಂದ ವ್ಯವಹರಿಸಲಾಗಿದ್ದು ಪ್ರಸ್ತುತ ಮರಗಳ ತೆರವಿಗೆ ಸಂಬಂಧಿಸಿದಂತೆ ಹರಾಜು ಪ್ರಕ್ರಿಯೆ ಪ್ರಗತಿಯಲ್ಲಿರುವುದಾಗಿ ಅರಣ್ಯ ಇಲಾಖಾಧಿಕಾರಿಗಳು ತಿಳಿಸಿರುತ್ತಾರೆ. |

**ಸಂಖ್ಯೆ: ಸನೀಇ 55 ವಿಸವಿ 2021**

**(ಜೆ.ಸಿ ಮಾಧುಸ್ವಾಮಿ)**
ಸಣ್ಣ ನೀರಾವರಿ ಸಚಿವರು.

# ಅನುಬಂಧ-1

**ಹೆಚ್‌ಎನ್ ವ್ಯಾಲಿ ಯೋಜನೆಯಿಂದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ತುಂಬಲಾಗುತ್ತಿರುವ ಕೆರೆಗಳ ತಾಲ್ಲೂಕುವಾರು ವಿವರ**

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಯೋಜನೆಯಲ್ಲಿ ತುಂಬಿಸಲಾಗುವ ಒಟ್ಟು ಕೆರೆಗಳು | ಷರಾ |
|---|---|---|---|---|
| 1 | 2 | 3 | 4 | 5 |
| 1 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 24 | |
| 2 | ಚಿಕ್ಕಬಳ್ಳಾಪುರ | ಶಿಡ್ಲಘಟ್ಟ | 9 | |
| 3 | ಚಿಕ್ಕಬಳ್ಳಾಪುರ | ಗುಡಿಬಂಡೆ | 3 | |
| 4 | ಚಿಕ್ಕಬಳ್ಳಾಪುರ | ಗೌರಿಬಿದನೂರು | 8 | |
| | ಒಟ್ಟು | | 44 | |

# ಅನುಬಂಧ-2

**ಹೆಚ್‌ಎನ್ ವ್ಯಾಲಿ ಯೋಜನೆಯಿಂದ ಕೆರೆಗಳಿಗೆ ನೀರನ್ನು ಹರಿಸಲಾಗುತ್ತಿರುವ ತಾಲ್ಲೂಕುವಾರು ವಿವರ**

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಯೋಜನೆಯಲ್ಲಿ ತುಂಬಿಸಲಾಗುವ ಒಟ್ಟು ಕೆರೆಗಳು | ಯೋಜನೆಯಿಂದ ನೀರನ್ನು ಹರಿಸಲಾಗಿರುವ ಕೆರೆಗಳು | ಷರಾ |
|---|---|---|---|---|---|
| **1** | **2** | **3** | **4** | **5** | **6** |
| 1 | ಬೆಂಗಳೂರು ನಗರ | ಯಲಹಂಕ | 2 | 0 | |
| 2 | ಬೆಂಗಳೂರು ನಗರ | ಬೆಂಗಳೂರು | 10 | 7 | |
| 3 | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ | 9 | 7 | |
| 4 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 24 | 11 | |
| 5 | ಚಿಕ್ಕಬಳ್ಳಾಪುರ | ಶಿಡ್ಲಘಟ್ಟ | 9 | 1 | |
| 6 | ಚಿಕ್ಕಬಳ್ಳಾಪುರ | ಗುಡಿಬಂಡೆ | 3 | 0 | |
| 7 | ಚಿಕ್ಕಬಳ್ಳಾಪುರ | ಗೌರಿಬಿದನೂರು | 8 | 0 | |
| | ಒಟ್ಟು | | **65** | **26** | |

# ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 417
ಸದಸ್ಯರ ಹೆಸರು : ಶ್ರೀ ನಾಗೇಂದ್ರ ಬಿ. (ಬಳ್ಳಾರಿ)
ಉತ್ತರಿಸುವ ದಿನಾಂಕ : 02.02.2021
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ಮೂರು ವರ್ಷಗಳಿಂದ ಬಳ್ಳಾರಿ ಗ್ರಾಮಾಂತರ ಮತಕ್ಷೇತ್ರದಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಡಿಯಲ್ಲಿ ಬರುವ ಯಾವ ಯಾವ ಲೆಕ್ಕಶೀರ್ಷಿಕೆಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಈ ಕಾಮಗಾರಿಗಳನ್ನು ಮಂಜೂರು ಮಾಡಿರುವ ಅನುದಾನ ಎಷ್ಟು; (ವರ್ಷವಾರು, ಕಾಮಗಾರಿವಾರು ಅನುದಾನಗಳ ವಿವರ ನೀಡುವುದು) | ಬಳ್ಳಾರಿ ಗ್ರಾಮಾಂತರ ಮತಕ್ಷೇತ್ರದಲ್ಲಿ ಕರ್ನಾಟಕ ನೀರಾವರಿ ನಿಗಮದಿಂದ ಕಳೆದ 03 ವರ್ಷಗಳಲ್ಲಿ ಕೈಗೊಳ್ಳಲಾದ ಕಾಮಗಾರಿಗಳು, ಲೆಕ್ಕಶೀರ್ಷಿಕೆವಾರು ಮಂಜೂರು ಮಾಡಿರುವ ಅನುದಾನ, ಕಾಮಗಾರಿಗಳ ಪ್ರಸ್ತುತ ಹಂತ ಹಾಗೂ ಕಾಮಗಾರಿಗಳನ್ನು ನಿರ್ವಹಿಸುವ ಏಜೆನ್ಸಿಗಳ ವಿವರಗಳನ್ನು **ಅನುಬಂಧ-01 & ಅನುಬಂಧ-02** ರಲ್ಲಿ ಲಗತ್ತಿಸಿದೆ. |
| ಆ | ಈ ಕ್ಷೇತ್ರದಲ್ಲಿ ಕೈಗೊಂಡಿರುವ ಕಾಮಗಾರಿಗಳು ಪ್ರಸಕ್ತ ಯಾವ ಹಂತದಲ್ಲಿವೆ; ಕಾಮಗಾರಿಗಳನ್ನು ನಿರ್ವಹಿಸುವ ಏಜೆನ್ಸಿಗಳು ಯಾವುವು; (ಕಾಮಗಾರಿಗಳ ವಿವರ, ಏಜೆನ್ಸಿಗಳ ವಿವರಗಳನ್ನು ನೀಡುವುದು) | |
| ಇ | ಸದರಿ ಕಾಮಗಾರಿಗಳನ್ನು ನಿರ್ವಹಿಸಿರುವ ಏಜೆನ್ಸಿಗಳು ಕಾಮಗಾರಿಗಳನ್ನು ನಿಗದಿ ಪಡಿಸಿದ ಕಾಲಮಿತಿಯಲ್ಲಿ ಪೂರ್ಣಗೊಳಿಸಿದೆಯೆ; (ಪೂರ್ಣ ವಿವರಗಳನ್ನು ನೀಡುವುದು) | |
| ಈ | ಪ್ರಸಕ್ತ ಸಾಲಿನಲ್ಲಿ ಬಳ್ಳಾರಿ ಮತಕ್ಷೇತ್ರದಲ್ಲಿ ಇನ್ನು ವಿವಿಧ ಕಾಮಗಾರಿಗಳಿಗೆ ಹೆಚ್ಚುವರಿಯಾಗಿ ಅನುದಾನವನ್ನು ಸರ್ಕಾರ ಮಂಜೂರು ಮಾಡುವುದೇ? | ಬೇಡಿಕೆಯನ್ನು ಆಧರಿಸಿ, ಆದ್ಯತೆ ಹಾಗೂ ಲಭ್ಯತೆಯನ್ನು ಪರಿಗಣಿಸಿ ಬಳ್ಳಾರಿ ಮತಕ್ಷೇತ್ರದ ವಿವಿಧ ಕಾಮಗಾರಿಗಳಿಗೆ ಹೆಚ್ಚುವರಿಯಾಗಿ ಅನುದಾನ ಒದಗಿಸಲು ಪರಿಶೀಲಿಸಲಾಗುವುದು. |

**ಸಂಖ್ಯೆ: ಜಸಂಇ 16 ಎಂಎಲ್ಎ 2021**

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

# ಅನುಬಂಧ-1

4701 Head / Year: 2017-18

| Sl No. | Name of work | Estimated amount in Lakhs | Name of Agency / Contractor | Status of work | Completion of work within due date |
|---|---|---|---|---|---|
| 1 | 2 | 3 | 4 | 5 | 6 |
| | **Major works 4701 2017-18** | | | | |
| 1 | construction of guage room at ch km 1.0, ch km 4.00,ch km 8.00 km 13.1000 and km 24.01 of dist. of RBHLC | 24.10 | C.H.Satyanarayana | work completed | yes |
| 2 | construction of guage room at ch km 8.20, ch km 13.70 & ch km 18.90 km of disty 14. ch km 0.96 & km 6.10 of disty 15, ch km 3.20 of disty 16 and ch km 5.94, km 16.15 & km 25.02 of disty 16A under RBHLC | 27.97 | C.H.Satyanarayana | work completed | yes |
| 3 | construction of guage room at ch km 0.50km of disty 12, ch km 10.00 ,ch km 12.00 of disty 13. under RBHLC and ch km 8.20 & km 13.20 & 15.10 of kuriganuru disty under RBLLC | 20.70 | C.H.Satyanarayana | work completed | yes |
| 4 | PACKAGE-II Providing CC Lining (With/Without Mechanical Paver) including reconstruction of Structures, of Distry-14 in b/w Km 11.45 to 26.10, Structures in b/w km 9.00 to 11.45 & its branches Chaganur from Km 0.60 to 12.00 & its 4L Minor, BD Halli from Km 0.00 to 6.10 & its 3R Minor, Moka from Km 0.00 to 4.00 & its 4R Minor, Banapur from Km 0.00 to 1.60 and Dy-14 Minors 1 L, New 1L, 2 L, 3 L, 4L, 5L, 6 L, 15R, 17L, 17R, 22L, 23L, 24R, Dy-14A from km.0.00 to 1.80, Dy-15 from km.0.00 to 13.80 & its Minors 1L, 2R, 4R, 6L, 7L & Dy-15 sub miors 3LA, 3LB, 2RB, 4RA, 5LA, 5L, 3LC, 6R and Dpo's and Dy-16 from Km 1.18 to 9.72 & its branch Kammarachedu from Km 0.00 to 5.00 & Dy-16 Minors 2L & Dpo's and Dy-16(A) from Km 6.16 to 8.00 & in b/w Km 11.365 to 27.00 & its branches Kuntanal from Km 0.00 to 4.00, Minors of Dy-16(A) 1L, 1R, 2L,2R, 3L, 3R, 4L, 4R, 5L, 5R, 6L, 6R,7L , 8L 9L, and 10L and its Minors Beyond Hagari of 1L, 1LA, 1R, 1RA, 2L 2R, 3L, 3R, 4L,5L, 6L, 7L, 8L,9L, 10L, 11L, 12L, 13L, 14L under RBHLC. (PACKAGE-II) | 17840.32 | N D Waddar and company | work completed | 1st Time extension taken from 11.02.2019 to 31.07.2019 and 2nd time extension taken from 01.08.2019 to 31.05.2020 |
| 5 | Consultancy services for Third party inspection, testing, quality Control, quality assurance & Monitoring and construction supervision for providing CC Lining (With/Without Mechanical Paver) including reconstruction of Structures of, Distributory--12 from Km 6.00 to 10.00 of & its Minors 1R to 23L, Dy-13 from km 0 to 12.00 (Selected reaches) and 15.66 to 19.50 and its Minors1R to 5L, 6L to 9R , 10L to 14L, 15R to 17L, 21L & 22L, 18L to 19R , 20R to 23R and 24R to 28L, 29R to 36L, 37L to 43R & 2R Sub Minors of 23 R under RBHLC. (CONSULTANCY SERVICES PACKAGE-C). | 5067.00 | M/s Bureau veritas(India) Pvt.Ltd.., | work completed | - |

| Sl No. | Name of work | Estimated amount in Lakhs | Name of Agency / Contractor | Status of work | Completion of work within due date |
|---|---|---|---|---|---|
| 1 | 2 | 3 | 4 | 5 | 6 |
| 6 | Consultancy services for Third party inspection, testing, quality Control, quality assurance & Monitoring and construction supervision for providing CC Lining (With/Without Mechanical Paver) including reconstruction of Structures, of Distry-14 in b/w Km 11.45 to 26.10, Structures in b/w km 9.00 to 11.45 & branches of Chaganur from Km 0.60 to 12.00 & its 4L Minor, BD Halli from Km 0.00 to 6.10 & its 3R Minor, Moka from Km 0.00 to 4.00 & its 4R Minor, Banapur from Km 0.00 to 1.60 and Minors 1 L, New 1L, 2 L, 3 L, 4L, 5L, 6 L, 15R, 17L, 17R, 22L, 23L, 24R & Dy-14A from km.0.00 to 1.80 & Dy-15 from km.0.00 to 3.20 & Km 6.00 to 8.00 under RBHLC.(CONSULTANCY PACKAGE-D) | 5904.00 | M/s Bureau veritas(India) Pvt.Ltd.., | work completed | - |
| 7 | Consultancy services for Third party inspection, testing, quality Control, quality assurance & Monitoring and construction supervision for providing CC LiningWith/Without Mechanical Paver) including reconstruction of Structures, Dy-15 from km.3.20 to 6.00 & Km 8.00 to 13.80 & its Minors 1L, 2R, 4R, 6L, 7L & Dy-15 sub miors 3LA, 3LB, 2RB, 4RA, 5LA, 5L, 3LC, 6R and po's6.72 L/s & R/s, Km 6.92 L/s & R/s, Km 7.80 L/s, 7.80 R/s, 8.49 L/s & R/s, Km 13.11 L/s, 9.15 L/s, 9.48 R/s, 9.75 L/s & R/s, Km 10.48 L/s & R/s, 12.15 L/s & R/s, 10.62 L/s, 11.25 R/s, 11.28 L/s, 11.97 R/s and Dy-16 from Km 1.18 to 9.72 & its branch Kammarachedu from Km 0.00 to 5.00 & Minors 2L ,19L/s, & Kammarachedu branch under RBHLC.(CONSULTANCY PACKAGE-E) | 5938.00 | M/s Bureau veritas(India) Pvt.Ltd.., | work completed | - |
| 8 | Consultancy services for Third party inspection, testing, quality Control, quality assurance & Monitoring and construction supervision for providing CC Lining(With/Without Mechanical Paver) including reconstruction of Structures, Dy-16 Po's Km 0.57 R/s, 1.06 R/s, 1.86 L/s & R/s, 2.18 R/s, 2.24 L/s, 3.18 L/s, 3.30 R/s, 3.78 R/s 3.87 L/s, 4.90 R/s, 4.94 L/s,5.84 R/s, 5.93 L/s, 6.75 R/s & L/s, 7.15 L/s & R/s, 8.30 L/s Km 0.00 to 1.40 of 2L Minor, Dy-16(A) from Km 6.16 to 8.00 & in b/w Km 11.365 to 16.50 & Km 17.65 to 30.60 & Kuntanal branch from Km 0.00 to 4.00, Minors of Dy-16(A) 1L, 1R, 2L,2R, 3L, 3R, 4L, 4R, 5L, 5R, 6L, 6R,7L , 8L 9L, and 10L and its Minors Beyond Hagari of 1L, 1LA, 1R, 1RA, 2L 2R, 3L, 3R, 4L,5L, 6L, 7L, 8L,9L, 10L, 11L, 12L, 13L, 14L under RBHLC.(CONSULTANCY PACKAGE-F) | 5967.00 | M/s Bureau veritas(India) Pvt.Ltd.., | work completed | - |
| 9 | Improvement to road from Vakrani camp to sridhargadda village from km 3.5 to 5.60 | 109.00 | V.Veeresh | work completed | yes |
| | | **40898.09** | | | |
| | **SCP WORKS 2017-18** | | | | |
| 1 | Providing CC lining in dry minors of DP-22 including Improvements to structures of RBLLC . | 199.00 | Kankara Venkata Reddy | work completed | yes |
| 2 | Providing RCC drain in SC colony in Amarapur village under D-15 of RBHLC | 10.00 | Gotur Jadeppa | work completed | yes |

| Sl No. | Name of work | Estimated amount in Lakhs | Name of Agency / Contractor | Status of work | Completion of work within due date |
|---|---|---|---|---|---|
| 1 | 2 | 3 | 4 | 5 | 6 |
| 3 | Providing CC Road & RCC Drain SC colony in Asundi under D-15 of RBHLC | 30.00 | B Ramesh | work completed | yes |
| 4 | Construction of CTC to facilitate the approach for SC farmers Km 10.90 & improvements to DP-2 under D-14 of RBHLC (WI 23215) | 20.00 | M.Lokeshwar Reddy | work completed | yes |
| 5 | Construction of CTC to facilitate the approach for SC farmers across Beeranahalla Naia of Distry. No 16A of RBHLC. | 25.00 | Laxmana | work completed | yes |
| 6 | Construction of Road Bridge near Y.Budihal to facilitate the approach for SC farmers across Tolabandihal halla in Y. Budihal to Siddrampur Road of D-16A of RBHLC. | 60.00 | Kankara Venkata Reddy | work completed | yes |
| 7 | Providing CC Lining & construction of CTC in new DP 35 in between Km 0.03 to 0.190 of RBLLC (WI 23191) | 20.00 | H.Siddesha | work completed | yes |
| 8 | Reconstruction of Structures in Pickup under D-12 near Kolgal Village of RBHLC (WI 23192) | 20.00 | H.Siddesha | work completed | yes |
| 9 | Reconstruction of road pipe culvert at Km 0.84 of 3R minor & Restoration of PO's & CD works in 14 minor of BD Halli branch under D-14 of RBHLC | 20.00 | VS Krishna | work completed | yes |
| 10 | Improvements to Chatrahalla Pickup canal under D-15 of RBHLC | 25.00 | K.T. parashuram | work completed | yes |
| 11 | Construction to Shankarbanda pickup canal including structures and Construction of CTC across Gorehalla nala near Shankarabanda village under D-15of RBHLC.(WI 23220) | 25.00 | M.Lokeshwar Reddy | work completed | yes |
| 12 | Construction of Protective wall to Nala at SC Colony in Golla Nagena Halli in Ballari Tq. | 25.00 | K.T. parashuram | work completed | yes |
| | | **479.00** | | | |
| | **TSP works 2017-18** | | | | |
| 1 | Providing CC Road & RCC Drain from Honnurappa House to Makkan canal in ST colony of Rupangudi village in Ballari Tq Dt | 34.00 | Uma Maheshwar Gouda | work completed | yes |
| 2 | Construction of causeway across chagammanahalla & including improvements to approach road to facilitate ST farmers (WI 23227) | 40.00 | M.Lokeshwar Reddy | work completed | yes |
| 3 | Construction of CTC to facilitate the approach for ST farmers of Sirwar village at Km.13.10 of D-14 of RBHLC. (WI 23228) | 16.00 | M.Lokeshwar Reddy | work completed | yes |
| 4 | Improvements to Bevinahalla Pickup canal between 2.00 to 5.00 Km under D-15 of RBHLC. | 10.00 | M.Lokeshwar Reddy | work completed | yes |
| 5 | Improvements to Sridharagadde Pickup & Pickup canal to suppliment tailend ayacut of 2L minor of D-14 of RBHLC. | 10.00 | M.Lokeshwar Reddy | work completed | yes |
| | | **110.00** | | | |

# ಅನುಬಂಧ–1

**4701 Head / Year: 2018-19**

| Sl No. | Name of work | Estimated amount in Lakhs | Nmae of Agency / Contractor | Status of work | Completion of work within due date |
|---|---|---|---|---|---|
| 1 | 2 | 3 | 4 | 5 | 6 |
| | **SCP WORKS 2018-19** | | | | |
| 1 | Improvements of Pipe Outlets, Drops & CD works in 14 minor & 5TE of B.D. Halli Branch under D-14 of RBHLC. | 42.00 | KEDAR GOWDA | work completed | yes |
| 2 | Improvement to Chatralla Pickup Canal in Between 0.00 to 4.00 Km under D-15 of RBHLC | 36.00 | KEDAR GOWDA | work completed | yes |
| 3 | Improvement to Bevinahalla Pickup Canal in Between 0.00 to 5.00 Km under D-15 of RBHLC | 35.00 | N. ERANNA | work completed | yes |
| 4 | Improvements to Head works of Arehalla pickup near Rayapur village under D-16 A of RBHLC | 12.00 | N. ERANNA | work completed | yes |
| 5 | Construction of Road Bridge & Drop @ Km 6.90 of D-14 RBHLC to connect Srinagar colony Ballari City including Improvements to Approach Road. | 65.00 | Karur Anil Kumar (Shanti enterprises) | work completed | yes |
| 6 | Restoration of Drop @ Km 6.70 & Protective Wall @ Km 7.70 of Disty No.14 of RBHLC near Bhamaiah Temple in Ballari City including approach road. | 60.00 | Karur Anil Kumar (Shanti enterprises) | work completed | yes |
| | | **250.00** | | | |
| | **TSP WORKS 2018-19** | | | | |
| 1 | Improvements to Shivapura pickup Canal under D-14of RBHLC. | 20.00 | RAMESH B | work completed | yes |
| 2 | Improvement to Shankarbanda Pickup Canal in Between 0.00 to 5.00 Km under D-15 of RBHLC | 15.00 | J MARIBASAVANA GOWDA | work completed | yes |
| 3 | Construction of CTC & approaches roads & Protective wall in Asundi to Yalpi Road under D-15 of RBHLC. | 10.00 | J MARIBASAVANA GOWDA | work completed | yes |
| 4 | Improvement to Tolamamidi Spring canal under D-16 of RBHLC. | 10.00 | J MARIBASAVANA GOWDA | work completed | yes |
| 5 | Construction of Protective wall in Doddahalla (Beeranahala) near Lingadevanahali under D-16A of RBHLC. | 20.00 | S DODDABASAPA | work completed | yes |
| 6 | Improvements to Distributary No.14 of RBHLC from km 4.30 to 4.50 by constructing protective wall, sopanam & Ramp including approach road U/S & D/S of siruguppa Road | 75.00 | Karur Anil Kumar (Shanti enterprises) | work completed | yes |
| | | **150.00** | | | |

# ಅನುಬಂಧ-1

4701 Head / Year: 2019-20

| Sl No. | Name of work | Estimated amount in lakhs | Nmae of Agency / Contractor | Status of work | Completion of work within due date | Remarks |
|---|---|---|---|---|---|---|
| 1 | 2 | 3 | 4 | 5 | 6 | 7 |
| | **Major works 4701 2019-20** | | | | | |
| 1 | Consultancy Services towards carrying out Reconnaissance Survey Preliminary compendium planning, Preparation of Report on Hydrology, Water Availability, and Cost Estimates based on Design, Drawings and Preparation of Detailed Project Report including LAQ proposals and DTP pertaining to drinking water supply to. 1. Haraginadoni 2. Janekunte village 3.Janekunte Thanda 4. Chellagurki 5.Joladarasi 6.Paramadevanahalli 7.Y.Kaggal 8.K.Veerapura and other Villages including Construction of Bridge cum Barrage across Hagari River near Sindhavala village and Bridge across BeeranaHalla at Lingadevanahalli towards providing essential infrastructures and filling up of tanks in Ballari Rural Constituency in Ballari District.(Work Indent No: 27392 ). | 69.68 | Sri Manjunath Donagoundra M/s Niketana consultancy | DPR submitted to MD office | - | 2019-20ನೇ ಸಾಲಿನ ಆಯವ್ಯಯದಲ್ಲಿ ಬಳ್ಳಾರಿ ಗ್ರಾಮಾಂತರ ಕ್ಷೇತ್ರಕ್ಕೆ ಒಳಪಡುವ ಕೆರೆಗಳನ್ನು ತುಂಬಿಸಿ ಮೂಲಭೂತ ಸೌಕಾರ್ಯಗಳನ್ನು ಒದಗಿಸುವ ಯೋಜನೆಗೆ ರೂ. 60 ಕೋಟಿ ಘೋಷಣೆಯಾಗಿದ್ದು, ಸದರಿ ಯೋಜನೆಯು ವಿಸ್ತೃತ ಯೋಜನಾ ವರದಿಯು ನಿಗಮದ ಅಂದಾಜು ಪರಿಶೀಲನಾ ಸಮಿತಿಯಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ. |
| | | **69.68** | | | | |

# ಅನುಬಂಧ-2

## 2701 Head / Year: 2017-18

| Sl No. | Name of work | Estimated amount in Lakhs | Name of Agency / Contractor | Status of work | Completion of work within due date |
|---|---|---|---|---|---|
| 1 | 2 | 3 | 4 | 5 | 6 |
| | **R & M works 2017-18** | | | | |
| 1 | Repairs to raising main pipe line leakages of Kolur LIS d-13 of RBHLC | 4.00 | B.Ramesh | Work completed | yes |
| 3 | Removing of jungle and silt in intake well, jackwell and in the canal of LIS down stream of Hagari aquaduct @ 9.10Km of D-16A of RBHLC | 1.70 | J.Maribasavana Gouda | Work completed | yes |
| 4 | Repairs to Quarters no.19B,15B,9B & 12B of HLC Irrigation colony and HLC office building at ballari | 5.00 | G.Umamaheshwar | Work completed | yes |
| 5 | Repairs to breached section of canal embackment at KM 21.51 of D-16A under RBHLC | 7.85 | K.M.Pravin Kumar | Work completed | yes |
| 6 | Clearing thick jungle and silt between 0.00 to 5.00 on DP-29 and DP-30 of RBLLC | 1.77 | M.Lokeshwar Reddy | Work completed | yes |
| 7 | Clearing thick jungle and silt between 0.00 to 1.00 on DP-38 and DP-43 of RBLLC | 1.70 | M.Lokeshwar Reddy | Work completed | yes |
| 8 | Filling ruts and pits on service road in between Km 3.00 to 5.00 of D-14 of RBHLC | 2.50 | M.Lokeshwar Reddy | Work completed | yes |
| | | **24.52** | | | |
| | **LIS 2017-18** | | | | |
| 1 | Repairs to 250 KVA Tranformers &( coil winding) including providing Transformer oil and reactor coil of kolur LIS D-13 of RBHLC | 1.43 | M.V.Ranga Reddy | Work completed | yes |
| | | 1.43 | | | |

# ಅನುಬಂಧ-2

**2701 Head / Year: 2018-19**

| Sl No. | Name of work | Estimated amount in Lakhs | Name of Agency/Contractor | status of work | completion of work within due date |
|---|---|---|---|---|---|
| 1 | 2 | 3 | 4 | 5 | 6 |
| | **R & M works 2018-19** | | | | |
| 1 | Removal of jungle & silt in between Km 0.50 to 2.50 & Repairs to Aqueduct at Km 1.95 of D-14 of RBHLC | 9.00 | U.Basavaraj | Work completed | Yes |
| 2 | Removal of jungle & silt in between Km 3.00 to 6.00 of D-14 of RBHLC & Improvements to service Road | 10.00 | D.Thimmappa | Work completed | Yes |
| 3 | Removal of jungle & silt & Improvements to service Road in between Km 6.50 to 8.20 of D-14 of RBHLC & Km 0.00 to 0.60 of Chaganur branch | 10.00 | Kiran Ilkal | Work completed | Yes |
| 4 | Removal of jungle & silt & Improvements to service Road in between Km 8.00 to 11.50 of D-14 of RBHLC | 8.00 | U.Basavaraj | Work completed | Yes |
| 5 | Improvement to Pipe outlets in 1L, 6L & 7L minor under Distributary No-15 of RBHLC. | 4.00 | V.S.Krishna | Work completed | Yes |
| 6 | Removal of jungle & silt & Improvements to PO's & service Road in between Km 0.00 to 1.20 of D-16 of RBHLC | 8.00 | U.Basavaraj | Work completed | Yes |
| 7 | Removal of jungle & silt & Improvements to PO's & service Road in between Km 0.00 to 3.00 of D-16A of RBHLC | 9.00 | V.S.Krishna | Work completed | Yes |
| 8 | Removal of jungle & silt & Improvements to PO's & service Road in between Km 3.00 to 6.00 of D-16A of RBHLC | 9.00 | C.Nagaral | Work completed | Yes |
| 9 | Removal of jungle & silt in between Km 9.10 to 11.365 & Repairs to Aqueduct at Ch:9.10 & 11.365 of D-16A of RBHLC | 8.00 | C.Nagaral | Work completed | Yes |
| 10 | Removal of jungle & silt & Improvements to PO's & service Road in between in between Km 16.50 to 17.65 & Km 21.00 to 22.00 of D-16A of RBHLC | 7.50 | Anand Kumar | Work completed | Yes |

| Sl No. | Name of work | Estimated amount in Lakhs | Name of Agency/Contractor | status of work | completion of work within due date |
|---|---|---|---|---|---|
| 1 | 2 | 3 | 4 | 5 | 6 |
| 11 | Repairs to HLC office building at Ballari | 2.50 | U.Basavaraj | Work completed | Yes |
| 12 | Removal of silt and jungl eincluding improvements to service road in DP-19 of RBLLC. | 1.65 | K.M.Parmeshwarappa | Work completed | Yes |
| 13 | Removal of silt and jungl eincluding improvements to service road in DP-22 of RBLLC. | 2.25 | K.M.Parmeshwarappa | Work completed | Yes |
| 14 | Removal of silt and jungl eincluding improvements to service road in DP-23 to 25 of RBLLC. | 1.99 | K.M.Parmeshwarappa | Work completed | Yes |
| 15 | Removal of silt and jungle including improvements to service road in DP 27 minor of kuriganur Distributary of RBLLC. | 2.65 | K.M.Parmeshwarappa | Work completed | Yes |
| 16 | Removal of silt and jungle including improvements to service road in DP 26 minor of kuriganur Distributary of RBLLC. | 2.10 | K.M.Parmeshwarappa | Work completed | Yes |
| 17 | Removal of silt and jungle in 2L minor of kuriganur Distributary of RBLLC. | 1.95 | J.Maribasavana Gouda | Work completed | Yes |
| 18 | Removal of silt and jungle including improvements to service road in 1R (N) minor of kuriganur Distributary of RBLLC. | 1.95 | K.M.Parmeshwarappa | Work completed | Yes |
| 19 | improvements to Syphon at ch. 2.5 km of Kuriganur distributary of RBLLC. | 3.91 | D.Thimmappa | Work completed | Yes |
| 20 | Removal of silt and jungle in 4LB (o) minor of kuriganur Distributary of RBLLC. | 2.05 | K.M.Parmeshwarappa | Work completed | Yes |
| 21 | Removal of silt and jungle including improvements to service road in DP-28 to DP 31 of RBLLC. | 1.80 | K.M.Parmeshwarappa | Work completed | Yes |
| 22 | Removal of silt and jungle in\ DP 33 dry minors of RBLLC. | 1.61 | K.M.Parmeshwarappa | Work completed | Yes |
| 23 | Removal of silt and jungle including improvements to service road in DP-37 to DP 45 of RBLLC. | 1.62 | K.M.Parmeshwarappa | Work completed | Yes |
| 24 | Improvements ot service road from 0.5 km to 2.50 km in Kuriganur distributary of RBLLC | 2.30 | K.M.Parmeshwarappa | Work completed | Yes |
| 25 | Improvements ot service road from 2.50 km to 4.50 km in Kuriganur distributary of RBLLC | 2.15 | J.Maribasavana Gouda | Work completed | Yes |
| 26 | Removal of silt and jungle including improvements to Structures in Kurgnur Distributaory of RBLLC. | 5.00 | P.Balesab | Work completed | Yes |
| | | 119.98 | | | |

| Sl No. | Name of work | Estimated amount in Lakhs | Name of Agency/Contractor | status of work | completion of work within due date |
|---|---|---|---|---|---|
| 1 | 2 | 3 | 4 | 5 | 6 |
| | **LIS WORKS 2018-19** | | | | |
| 1 | Improvements to raising main and plugging leakages in pipes of Kolur LIS under D-13 of RBHLC | 2.00 | V.S.Krishna | Work completed | Yes |
| 2 | Removal of silt and jungle including improvements to structures in Kolur LIS under D-13 of RBHLC. | 4.00 | M.Lokeshwar Reddy | Work completed | Yes |
| 3 | Repairs to VT pumps & removal of Silt & jungle of lift irrigation scheme on D/S of Hagari aqueduct at km 9.10 of D-16A of RBHLC in Ballari Tq | 7.50 | C.Nagaral | Work completed | Yes |
| | | **13.50** | | | |

# ಅನುಬಂಧ-2

**2701 Head / Year: 2019-20**

| Sl No. | Name of work | Estimated amount in Lakhs | Name of Agency / Contractor | Status of work | Completion of work within due date |
|---|---|---|---|---|---|
| 1 | 2 | 3 | 4 | 5 | 6 |
| | **R & M works 2019-20** | | | | |
| 1 | Removal of Jungle & Silt & Improvements to service road in between Km.0.00 to 1.50 of 4R Minor of Moka Branch, Km.0.00 to 2.90 of 8L Minor of Chagnur Branch, Km.17.00 to 18.30 of Distry No.14 and Devammana Halla Pickup from Km. 0.00 to 2.50 under RBHLC & Removal of Silt in Intake well , Jack well, Repairs to Pumps & Foot valve, U/s of Nala clearence & protective works to L/s Bund in Jalibenchi L.I.S under D-14 of RBHLC.( W.I.No.27506) | 10.35 | N.Raghu | Work completed | yes |
| 2 | Removal of Jungle & Silt & Repairs to PO's & CD works in 2L Minor from Km. 0.00 to 1.50, Repairs to CD works & Improvements to service road in between Km.2.50 to 3.00 of Distry No.14 main & Repairs to C.D works Km.1.10 of 4L minor under D-14 of RBHLC.( W.I.No.27507) | 6.11 | C.Nagaraj | Work completed | yes |
| 3 | Repairs to Lead of Canal of Kuntanal Branch under D-16A near Lingadevanahalli and Repairs to Pumps & Foot valve of Lift Irrigation of D/s of Hagari Aqueduct at Km. 9.10 of D-16A of RBHLC in Ballari Tq.( W.I.No.27509) | 6.37 | H.Amaresh | Work completed | yes |
| 4 | Repairs of Nala in let at 3.00 km in DP-36 of RBLLC, Removal of silt including Repairs to structures in DP 28 to 31, in DP 32 to 35, in DP 36 to 45 of RBLLC ( W.I.No.27511) | 6.19 | Muniyappa | Work completed | yes |
| 5 | Removal of silt and jungle including repairs to control points in Kuriganur Distributary, 1R (O) Minor, 1R (N)Minor, 4LA (N) Minor, 6R Minor and 10R Minor of Kuriganur ( W.I.No.27513) | 8.29 | M.Lokeshwar Reddy | Work completed | yes |
| 6 | Repair of pipe line (Blocking portion) pipe joints and Maintainance of electric motors of Kolur lift irrigation, Removal of silt and jungle from Km 0.00 to 3.00 Km and 3.00 to 6.20 Km of Distributory 12 and 12.00 to 15.00 of Distributary 13 of RBHLC ( W.I.No.27516) | 6.11 | M.Lokeshwar Reddy | Work completed | yes |
| 7 | Reconstuction of collapsed aquaduct at Km 2.60 of 2R Minor under distributry no.15 of RBHLC | 11.03 | Ekantha | Work completed | yes |
| | | **54.45** | | | |

421

# ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 421

ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ)

ಉತ್ತರಿಸಬೇಕಾದ ದಿನಾಂಕ : 02.02.2021

ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ. | 2019-20 ಮತ್ತು 2020-21 ನೇ ಸಾಲಿನಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯ ವಿಶ್ವೇಶ್ವರಯ್ಯ ಜಲ ನಿಗಮದ ವತಿಯಿಂದ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಎಷ್ಟು ಅನುದಾನವನ್ನು ಯಾವ ಯಾವ ಕಾಮಗಾರಿಗಳಿಗೆ ಮಂಜೂರು ಮಾಡಲಾಗಿದೆ; (ಕ್ಷೇತ್ರವಾರು ವಿವರ ನೀಡುವುದು) | ಜಲ ಸಂಪನ್ಮೂಲ ಇಲಾಖೆಯ ವಿಶ್ವೇಶ್ವರಯ್ಯ ಜಲ ನಿಗಮಕ್ಕೆ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ 2019-20 ಹಾಗೂ 2020-21 ನೇ ಸಾಲಿನಲ್ಲಿ ಕ್ರಮವಾಗಿ ರೂ. 31.12 ಕೋಟಿ ಹಾಗೂ ರೂ. 91.78 ಕೋಟಿ ಅನುದಾನ ಹಂಚಿಕೆ ಮಾಡಲಾಗಿರುತ್ತದೆ. 2019-20 ಹಾಗೂ 2020-21ನೇ ಸಾಲಿನಲ್ಲಿ ಸದರಿ ಅನುದಾನಕ್ಕೆ ಅನುಗುಣವಾಗಿ ಅನುಮೋದನೆಯಾಗಿರುವ ಕಾಮಗಾರಿಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ. | ಈ ಅನುದಾನ ಹಂಚಿಕೆಯನ್ನು ಯಾವ ಮಾನದಂಡದ ಆಧಾರದ ಮೇಲೆ ಮಾಡಲಾಗಿದೆ; | ಜಲ ಸಂಪನ್ಮೂಲ ಇಲಾಖೆಗೆ ಪ್ರತಿವರ್ಷ ವಿಶೇಷ ಅಭಿವೃದ್ಧಿ ಯೋಜನೆಯಡಿ ಒದಗಿಸಲಾಗುವ ಅನುದಾನಕ್ಕೆ ವಿಶೇಷ ಅಭಿವೃದ್ಧಿ ಯೋಜನೆಯ ನಿಯಮಾನುಸಾರ ವಿಭಾಗವಾರು ಕಲಬುರಗಿ ಶೇ.40, ಬೆಳಗಾವಿ ಶೇ.20, ಬೆಂಗಳೂರು ಶೇ.25 ಮತ್ತು ಮೈಸೂರು ಶೇ.15 ರಷ್ಟು ಹಂಚಿಕೆ ಮಾಡಿ, ಹಂಚಿಕೆಗನುಗುಣವಾಗಿ ಡಾ\|\| ನಂಜುಂಡಪ್ಪ ವರದಿಯಲ್ಲಿನ ಹಿಂದುಳಿದ, ಅತಿ ಹಿಂದುಳಿದ ಹಾಗೂ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಇಲಾಖೆಯ ಪ್ರಗತಿಯಲ್ಲಿರುವ ಹಾಗೂ ಹೊಸ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳನ್ನು ಗುರುತಿಸಿ, ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಅನುಮೋದನೆ ಪಡೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. |
| ಇ. | ರಾಜ್ಯದಲ್ಲಿಯೇ ಅತಿ ಹಿಂದುಳಿದ ಕ್ಷೇತ್ರವಾದ ಬಾಗೇಪಲ್ಲಿ ಕ್ಷೇತ್ರಕ್ಕೆ ಅನುದಾನ | ವಿಶ್ವೇಶ್ವರಯ್ಯ ಜಲ ನಿಗಮದಡಿಯಲ್ಲಿ ಭದ್ರಾ ಮೇಲ್ದಂಡೆ |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
| --- | --- | --- |
| | ಹಂಚಿಕೆಯನ್ನು ಮಾಡದೇ ಇರಲು ಕಾರಣವೇನು; | ಯೋಜನೆ ಹಾಗೂ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗಳ ವ್ಯಾಪ್ತಿಯಲ್ಲಿನ ಡಾ\|\| ನಂಜುಂಡಪ್ಪ ವರದಿಯಲ್ಲಿನ ಹಿಂದುಳಿದ, ಅತಿ ಹಿಂದುಳಿದ ಹಾಗೂ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.<br>ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಪ್ರಸ್ತುತ, ಬೈರಗೊಂಡ್ಲು ಜಲಾಶಯದವರೆಗೆ ಕಾಮಗಾರಿಗಳನ್ನು ಅನುಷ್ಠಾನಕ್ಕೆ ಕೈಗೆತ್ತಿಕೊಳ್ಳಲಾಗಿದ್ದು, ಈ ವ್ಯಾಪ್ತಿಯಲ್ಲಿರುವ ಹಿಂದುಳಿದ, ಅತಿ ಹಿಂದುಳಿದ ಹಾಗೂ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿನ ಕಾಮಗಾರಿಗಳನ್ನು ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಪರಿಗಣಿಸಲಾಗಿದೆ. ಬೈರಗೊಂಡ್ಲು ಜಲಾಶಯದ ನಂತರದ ಯೋಜನಾ ಕಾಮಗಾರಿಗಳನ್ನು ಕೈಗೆತ್ತಿಕೊಂಡಾಗ ವಿಶೇಷ ಅಭಿವೃದ್ಧಿ ಯೋಜನೆಯ ನಿಯಮಾನುಸಾರ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಬರುವ ಕಾಮಗಾರಿಗಳನ್ನು ಗುರುತಿಸಿ ಅನುದಾನ ಲಭ್ಯತೆ ಹಾಗೂ ಆದ್ಯತೆಗಳಿಗನುಗುಣವಾಗಿ ಕೈಗೆತ್ತಿಕೊಳ್ಳಲಾಗುವುದು. |
| ಈ. | ಈ ಕ್ಷೇತ್ರಕ್ಕೆ ವಿಶೇಷ ಅಭಿವೃದ್ಧಿ ಯೋಜನೆಯಲ್ಲಿ ಅನುದಾನ ಹಂಚಿಕೆಯನ್ನು ಮಾಡಲಾಗುವುದೇ; | |
| ಉ. | ಹಾಗಿದ್ದಲ್ಲಿ, ಎಷ್ಟು ಅನುದಾನವನ್ನು ಯಾವಾಗ ಮಂಜೂರು ಮಾಡಲಾಗುವುದು (ವಿವರ ನೀಡುವುದು) | |

ಜಸಂಇ 02 ಎಂಎಲ್ಎ 2021

